## ಅಧ್ಯಾಯ 8

# ಆರ್ಥಿಕ ಪ್ರವೃತ್ತಿಗಳು

ಒಂದು ಪ್ರದೇಶದ ಆರ್ಥಿಕ ಪರಿಸ್ಥಿತಿಯನ್ನು ತಿಳಿಯಬೇಕಾದರೆ, ಅಲ್ಲಿನ ನೈಸರ್ಗಿಕ ಹಾಗೂ ಆರ್ಥಿಕ ಸಂಪನ್ಮೂಲಗಳು, ಮಾನವಶಕ್ತಿ, ಉದ್ಯೋಗಾವಕಾಶಗಳು, ಜೀವನಮಟ್ಟ, ನಗರೀಕರಣ, ಉಳಿತಾಯದ ಕ್ಷಮತೆ, ಜಿಲ್ಲೆ ಆದಾಯ, ಜಿಲ್ಲಾ ಗ್ರಾಹಕ ಸೂಚ್ಯಂಕ ಮೊದಲಾದವುಗಳನ್ನು ಅಧ್ಯಯನ ಮಾಡಬೇಕು. ಧಾರವಾಡ ಜಿಲ್ಲೆಯು 1950 ರ ವರೆಗೂ ಹೆಚ್ಚಿನ ಮಟ್ಟಿಗೆ ಕೃಷಿ ಪ್ರಧಾನವಾದ ಜಿಲ್ಲೆಯಾಗಿದ್ದು ನಂತರದ ವರ್ಷಗಳಲ್ಲಿ ಕೈಗಾರಿಕೆಗಳು ಹೆಚ್ಚಾಗಿ ಔದ್ಯೋಗೀಕರಣವೂ ಹೆಚ್ಚಾಯಿತು.

ಜಿಲ್ಲೆಯಲ್ಲಿ ಜನಸಂಖ್ಯೆಯಲ್ಲಿ 1901-1991 ಅವಧಿಯಲ್ಲಿ ಆಗಿರುವ ಹೆಚ್ಚಳ ಈ ರೀತಿ ಇದೆ : 1901-12,47,340 ಹಾಗೂ 1991-35,03,150. ಶೇಕಡಾ ಹೆಚ್ಚಳವು 150 ಆಗಿರುತ್ತದೆ. ಜನಸಾಂದ್ರತೆಯಲ್ಲಿ 1961 ರಿಂದ 1991 ರ ಅವಧಿಯಲ್ಲಿ ಆದ ಹೆಚ್ಚಳ 142 ರಿಂದ 255 (ಶೇ. 79.50). ರಾಜ್ಯದ ಜನಸಂದ್ರತೆಗಿಂತ (235) ಜಿಲ್ಲೆಯ ಜನಸಾಂದ್ರತೆ 1992 ರಲ್ಲಿ ಹೆಚ್ಚಿದೆ (255). 1960-61 ರಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಕೆಲಸಗಾರರ ಶೇ.42 ಇದ್ದು 1992-93 ರಲ್ಲಿಯೂ, ಈ ಜನಸಂಖ್ಯೆಯಲ್ಲಿ ಬದಲಾವಣೆ ಆಗಿಲ್ಲ. ಇದೇ ರೀತಿ, ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಬಿತ್ತನೆ ಪ್ರದೇಶದ ವಿಸ್ತೀರ್ಣವೂ ಹೆಚ್ಚಾಗಿಲ್ಲ. ಈ ಅಧ್ಯಾಯದಲ್ಲಿ ಆರ್ಥಿಕವಾಗಿ ಜಿಲ್ಲೆಯಲ್ಲಿ ಪ್ರಭಾವವನ್ನುಂಟು ಮಾಡುವ ವಿಷಯಗಳನ್ನು ಸ್ಥೂಲವಾಗಿ ವಿವರಿಸಲಾಗಿದೆ. 1960-61 ರಿಂದ 1991-92 ರ ಅವಧಿಯ 3 ದಶಕಗಳಲ್ಲಿ ಉಂಟಾಗಿರುವ ಬದಲಾವಣೆಗಳ ಬಗ್ಗೆ ಹೆಚ್ಚಿನ ಒತ್ತು ಕೊಡಲಾಗಿದೆ.

ಜಿಲ್ಲೆಯಲ್ಲಿ ಒಟ್ಟು ಬಿತ್ತನೆ ಪ್ರದೇಶದಲ್ಲಿ, ನಿವ್ವಳ ಬಿತ್ತನೆ ಪ್ರದೇಶ 1960-61 ರಲ್ಲಿ ಶೇ.96 ಇದ್ದಿದ್ದು 90-91 ರ ಹೊತ್ತಿಗೆ ಶೇ.86 ಕ್ಕೆ ಇಳಿದಿತ್ತು. ಅಂದರೆ ಶೇ.10 ರಷ್ಟು ಪ್ರದೇಶದಲ್ಲಿ ಬಿತ್ತನೆ ಮಾಡಲು ಸಾಧ್ಯವಾಗಿದ್ದರೂ ಮಾಡಿರಲಿಲ್ಲ ಎಂಬುದನ್ನು ತಿಳಿಯಬಹುದು. ಆದರೆ ನಿವ್ವಳ ಬಿತ್ತನೆ ಪ್ರದೇಶದಲ್ಲಿ ನಿವ್ವಳ ನೀರಾವರಿಯಾದ ಪ್ರದೇಶ 1900-01 ರಲ್ಲಿ ಶೇ.5.19 ಇದ್ದದ್ದು, 30 ವರ್ಷಗಳ ನಂತರ ಶೇ.15 ಕ್ಕೆ ಏರಿತು. 1970-71 ರಿಂದ 1974-75 ರ ವರೆಗೆ ಜಿಲ್ಲೆಯ ಒಟ್ಟು ಆದಾಯ ಶೇ.50 ಕ್ಕಿಂತಲೂ ಹೆಚ್ಚಾಗಿದೆ. 1960-61 ರಿಂದ 1991-92 ರವರೆಗೆ ಜಿಲ್ಲೆಯಲ್ಲಿನ ವಾರ್ಷಿಕ ತಲಾ ಆದಾಯದಲ್ಲಿ (ಈಗಿನ ದರಗಳಲ್ಲಿ) ಆದ ಬದಲಾವಣೆ ಹೀಗಿದೆ : 1960-61 - 257, 1970-71 - 586, 1975-76 - 820, 1980-81 - 1,288, 1985-86 - 1,904, 1990-91 - 3,705 ಮತ್ತು 1991-92 ರಲ್ಲಿ 5,108. 1960-61 ರಿಂದ 1970-71 ರವರೆಗೆ ತಲಾ ಆದಾಯದಲ್ಲಿ ಶೇ. ಹೆಚ್ಚಳ 128, 1970-71 ರಿಂದ 80-81 ರವರೆಗೆ ಶೇ.120, 1980-81 ರಿಂದ 1990-91 ರ ವರೆಗೆ ಶೇ. ಹೆಚ್ಚಳ 187,

ಮತ್ತು 1990-91ರಿಂದ 1991-92ರಲ್ಲಿ ಶೇ. ಹೆಚ್ಚಳ 38. ಇದರಿಂದ 80-81ರಿಂದ 90-91ರ ದಶಕದಲ್ಲಿ ತಲಾ ಆದಾಯದಲ್ಲಿ ತೀವ್ರ ಹೆಚ್ಚಳ ಇರುವುದು ಕೈಗಾರೀಕರಣ, ಕೃಷಿ ಸಂಪನ್ಮೂಲಗಳ ಹೆಚ್ಚಳ, ಮೊದಲಾದವುಗಳಿಂದ ಎಂದು ಪರಿಗಣಿಸಬಹುದು.

**ಕೋಷ್ಟಕ ಸಂಖ್ಯೆ 8.1 : 1960-61 ರಿಂದ 91-92 ರವರೆಗಿನ ಜಿಲ್ಲೆ ವರಮಾನ ಮತ್ತು ವರಮಾನ ಸೂಚ್ಯಂಕಗಳನ್ನು ತೋರಿಸುವ ಪಟ್ಟಿಯನ್ನು ಇಲ್ಲಿ ಕೊಡಲಾಗಿದೆ.**

| ಕ್ರಮ ಸಂಖ್ಯೆ | ವಿವರ | | 1960-61 | 1970-71 | 1980-81 | 1985-86 | 1990-91 | 1991-92 |
|---|---|---|---|---|---|---|---|---|
| 1 | ಚಾಲ್ತಿ ಬೆಲೆಗಳಲ್ಲಿ ಜಿಲ್ಲಾ ಆದಾಯ | ಲಕ್ಷ ರೂ. | 4,970 | 13,585 | 37,548 | 61,609 | 1,29,162 | 1,22,466 |
| | ತಲಾ ಆದಾಯ | ರೂ. | 257 | 586 | 1,288 | 1,904 | 3,705 | 5,108 |
| 2 | ಸ್ಥಿರ ಬೆಲೆಗಳಲ್ಲಿ (1980-81) ಜಿಲ್ಲೆ ಆದಾಯ | ಲಕ್ಷ ರೂ. | | - | - | 40,667 | 55,663 | 69,017 |
| | ತಲಾ ಆದಾಯ | ರೂ. | - | - | - | 1,257 | 1,597 | 1,949 |
| 3 | ರಾಜ್ಯ ಆದಾಯದಲ್ಲಿ ಜಿಲ್ಲೆ ಆದಾಯದ ಶೇಕಡಾ | | | | | | | |
| | ಚಾಲ್ತಿ ಬೆಲೆಗಳಲ್ಲಿ | | - | - | 6.7 | 6.0 | 6.1 | 6.8 |
| | ಸ್ಥಿರ ಬೆಲೆಗಳಲ್ಲಿ | | - | - | - | 6.0 | 6.1 | 6.7 |
| 4 | ಜಿಲ್ಲೆಯ ಆದಾಯದ ಸಂಖ್ಯೆ ಸೂಚ್ಯಂಕ | | | | | | | |
| | ಚಾಲ್ತಿ ಬೆಲೆಗಳಲ್ಲಿ | | - | - | 100 | 164 | 344 | 482 |
| | ಸ್ಥಿರ ಬೆಲೆಗಳಲ್ಲಿ | | - | - | - | 108 | 148 | 784 |
| 5 | ಜಿಲ್ಲೆಯ ತಲಾ ಆದಾಯದ ಸೂಚ್ಯಂಕ ಸಂಖ್ಯೆ | | | | | | | |
| | ಚಾಲ್ತಿ ಬೆಲೆಗಳಲ್ಲಿ | | - | - | 100 | 148 | 288 | 396 |
| | ಸ್ಥಿರ ಬೆಲೆಗಳಲ್ಲಿ | | - | - | - | 98 | 124 | 151 |

ಆಧಾರ : ಎಸ್ಟಿಮೇಟ್ಸ್ ಆಫ್ ಡಿಸ್ಟ್ರಿಕ್ಟ್ ಇನ್‌ಕಂ ಆಫ್ ಕರ್ನಾಟಕ - ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ. 1994 ಪುಟ 6, 7

ಜಿಲ್ಲೆ ಆದಾಯವು ವಿವಿಧ ಘಟಕಗಳಿಂದ ಸಂದಾಯವಾಗುತ್ತದೆ. 1960-61ರಿಂದ 1991-92ರ ವರೆಗೆ ಕೆಲವು ಘಟಕಗಳಲ್ಲಿಂದ ಆದ ಆದಾಯದ ವಿವರಗಳನ್ನು ಪಟ್ಟಿಯಲ್ಲಿ ಕೊಡಲಾಗಿದೆ.

## ಕೋಷ್ಟಕ 8.2

| ಕ್ರಮ ಸಂಖ್ಯೆ | ಘಟಕ | 1960-61 | 1970-71 | 1980-81 | 1985-86 | 1990-91 | 1991-92 | 1980-81 ರಿಂದ 1991-92 ರವರೆಗೆ ಹೆಚ್ಚಳದ ಶೇಕಡಾ |
|---|---|---|---|---|---|---|---|---|
| | | | | ಲಕ್ಷ ರೂ.ಗಳಲ್ಲಿ | | | | |
| 1 | ಕೃಷಿ | 2,733 | 5,999 | | | | | |
| 2 | ಪಶುಪಾಲನೆ | | | 16,910 | 17,475 | 37,250 | 68,462 | 305 |
| 3 | ಅರಣ್ಯ | 24 | 49 | 513 | 2,274 | 3,836 | 4,656 | 807 |
| 4 | ಮೀನುಗಾರಿಕೆ | 3 | 37 | 47 | 74 | 87 | 289 | 876 |
| 5 | ಗಣಿ | 0.05 | 3.04 | 5 | 19 | 2 | 2 | -40 |
| 6 | ಪ್ರೈಮರಿ ಘಟಕ | - | - | 17,457 | 19,842 | 41,175 | 73,409 | 320 |
| 7 | ಉತ್ಪಾದನೆ | | | | | | | |
| | ಅ) ನೋಂದಣಿಯಾದ | - | - | 2,606 | 6,248 | 13,040 | 14,693 | 464 |
| | ಅ) ನೋಂದಣಿಯಾಗದ | - | - | 2,161 | 3,484 | 7,974 | 11,833 | 448 |
| 8 | ನಿರ್ಮಾಣ (ಕಟ್ಟಡ) | - | - | 1,974 | 4,435 | 8,012 | 10,303 | 422 |
| 9 | ವಿದ್ಯುಚ್ಛಕ್ತಿ, ನೀರು ಸರಬರಾಜು | - | - | 597 | 1,578 | 3,695 | 4,791 | 702 |
| 10 | ರೈಲ್ವೇ | - | - | 107 | 335 | 531 | 597 | 458 |
| 11 | ಸಾರಿಗೆ | - | - | 1,041 | 2,707 | 5,535 | 5,660 | 444 |
| 12 | ದಾಸ್ತಾನು | - | - | 12 | 41 | 81 | 100 | 733 |
| 13 | ಸಂಪರ್ಕ | - | - | 255 | 388 | 1,279 | 1,630 | 540 |
| 14 | ವ್ಯಾಪಾರ, ಹೋಟೆಲು ಉದ್ಯಮ | - | - | 3,979 | 6,772 | 16,891 | 23,049 | 480 |
| 15 | ವ್ಯವಹಾರ | - | - | 1,390 | 3,965 | 7,772 | 10,082 | 625 |
| 16 | ಸಾರ್ವಜನಿಕ ಆಡಳಿತ | 226 | 333 | 1,433 | 3,161 | 7.013 | 6,425 | 352 |
| 17 | ಇತರೆ ಸೇವೆಗಳು | - | - | 2,269 | 4,927 | 9,953 | 11,522 | 407 |

ಆಧಾರ : ಎಸ್ಟಿಮೇಟ್ಸ್ ಆಫ್ ಡಿಸ್ಟ್ರಿಕ್ಟ್ ಇನ್‌ಕಂ ಆಫ್ ಕರ್ನಾಟಕ, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ - 1994 (ಪುಟ 11, 12)

## ಕೋಷ್ಟಕ 8.3 : ಧಾರವಾಡ ಜಿಲ್ಲೆಯಲ್ಲಿ ವಿವಿಧ ಘಟಕಗಳಿಂದ ಆದಾಯ ಸ್ಥಿರ ಬೆಲೆಗಳಲ್ಲಿ (1980-81 ದರ)

| ಕ್ರಮ ಸಂಖ್ಯೆ | ಘಟಕ | 1985-86 | 1990-91 | (ಲಕ್ಷ ರೂ.ಗಳಲ್ಲಿ) 1991-92 |
|---|---|---|---|---|
| 1 | ಕೃಷಿ ಮತ್ತು ಪಶುಪಾಲನೆ | 13,207 | 16,054 | 25,609 |
| 2 | ಅರಣ್ಯ | 482 | 508 | 498 |
| 3 | ಮೀನುಗಾರಿಕೆ | 56 | 61 | 185 |

| ಕ್ರಮ ಸಂಖ್ಯೆ | ಘಟಕ | 1985-86 | 1990-91 | (ಲಕ್ಷ ರೂಗಳಲ್ಲಿ) 1991-92 |
|---|---|---|---|---|
| 4 | ಗಣಿ ಕೆಲಸಗಳು | 9 | - | 1 |
| 5 | ವ್ಯವಸಾಯ | 13,754 | 16,623 | 26,293 |
| 6 | ಉತ್ಪಾದನೆ | | | |
| | ಅ) ನೋಂದಣಿಯಾದ | 3,901 | 6,740 | 7,146 |
| | ಆ) ನೋಂದಣಿಯಾಗದ | 2,393 | 3,392 | 4,584 |
| 7 | ನಿರ್ಮಾಣ (ಕಟ್ಟಡ) | 2,570 | 2,635 | 2,865 |
| 8 | ವಿದ್ಯುಚ್ಛಕ್ತಿ, ನೀರು ಸರಬರಾಜು | 853 | 858 | 905 |
| 9 | ರೈಲ್ವೇ | 126 | 138 | 146 |
| 10 | ಸಾರಿಗೆ | 1,438 | 1,968 | 1,820 |
| 11 | ದಾಸ್ತಾನು | 22 | 33 | 38 |
| 12 | ಸಂಪರ್ಕ | 253 | 276 | 325 |
| 13 | ವ್ಯಾಪಾರ, ಹೋಟೆಲು ಉದ್ಯಮ | 4,923 | 8,348 | 9,792 |
| 14 | ವ್ಯವಹಾರ | 2,600 | 3,454 | 4,385 |
| 15 | ಸಾರ್ವಜನಿಕ ಆಡಳಿತ | 2,040 | 2,959 | 2,609 |
| 16 | ಇತರೆ ಸೇವೆಗಳು | 3,206 | 4,360 | 4,520 |

ಆಧಾರ : (ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ), ಎಸ್ಟಿಮೇಟ್ಸ್ ಆಫ್ ಡಿಸ್ಟ್ರಿಕ್ಟ್
ಇನ್‌ಕಂ ಆಫ್ ಕರ್ನಾಟಕ 1994 (ಪುಟ 15, 16)

ಜಿಲ್ಲಾ ಆದಾಯ ಎಂದರೆ, ಜಿಲ್ಲೆಯಲ್ಲಿನ ಎಲ್ಲಾ ಬಗೆಯ ಸೇವೆಗಳ, ವಸ್ತುಗಳ ಆರ್ಥಿಕ ಮೌಲ್ಯದ ಮೊತ್ತ ಎಂದು ಪರಿಗಣಿಸಲಾಗಿದೆ. (ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ). ಈ ರೀತಿಯ ಆದಾಯ ಜಿಲ್ಲೆಯಲ್ಲಿನ ಅಥವಾ ಹೊರಗಿನ ವ್ಯಕ್ತಿಗಳಿಂದಲೂ ಆಗಿರಬಹುದು. ಜಿಲ್ಲೆಯಲ್ಲಿನ ಆದಾಯವನ್ನು ಗಣಿಸಲು ಬೇಕಾದ ಪ್ರಾಥಮಿಕ ಅಂಕಿ ಅಂಶಗಳು ದೊರೆಯುವುದು ದುರ್ಲಭ. ಈ ಕಾರಣಗಳಿಂದ, ರಾಜ್ಯಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಕೆಲವೆಡೆ, ಜಿಲ್ಲೆಗೂ ಅನ್ವಯಿಸಲಾಗಿದೆ. 1991-92 ರಲ್ಲಿ ರಾಜ್ಯದ ಆದಾಯವು ಹೆಚ್ಚಿನ ಮಟ್ಟಿಗೆ ಬೆಂಗಳೂರು, ಬಿಜಾಪುರ, ಬೆಳಗಾವಿ, ದಕ್ಷಿಣ ಕನ್ನಡ, ಧಾರವಾಡ ಮತ್ತು ಮೈಸೂರು ಜಿಲ್ಲೆಗಳಿಂದಲೇ ಲಭ್ಯವಾಗಿತ್ತೆಂದು ಹೇಳಲಾಗಿದೆ. ಮತ್ತು ಚಾಲ್ತಿ ದರಗಳಲ್ಲಿ ಕೊಡಗು ಜಿಲ್ಲೆಯ ತಲಾ ಆದಾಯ ರೂ.10,810 (ಅತಿ ಹೆಚ್ಚು) ಇದ್ದು, ಬೀದರ ಜಿಲ್ಲೆಯ ತಲಾ ಆದಾಯ ರೂ.3,725 (ಅತಿ ಕಡಿಮೆ) ಇದ್ದಿತು. ಧಾರವಾಡ ಜಿಲ್ಲೆಯಲ್ಲಿ ತಲಾ ಆದಾಯ ರೂ.5,108 ಇದ್ದು 10 ನೇ ಸ್ಥಾನದಲ್ಲಿದೆ. ಜಿಲ್ಲೆಯಲ್ಲಿ ಜಿಲ್ಲೆ ಆದಾಯ ಮತ್ತು ತಲಾ ಜಿಲ್ಲೆ ಆದಾಯದ ಬೆಳೆಯುವ ದರ 1980-81 ರಿಂದ 1990-91 ರವರೆಗೆ ಹೀಗಿದೆ.

| | | |
|---|---|---|
| ಜಿಲ್ಲೆ ಆದಾಯ | ವಾರ್ಷಿಕ ಸರಾಸರಿ | ಶೇ.7.6 |
| ಜಿಲ್ಲೆ ತಲಾ ಆದಾಯ | " | ಶೇ.4.7 |

ಜಿಲ್ಲೆ ಆದಾಯದ ಹೆಚ್ಚಳ ದರವು ಬೆಂಗಳೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ 11.4 ಇದ್ದು, ಬೀದರ ಜಿಲ್ಲೆಯಲ್ಲಿ ಅತಿ ಕಡಿಮೆ ಇದ್ದಿತು (3.8). ಧಾರವಾಡವು 7 ನೇ ಸ್ಥಾನದಲ್ಲಿದೆ. ಹಾಗೆಯೇ 1980-81 ರಿಂದ 1991-92 ರ ಅವಧಿಯಲ್ಲಿ ಜಿಲ್ಲೆ ತಲಾ ವರಮಾನವು ಬೆಳಗಾವಿ ಜಿಲ್ಲೆಯಲ್ಲಿ ಅಧಿಕ ಇದ್ದು (7.3) ಕೊಡಗು ಜಿಲ್ಲೆಯಲ್ಲಿ ಕಡಿಮೆ ಇದ್ದಿತು (1.7). ಧಾರವಾಡ ಜಿಲ್ಲೆಯು

4 ನೇ ಸ್ಥಾನದಲ್ಲಿದ್ದಿತು. ಜಿಲ್ಲೆಯ ಆದಾಯವು 1980-81 ರಿಂದ 1991-92 ರ ದಶಕದಲ್ಲಿ ಚಾಲ್ತಿ ಬೆಲೆಗಳಲ್ಲಿ ಶೇ.226 ರಷ್ಟು ಹೆಚ್ಚಳ, ತಲಾ ಆದಾಯದಲ್ಲಿ ಶೇ.296 ರಷ್ಟು ಹೆಚ್ಚಳ, ಕಂಡು ಬರುತ್ತದೆ. ಎಲ್ಲಾ ಜಿಲ್ಲೆಗಳಲ್ಲಿಯೂ ಜಿಲ್ಲೆಯ ಆದಾಯವು ಒಂದೇ ಸಮನಾಗಿರದೆ ಕೆಲವು ಜಿಲ್ಲೆಗಳಿಂದ ಹೆಚ್ಚು ಆದಾಯವಿದ್ದು, ಕೆಲವು ಜಿಲ್ಲೆಗಳಲ್ಲಿ ಆದಾಯ ಕಡಿಮೆ ಇದೆ. ಆದರೆ ರಾಜ್ಯ ಆದಾಯವನ್ನು ಗಮನಿಸಿದಾಗ ಜಿಲ್ಲೆಯ ಆದಾಯದ ಶೇಕಡಾ ಪ್ರಮಾಣದಲ್ಲಿ ಹೆಚ್ಚಿನ ಬದಲಾವಣೆ ಕಾಣಿಸಿಲ್ಲ. ಯೋಜನೆಗಳಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಜಿಲ್ಲೆಯಲ್ಲಿ 87-88 ರಿಂದ 90-91 ರವರೆಗೆ ನೀಡಿದ ಅನುದಾನಗಳ ವಿವರವನ್ನು ಪಟ್ಟಿಯಲ್ಲಿ ಕೊಟ್ಟಿದೆ. ಈ ಅವಧಿಯಲ್ಲಿ ಸಹಕಾರ ವಲಯದಲ್ಲಿ ಶೇ.577 ರಷ್ಟು ಹೆಚ್ಚಳ, ಸಣ್ಣ ನೀರಾವರಿಯಲ್ಲಿ ಶೇ.483.95 ರಷ್ಟು ಹೆಚ್ಚಳ, ಮೀನುಗಾರಿಕೆ ವಲಯದಲ್ಲಿ ಶೇ.273 ರಷ್ಟು ಹೆಚ್ಚಳ ಮತ್ತು ಕುಟುಂಬ ಕಲ್ಯಾಣ ವಲಯದಲ್ಲಿ ಶೇ.3.9 ಹೆಚ್ಚಳ ಮಾತ್ರ ಇದ್ದಿತು. ಹಾಗೆಯೇ ಪೌಷ್ಟಿಕ ಆಹಾರ ವಲಯದಲ್ಲಿ ಶೇ.69.84 ಕಡಿಮೆ, ಗ್ರಾಮಾಂತರ ನೀರು ಪೂರೈಕೆ ವಲಯದಲ್ಲಿ ಶೇ.16.28 ರಷ್ಟು ಕಡಿಮೆ ಅನುದಾನ ಇದ್ದಿತು. ಈ ದಿಸೆಯಲ್ಲಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ಮೇಲೆ ಸರ್ಕಾರದ ಕೆಲವು ಯೋಜನೆಗಳ ವಿವಿಧ ಘಟಕಗಳಲ್ಲಿ ಪ್ರಗತಿಯನ್ನು ಸಾಧಿಸಲು ನೆರವಾಗಿವೆ. ಆ ಯೋಜನೆಗಳು ಹೀಗಿವೆ. (ಪುಟ 504)

**ಕೋಷ್ಟಕ 8.4 : ಧಾರವಾಡದಲ್ಲಿ ಜಿಲ್ಲೆಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಯೋಜನೆಯಲ್ಲಿ ವಲಯವಾರು ಖರ್ಚಾದ ಅನುದಾನದ ವಿವರ. (1987-88 ರಿಂದ 1990-91)**

| ಕ್ರಸಂ. | ವಲಯ | 87-88 ಖರ್ಚಾದ ಅನುದಾನ | 88-89 ಖರ್ಚಾದ ಅನುದಾನ | 89-90 ಖರ್ಚಾದ ಅನುದಾನ | 90-91 ಖರ್ಚಾದ ಅನುದಾನ | ನಾಲ್ಕು ವರ್ಷಗಳ ಅವಧಿಯಲ್ಲಿ ಉಂಟಾದ ಹೆಚ್ಚಳ |
|---|---|---|---|---|---|---|
| | | (ಲಕ್ಷ ರೂ.ಗಳಲ್ಲಿ) | | | | |
| 1 | 2 | 3 | 4 | 5 | 6 | 7 |
| 1 | ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ | 101.33 | 98.90 | 161.14 | 150.11 | + 48.13 |
| 2 | ವಯಸ್ಕರ ಶಿಕ್ಷಣ | 14.73 | 11.81 | 16.46 | 14.53 | - |
| 3 | ಕ್ರೀಡೆ ಮತ್ತು ಯುವಜನ ಸೇವೆ | 0.50 | 0.50 | 2.35 | 2.40 | + 380 |
| 4 | ವೈದ್ಯಕೀಯ ಮತ್ತು ಜನಾರೋಗ್ಯ | 57.93 | 48.44 | 68.21 | 82.43 | + 42.30 |
| 5 | ಭಾರತೀಯ ವೈದ್ಯಪದ್ಧತಿ | 0.26 | - | - | - | - |
| 6 | ಕುಟುಂಬ ಕಲ್ಯಾಣ | 172.12 | 154.04 | 167.09 | 178.93 | + 3.9 |
| 7 | ಗ್ರಾಮಾಂತರ ನೀರು ಪೂರೈಕೆ | 309.07 | 400.20 | 348.17 | 258.74 | - 16.28 |
| 8 | ಗೃಹ ನಿರ್ಮಾಣ | 115.46 | 50.50 | - | 12.00 | - |
| 9 | ಪ.ಜಾತಿ, ಪ.ಪಂಗಡದ ಕಲ್ಯಾಣ | 18.42 | 34.04 | 37.14 | 39.90 | + 116.61 |
| 10 | ಹಿಂದುಳಿದ ವರ್ಗಗಳ ಕಲ್ಯಾಣ | 49.02 | 23.84 | 27.32 | 32.70 | - 33.29 |
| 11 | ಪರಿಶಿಷ್ಟ ಜಾತಿಯವರಿಗೆ ವಿಶೇಷ ಘಟಕ ಯೋಜನೆ | 56.73 | 121.71 | 121.70 | 135.80 | + 139.37 |
| 12 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 82.08 | 94.22 | 97.25 | 109.47 | 33.36 |
| 13 | ಪೌಷ್ಟಿಕ ಆಹಾರ | 110.01 | 53.22 | 45.02 | 33.17 | - 69.84 |
| 14 | ವ್ಯವಸಾಯ | 143.37 | 143.28 | 123.17 | 140.09 | - 2.28 |

| 1 | 2 | 3 | 4 | 5 | 6 | 7 |
|---|---|---|---|---|---|---|
| 15 | ತೋಟಗಾರಿಕೆ | 7.46 | 13.71 | 18.32 | 22.62 | 203.21 |
| 16 | ಭೂಸಾರ ಸಂರಕ್ಷಣೆ | 137.81 | 64.39 | 79.42 | 69.33 | -49.69 |
| 17 | ಪಶುಸಂಗೋಪನೆ | 17.74 | 31.30 | 36.20 | 65.58 | 269.67 |
| 18 | ಮೀನುಗಾರಿಕೆ | 2.15 | 9.17 | 11.82 | 8.02 | 273.02 |
| 19 | ಅರಣ್ಯ | 118.56 | 98.59 | 118.36 | 117.90 | -- |
| 20 | ಸಹಕಾರ | 2.31 | 124.52 | 169.92 | 15.64 | 577.05 |
| 21 | ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗ | 1080.30 | 1388.10 | 1346.81 | 1424.81 | 31.89 |
| 22 | ಸಣ್ಣ ನೀರಾವರಿ | 4.05 | 14.29 | 19.50 | 23.65 | 483.95 |
| 23 | ರೇಷ್ಮೆ ವ್ಯವಸಾಯ | 29.23 | 37.79 | 39.25 | 52.88 | 80.91 |
| 24 | ಗ್ರಾಮೀಣ ಮತ್ತು ಸಣ್ಣ ಉದ್ಯಮ | 40.75 | 27.67 | 34.68 | 31.53 | -22.6 |
| 25 | ರಸ್ತೆ ಮತ್ತು ಸೇತುವೆ | 38.88 | 103.13 | 115.61 | 118.84 | 205.65 |
| 26 | ಜಿಲ್ಲಾ ಮಟ್ಟದ ಉಪ ಯೋಜನೆ | 35.97 | - | 18.94 | 16.62 | 53.97 |

ಆಧಾರ : ಜಿಲ್ಲಾ ಪರಿಷತ್ತಿನ ವರದಿ

(1) **ಟ್ರೈಸೆಂ ಯೋಜನೆ :** ಈ ಯೋಜನೆಯಲ್ಲಿ ಗ್ರಾಮೀಣ ಯುವಕ ಯುವತಿಯರಿಗೆ ಸ್ವಯಂ ಉದ್ಯೋಗಕ್ಕಾಗಿ ತರಬೇತಿ ನೀಡಲಾಗುವುದು. ಇದು.ಐ.ಆರ್.ಡಿ.ಪಿ.(ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ) ಯೋಜನೆಯ ಒಂದು ಅಂಗವಾಗಿದ್ದು, 18-35 ವಯೋಮಿತಿಯಲ್ಲಿರುವ, ಮತ್ತು ಬಡತನ ರೇಖೆಯಿಂದ ಕೆಳಮಟ್ಟದಲ್ಲಿರುವವರಿಗೆ, ವಿವಿಧ ಕಸಬುಗಳಲ್ಲಿ, ತಾಂತ್ರಿಕ ಜ್ಞಾನದಲ್ಲಿ ತರಬೇತಿ ನೀಡಿ, ತರಬೇತಿ ನಂತರ ತಮ್ಮ ಸ್ಥಳದಲ್ಲಿಯೇ ಸ್ವಯಂ ಉದ್ಯೋಗದಲ್ಲಿ ತೊಡಗಲು ಅನುಕೂಲ ಮಾಡಿಕೊಡುವ ಉದ್ದೇಶದ್ದಾಗಿರುತ್ತದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ 3ರಿಂದ 9ತಿಂಗಳ ತರಬೇತಿ, 300ರೂ. ನಿರ್ವಹಣ ವೇತನ ನೀಡಲಾಗುವುದು. 1992-93 ರಲ್ಲಿ ಈ ಯೋಜನೆಯಲ್ಲಿ 1,375 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ ಮತ್ತು ರೂ.37.38 ಲಕ್ಷ ರೂ. ಖರ್ಚು ಮಾಡಲಾಗಿದೆ.

(2) **ಅತಿ ಸಣ್ಣ ಕೈಗಾರಿಕೆಗಳಿಗೆ ಬೀಜ ಧನ ಸಹಾಯ ಯೋಜನೆ :** ಪ್ರತಿಯೊಬ್ಬ ಕೈಗಾರಿಕೋದ್ಯಮಿ ಕೈಗಾರಿಕೆ ಉದ್ಯಮ ಕೈಗೊಳ್ಳಲು ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಲ್ಲಿ ಸಾಲಕ್ಕಾಗಿ ಅರ್ಜಿ ಸಲ್ಲಿಸಿದಾಗ, ಆ ಸಂಸ್ಥೆಯವರು ಒಟ್ಟು ಯೋಜನಾ ವೆಚ್ಚದ ಶೇ.17.5 ಅಥವಾ 25 ರವರೆಗೆ ಅರ್ಜಿದಾರರು ತಮ್ಮ ಸ್ವಂತ ಪಾಲು ಹಣವನ್ನು ತೊಡಗಿಸಲು ಸೂಚಿಸುತ್ತಾರೆ. ಆದರೆ ಕೆಲವೊಂದು ಉದ್ದಿಮೆಗಳು ಇತರೆ ಎಲ್ಲಾ ಅರ್ಹತೆಗಳು ಮತ್ತು ಅನುಭವವನ್ನು ಹೊಂದಿದ್ದರೂ, ತಮ್ಮ ಪಾಲನ್ನು ಕೊಡಲು ಸಾಧ್ಯವಾಗುವುದಿಲ್ಲ. ಅಂತಹ ಸಮಯದಲ್ಲಿ ಕೊರತೆ ಬಿದ್ದ ಹಣವನ್ನು ಸರ್ಕಾರದಿಂದ ಬೀಜಧನ ಸಹಾಯ (ಸಾಲ) ರೂಪದಲ್ಲಿ ಭರಿಸಲಾಗುವುದು. ಈ ಯೋಜನೆಯು ಅತಿ ಚಿಕ್ಕ ಘಟಕಗಳಿಗೆ ಅನ್ವಯವಾಗುತ್ತದೆ. ಹಾಗೆಂದರೆ, 1971 ರ ಜನಗಣತಿಯ ಪ್ರಕಾರ ಜನಸಂಖ್ಯೆ ಒಂದು ಲಕ್ಷದೊಳಗೆ ಇರಬೇಕು ಮತ್ತು ಯಂತ್ರೋಪಕರಣಗಳ ಒಟ್ಟು ಬೆಲೆ ರೂ.2.00 ಲಕ್ಷದೊಳಗಿರಬೇಕು.

(3) **ಕುಶಲ ಕರ್ಮಿಗಳಿಗೆ ಬಡ್ಡಿ ಅನುದಾನ :** ಕುಶಲಕರ್ಮಿಗಳಿಗೆ ವಾಣಿಜ್ಯ ಬ್ಯಾಂಕುಗಳಿಂದ, ಹಣಕಾಸು ಸಂಸ್ಥೆಗಳಿಂದ ಸಂಯುಕ್ತ ನೆರವನ್ನು ಪಡೆದವರು ಇಲಾಖೆಯಿಂದ ತರಬೇತಿ ಪಡೆದ ಅಭ್ಯರ್ಥಿಗಳು, ಆನುವಂಶಿಕ ಕಸುಬುದಾರರು ಪಡೆದ ಸಂಯುಕ್ತ ಸಾಲದ ಮೇಲೆ ಕೊಡುವ ಬಡ್ಡಿಯ ಶೇ. 7 ಕ್ಕಿಂತ ಹೆಚ್ಚಾಗಿದ್ದಲ್ಲಿ ಗರಿಷ್ಟ ಶೇ.5 ರ ಮಿತಿಯಲ್ಲಿ ಅನುದಾನವನ್ನು 3 ವರ್ಷಗಳವರೆಗೆ ಕೊಡಲು ಅವಕಾಶವಿರುತ್ತದೆ.

(4) **ವಿಶೇಷ ಘಟಕ ಯೋಜನೆ :** ಈ ಯೋಜನೆಯು ಪರಿಶಿಷ್ಟ ಜಾತಿಯವರಿಗೆ ಮಾತ್ರ ಅನ್ವಯವಾಗುವುದು. ಪರಿಶಿಷ್ಟ ಜಾತಿಯವರಿಗೆ ತರಬೇತಿ ನೀಡುವುದು ಗರಿಷ್ಟ 1000 ರೂ.ಗಳ ಮೌಲ್ಯದ ಉಚಿತ ಉಪಕರಣಗಳನ್ನು ಪೂರೈಸುವುದು, ಮಾಸಿಕ 250-00 ನಿರ್ವಹಣಾ ವೇತನ ಕೊಡುವುದು.

(5) **ಜೇನು ಕೃಷಿ ಅಭಿವೃದ್ಧಿ ಯೋಜನೆ :** ಗ್ರಾಮೀಣ ಪ್ರದೇಶದ ಯುವಜನರಿಗೆ 2 ತಿಂಗಳ ತರಬೇತಿ ನೀಡಿ ಮಾಸಿಕ 200 ರೂ. ನಿರ್ವಹಣಾ ವೇತನ ನೀಡುವುದು. ಮತ್ತು ತರಬೇತಿ ಮುಗಿದ ನಂತರ ಶೇ.50ರ ರಿಯಾಯಿತಿಯಲ್ಲಿ ಜೇನು ಕೃಷಿ ಸಲಕರಣೆಗಳನ್ನು ಒದಗಿಸುವುದು.

(6) **ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ :** ಈ ಯೋಜನೆಯನ್ವಯ ಧಾರವಾಡ ತಾಲೂಕಿನ ಜಲಾನಯನ ಪ್ರದೇಶದ ಆರ್ಥಿಕವಾಗಿ ಹಿಂದುಳಿದ ಫಲಾನುಭವಿಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ರೂ.200 ಮಾಸಿಕ ನಿರ್ವಹಣಾ ವೇತನದೊಂದಿಗೆ ನಿರ್ದಿಷ್ಟ ಕಸುಬುಗಳಲ್ಲಿ ತರಬೇತಿ ಕೊಡುವುದು.

(7) **ಕೈಮಗ್ಗ ನೇಕಾರರಿಗೆ ತರಬೇತಿ :** ಕೇಂದ್ರ ಸರ್ಕಾರ ಪುರಸ್ಕೃತ ಯೋಜನೆಯನ್ವಯ ನೇಕಾರ ಸಹಕಾರಿ ಸಂಘಗಳಲ್ಲಿರುವ ನೇಕಾರರ ಸಂಖ್ಯೆಯನ್ನು ಹೆಚ್ಚಿಸುವುದು, ಹಾಗೂ ಸುಧಾರಿತ ಮಗ್ಗಗಳಲ್ಲಿ ನೇಯಲು ತರಬೇತಿ ನೀಡಿ ಬಟ್ಟೆ ನೇಯುವುದು, ಅಭ್ಯರ್ಥಿಗಳಿಗೆ ಮಾಸಿಕ 250 ರೂ. ನಿರ್ವಹಣೆ ವೇತನ ಹಾಗೂ ತರಬೇತಿ ನೀಡುವವರಿಗೆ 500 ರೂ. ಗೌರವಧನ ನೀಡುವುದು.

(8) **ಸಾಮೂಹಿಕ ನೇಯ್ಗೆ ಕೇಂದ್ರಗಳು :** ಕೈಮಗ್ಗ ಸಹಕಾರಿ ಸಂಘಗಳಿಗೆ ಕಟ್ಟಡ ಉಪಕರಣಗೊಳ್ಳಲು ಸಹಾಯ ಧನ, ಮತ್ತು ದುಡಿಯುವ ಬಂಡವಾಳಗಳನ್ನು ಕೊಡುವುದು.

(9) **ಸುಧಾರಿತ ಮಗ್ಗಗಳು ಹಾಗೂ ಉಪಕರಣಗಳ ಪೂರೈಕೆ :** ಈ ಯೋಜನೆಯು ಕೇಂದ್ರ ಪುರಸ್ಕೃತ ಮತ್ತು ನೇಕಾರರಿಗೆ ಸುಧಾರಿತ ಮಗ್ಗ ಮತ್ತು ಸಲಕರಣೆಗಳನ್ನು ಕೊಳ್ಳಲು ಸಾಲ ಕೊಡುವುದು ಇದರ ಉದ್ದೇಶ.

(10) **ಬಣ್ಣದ ಮನೆ :** ಬಣ್ಣದ ಮನೆಗೆ ಬೇಕಾದ ಕಟ್ಟಡ ಕಟ್ಟಲು ಸಾಲ, ಸಲಕರಣೆ ಕೊಳ್ಳಲು ಸಾಲ, ಆಡಳಿತ ವೆಚ್ಚ ಮತ್ತು ದುಡಿಯುವ ಬಂಡವಾಳವನ್ನು ನೀಡುವುದು ಈ ಯೋಜನೆಯ ಉದ್ದೇಶ.

(11) **ಸಾಮೂಹಿಕ ವಸತಿ ಕಾಲೋನಿ :** ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ಕೈಮಗ್ಗ ನೇಕಾರ ಸಹಕಾರಿ ಸಂಘಗಳಲ್ಲಿರುವ ಸದಸ್ಯರುಗಳಿಗೆ ಸಹಕಾರ ಸಂಘದ ಮೂಲಕ ಸಾಮೂಹಿಕ ವಸತಿ ಕಾಲೋನಿಗಳನ್ನು ಮಂಜೂರು ಮಾಡುವುದು, ಇದರ ಸೌಲಭ್ಯಗಳು.

(12) **ಕೈಮಗ್ಗ ನೇಕಾರ ಸಹಕಾರಿ ಸಂಘಗಳಿಗೆ ಉಸ್ತುವಾರಿ ಅನುದಾನ :** ಕೇಂದ್ರ ಪುರಸ್ಕೃತವಾದ ಈ ಯೋಜನೆಯನ್ವಯ ನೇಕಾರ ಸಹಕಾರಿ ಸಂಘಗಳಲ್ಲಿ ಒಬ್ಬ ವೇತನ ಕಾರ್ಯದರ್ಶಿಯನ್ನು ನೇಮಿಸಿಕೊಳ್ಳುವ ಸಲುವಾಗಿ, 3 ವರ್ಷಗಳ ಆರ್ಥಿಕ ಸೌಲಭ್ಯವನ್ನು ಇಳಿಕೆ ಕ್ರಮದಲ್ಲಿ ಮಂಜೂರು ಮಾಡಲಾಗುವುದು.

(13) **ಕೈಮಗ್ಗ ನೇಕಾರ ಸಹಕಾರಿ ಸಂಘಗಳಿಗೆ ಸರ್ಕಾರದ ಶೇರು ಬಂಡವಾಳದ ಹೂಡಿಕೆ :** ಇದು ಕೇಂದ್ರ ಪುರಸ್ಕೃತ ಯೋಜನೆ.

(14) **ಹೊಸ ಸದಸ್ಯರಿಗೆ ಪಾಲು ಬಂಡವಾಳ ಸಾಲ :** ನೇಕಾರರು ಕೈಮಗ್ಗ ಸಹಕಾರಿ ಸಂಘಗಳಲ್ಲಿ ಹೊಸದಾಗಿ ಸದಸ್ಯರಾಗಲು 100 ರೂ.ನ ಒಂದು ಶೇರಿಗೆ ಶೇ.90 ರಷ್ಟು ಸಾಲ ನೀಡುವುದು ಈ ಯೋಜನೆಯ ಸೌಲಭ್ಯ.

(15) **ಮಿತವ್ಯಯ ನಿಧಿ ಯೋಜನೆ :** ಕೈಮಗ್ಗ ನೇಕಾರ ಸಹಕಾರಿ ಸಂಘಗಳಲ್ಲಿ ಇರುವ ಸದಸ್ಯರು ತಮ್ಮ ಉತ್ಪಾದನೆಯಲ್ಲಿ ಶೇ.6 ರಷ್ಟನ್ನು ಸಂಘಕ್ಕೆ ಮೇಲ್ಕಂಡ ನಿಧಿ ಯೋಜನೆಗೆ ಕೊಡಬೇಕಾಗುತ್ತದೆ.

(16) **ನೇಕಾರರಿಗೆ ಕುಶಲಕರ್ಮಿಗಳಿಗೆ ಸಾಮೂಹಿಕ ವಿಮಾ ಯೋಜನೆ** : ದಿನಾಂಕ 1.1.91 ರಿಂದ ಎಲ್ಲಾ ಕೈಮಗ್ಗ ನೇಕಾರರಿಗೂ ಸಾಮೂಹಿಕ ವಿಮಾ ಯೋಜನೆಯನ್ನು ಮಾಡಿಸುವುದು ಈ ಯೋಜನೆಯ ಮುಖ್ಯ ಉದ್ದೇಶ.

(17) **ವಿದ್ಯುತ್ ಚಾಲಿತ ಮಗ್ಗಗಳು** : ಇವುಗಳಿಗೆ ರಾಜ್ಯ ಜವಳಿ ಪ್ರಾಧಿಕಾರದವರು ಗ್ರಾಮೀಣ ಮತ್ತು ಸಣ್ಣ ಉದ್ದಿಮೆ ವಿಭಾಗದ ವ್ಯವಸ್ಥಾಪಕರ ಶಿಫಾರಸ್ಸಿನ ಮೇಲೆ ನೋಂದಣಿ ಪತ್ರ (ರಿಜಿಸ್ಟ್ರೇಷನ್ ಸರ್ಟಿಫಿಕೇಟ್) ನೀಡುವುದು.

(18) **ಕೈಗಾರಿಕಾ ಸಹಕಾರ ಸಂಘಗಳು** : ಇವುಗಳ ಮೂಲಕ ದುಡಿಯುವ ಬಂಡವಾಳ ಸಾಲ ಮತ್ತು ಉಸ್ತುವಾರಿ ಅನುದಾನ ನೀಡುವರು.

ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಯೋಜನೆಯಲ್ಲಿ ಖರ್ಚಾದ ಅನುದಾನವನ್ನು (ಕೋಷ್ಟಕ 8.4) ಪರಿಶೀಲಿಸಿದಾಗ ಈ ಕೆಳಗಿನ ಅಂಶಗಳು ಕಂಡುಬರುತ್ತವೆ. ಸಹಕಾರ, ಕ್ರೀಡೆ ಮತ್ತು ಯುವಜನ ಸೇವೆ ವಲಯಗಳಲ್ಲಿ ಉಂಟಾದ ಖರ್ಚು ಶೇ.300 ಕ್ಕಿಂತಲೂ ಹೆಚ್ಚಿದೆ. ಪಶು ಸಂಗೋಪನೆ, ಮೀನುಗಾರಿಕೆ ರಸ್ತೆ ಮತ್ತು ಸೇತುವೆ ಹಾಗೂ ತೋಟಗಾರಿಕೆ ವಲಯಗಳಲ್ಲಿನ ಹೆಚ್ಚಳ ಶೇ.200 ಕ್ಕಿಂತಲೂ ಹೆಚ್ಚಿದೆ. ಕುಟುಂಬ ಕಲ್ಯಾಣ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಗ್ರಾಮೀಣ ಅಭಿವೃದ್ಧಿ ವಲಯಗಳಲ್ಲಿ ಗಣನೀಯವಾದ ಹೆಚ್ಚಳ ಕಂಡುಬಂದಿಲ್ಲ. ಅರಣ್ಯವಲಯದಲ್ಲಿ ಖರ್ಚಾದ ಅನುದಾನ ಹೆಚ್ಚಾಗಿಲ್ಲ. ಅರಣ್ಯ ವಲಯದ ಅಭಿವೃದ್ಧಿ ಕಾಮಗಾರಿಗಳನ್ನು ಅರಣ್ಯ ಇಲಾಖೆಯೇ ನೆರವೇರಿಸುತ್ತಿರುವುದರಿಂದ ಈ ಘಟಕದಲ್ಲಿ ಹೆಚ್ಚಳ ಇಲ್ಲದಿರುವುದು ಕಂಡುಬರುತ್ತದೆ. ಗ್ರಾಮಾಂತರ ನೀರು ಪೂರೈಕೆ, ಹಿಂದುಳಿದ ವರ್ಗಗಳ ಕಲ್ಯಾಣ, ಪೌಷ್ಟಿಕ ಆಹಾರ, ವ್ಯವಸಾಯ ಭೂಸಾರ ಸಂರಕ್ಷಣೆ, ಈ ವಲಯಗಳಲ್ಲಿ ಖರ್ಚಾದ ಅನುದಾನ ಕಡಿಮೆ ಆಗಿರುವುದು ಕಂಡುಬರುತ್ತದೆ. ಕೆಲವು ವಲಯಗಳಲ್ಲಿ ಖರ್ಚಾದ ಅನುದಾನ ಕಡಿಮೆಯಾಗಿ ತೋರಲು ಕಾರಣವೇನೆಂದರೆ, ಈ ಘಟಕಗಳಲ್ಲಿನ ಖರ್ಚು ಜಿಲ್ಲಾ ಪರಿಷತ್ ಮೂಲಕ ಮಾಡಿರುತ್ತಾರೆ.

## ಬೆಲೆಗಳು

ಧಾರವಾಡ ಜಿಲ್ಲೆಯಲ್ಲಿ 19 ನೇ ಶತಮಾನದಿಂದಲೂ ಆರ್ಥಿಕ ಉಬ್ಬರ ಏರಿಳಿತಗಳು ಇದ್ದವು. ಅಮೇರಿಕಾದ ಯಾದವೀ ಯುದ್ಧ, ಇಂಗ್ಲೆಂಡಿನಲ್ಲಿ ಆದ ಕೈಗಾರಿಕಾ ಕ್ರಾಂತಿ, ಇದರಿಂದ ಜಿಲ್ಲೆಯ ಜವಳಿ ಉದ್ಯಮ ಹಾಗೂ ಇತರ ಗುಡಿ ಕೈಗಾರಿಕೆಗಳಿಗೆ (ಉಪ್ಪು, ಕಾಗದ, ಎಣ್ಣೆ), ಆಗಾಗ ಬರುವ ಕ್ಷಾಮಗಳು, ಪ್ಲೇಗುಮಾರಿ, ಕಾಲರಾ, ರಸ್ತೆಗಳ ಸುಧಾರಣೆ ಹಾಗೂ ರೈಲು ಮಾರ್ಗಗಳ ನಿರ್ಮಾಣ. ಅಂಚೆ ತಂತಿ ವ್ಯವಸ್ಥೆ, ಮಹಾಯುದ್ಧಗಳು ಧಾರವಾಡ ಜಿಲ್ಲೆ ಆರ್ಥಿಕ ವ್ಯವಸ್ಥೆಯ ಮೇಲೆ ಹಾಗೂ ಜಿಲ್ಲೆಯ ಕೃಷಿ, ಕೈಗಾರಿಕೆ, ಉದ್ಯೋಗ ಪರಿಸ್ಥಿತಿ, ಹಣದ ಓಡಾಟ ಮುಂತಾದವುಗಳ ಮೇಲೆ ಪರಿಣಾಮ ಬೀರಿದವು. 1800 ರಿಂದ 1880 ರವರೆಗೆ ಮುಖ್ಯವಾದ ಧಾನ್ಯಗಳಾದ ಜೋಳ, ಅಕ್ಕಿಯ ಬೆಲೆಯಲ್ಲಾದ ಬದಲಾವಣೆಗಳನ್ನು ಇಲ್ಲಿ ಕೊಡಲಾಗಿದೆ. (ರೂಪಾಯಿಗೆ ಕಿಲೊಗ್ರಾಮ್)

**ಕೋಷ್ಟಕ 8.5**

| | ಜೋಳ | ಅಕ್ಕಿ | | ಜೋಳ | ಅಕ್ಕಿ |
|---|---|---|---|---|---|
| 1800 | 51 | 24.5 | 1850 | 71.4 | 34 |
| 1810 | 49.5 | 25.5 | 1860 | 41 | 18.6 |
| 1820 | 28.2 | 23.6 | 1870 | 18.6 | 7.7 |
| 1830 | 55.5 | 31 | 1880 | 20.9 | 12.3 |
| 1840 | 58.0 | 27.3 | | | |

(ಆಧಾರ : ಎಕನಾಮಿಕ್ ಲೈಫ್, ಚೊಕ್ಸಿ)

ಜೋಳದ ಬೆಲೆಯು 1820 ರಲ್ಲಿ ಶೇ.50 ರಷ್ಟು ಹೆಚ್ಚಾಗಿ ಪುನಃ ಬೆಲೆ ಕಡಿಮೆಯಾಗಿರುವುದು ಕಂಡುಬರುತ್ತದೆ. 1850 ರವರೆಗೂ ಬೆಲೆ ಹೆಚ್ಚಾಗದೆ, 1860ರಲ್ಲಿ ಕಡಿಮೆಯಾಗಿರುವುದಲ್ಲದೆ, 1860, 1870ರಲ್ಲಿ ಶೇ.50ರಷ್ಟು ಪುನಃ ಕಡಿಮೆಯಾಗಿರುವುದು ಕಂಡುಬರುತ್ತದೆ. ಆದರೆ ಅಕ್ಕಿಯ ಬೆಲೆ 1800-1850 ರವರೆಗೆ ಹೆಚ್ಚು ಕಡಿಮೆ ಸ್ಥಿರವಾಗಿ ಇದ್ದು, 50 ವರ್ಷಗಳಲ್ಲಿ ಶೇ.40 ಕಡಿಮೆ

ಆಗಿರುವುದು ಕಂಡುಬರುತ್ತದೆ. ಈ ರೀತಿ ಅಗತ್ಯವಸ್ತುಗಳ ಬೆಲೆಯಲ್ಲಿ ಏರುಪೇರು ಇರುವುದು ಜಿಲ್ಲೆಯಲ್ಲಿನ ಆರ್ಥಿಕ ಪ್ರವೃತ್ತಿಗಳನ್ನು ಸೂಚಿಸುವ ಒಂದು ಗುಣಾಂಕವಾಗಿದೆ. ಹೀಗೆ ಆದ ಬದಲಾವಣೆಗಳ ಸ್ಥೂಲ ಪರಿಚಯವನ್ನು ಇಲ್ಲಿ ಮಾಡಲಾಗಿದೆ. ಧಾರವಾಡ ಜಿಲ್ಲೆಯ ಹುಬ್ಬಳ್ಳಿಯಲ್ಲಿ 1,843 ರಿಂದ 1,845 ರವರೆಗೆ ರೆವಿನ್ಯೂ ಸರ್ವೆ ಸೆಟ್ಲ್‌ಮೆಂಟ್ ಮಾಡಿದ ಪರಿಣಾಮದಿಂದ ರೈತರು ಹೆಚ್ಚಿನ ಬಡತನಕ್ಕೆ ಈಡಾದರೆಂದು ತಿಳಿದುಬಂದಿದೆ (ಚೋಕ್ಸಿ : ಇಕೊನಾಮಿಕ್ ಲೈಫ್ ಆಫ್ ಕರ್ನಾಟಕ, ಪು.26). ಹೀಗೆ ಬಡತನಕ್ಕೊಳಗಾದ ಪ್ರದೇಶಗಳಲ್ಲಿ ಕೋಡ ತಾಲೂಕು ಒಂದು ಉತ್ತಮ ಉದಾಹರಣೆ. ಈ ತಾಲೂಕು ಆಗಿನ ಕರ್ನಾಟಕದಲ್ಲಿ ಫಲವತ್ತಾದ ತಾಲೂಕಾಗಿತ್ತು. ಜಾರ್ಜ ಪಿಂಜೇಟ್ ಎಂಬ ಪ್ರವಾಸಿಗನು ಬರೆದಂತೆ, ಈ ಪ್ರದೇಶದಲ್ಲಿ 1848 ರ ನಂತರ, ಭೂಮಿಯಲ್ಲಿ ಬಿತ್ತನೆ ಇರಲಿಲ್ಲ; ಭತ್ತದ ಜಮೀನು, ಕಾಡಾಗಿ ಪರಿವರ್ತನೆ ಆಗಿದ್ದಿತು; ಕೆರೆಗಳು ಮಣ್ಣಿನಿಂದ ತುಂಬಲ್ಪಟ್ಟಿದ್ದವು. ಒಮ್ಮೆ ಸಂಪದ್ಭರಿತವಾಗಿದ್ದ ಪ್ರದೇಶ ಕೆಲವೇ ಗುಡಿಸಲುಗಳುಳ್ಳ ಗ್ರಾಮವಾಗಿ ಪರಿವರ್ತನೆ ಹೊಂದಿತ್ತು. ಈ ಪ್ರವಾಸಿಯ ವರದಿಯಂತೆ, ಈ ಬಡತನಕ್ಕೆ ಹೆಚ್ಚಿನ ತೆರಿಗೆಯೇ ಕಾರಣವಿರಬಹುದೆಂದು ಹೇಳಲಾಗಿದೆ. ಇಲ್ಲಿಯ ಜನತೆಗೆ ನೂತನವಾಗಿ ವಿಧಿಸಿದ ಹೊಸ ಕಂದಾಯ ಪದ್ಧತಿ ಜಾರಿಗೆ ಬಂದ ಮೇಲೆ ಈ ಪ್ರದೇಶದಲ್ಲಿನ ಪರಿಸ್ಥಿತಿ ಉತ್ತಮಗೊಂಡು ಉದ್ದಿಮೆಗಳು ಪ್ರಾರಂಭವಾದವೆಂದು ಹೇಳಲಾಗಿದೆ.

1848-1878 ರ ವರೆಗಿನ ಕೆಲವು ಕಾಳುಗಳ ಬೆಲೆಯನ್ನು ಇಲ್ಲಿ ಕೊಡಲಾಗಿದೆ.

| | ಜೋಳ | ಅಕ್ಕಿ | ಗೋಧಿ | ಬೇಳೆ |
|---|---|---|---|---|
| 1848-1857 | 122 | 64 | 98 | 60 |
| 1858-67 | 60 | 30 | 46 | 30 |
| 1869-77 | 52 | 26 | 30 | 22 |
| 1878 | 20 | 16 | 10 | 14 |

(ಒಂದು ರೂಪಾಯಿಗೆ ಪೌಂಡ್‌ಗಳು) (2.2 ಪೌಂ. 1 ಕೆ.ಜಿ.)

1848 ರಿಂದ 1857 ರವರೆಗೆ ಸರಾಸರಿ ಬೆಲೆ ಜೋಳ 122 ಪೌಂಡಗಳಿದ್ದು 1878 ರ ಹೊತ್ತಿಗೆ (30 ವರ್ಷಗಳಲ್ಲಿ) 20 ಪೌಂಡಗಳಾಗಿ, ಶೇ.15 ರಷ್ಟಾಯಿತು. ಅಮೇರಿಕಾದ ಯುದ್ಧ (ಸಿವಿಲ್‌ವಾರ್)ದ ಕಾರಣದಿಂದ ಮುಂಬಯಿ ಪ್ರಾಂತ್ಯಕ್ಕೆ ಚಿನ್ನ ಆಮದಾಗಿದ್ದರಿಂದ ಈ ಪ್ರಾಂತ್ಯದಲ್ಲಿ ಬೆಲೆಗಳು ಹೆಚ್ಚಾದವೆಂದು ಹೇಳಲಾಗಿದೆ. ಇದಲ್ಲದೆ 'ಅರಳೆಯ ಉಬ್ಬರ'ದಿಂದ ಹತ್ತಿಯ ಬೆಳೆ ಹೆಚ್ಚಿ, ಧಾನ್ಯಗಳ ಬೆಲೆ ಕಡಿಮೆಯಾಗಿ ಧಾನ್ಯಗಳ ಬೆಲೆ ಹೆಚ್ಚಾಯಿತು.

ಧಾರವಾಡದಲ್ಲಿನ ಬೆಲೆ ಸೂಚ್ಯಂಕವನ್ನು ಗಮನಿಸಿದಾಗ 1865 ರಲ್ಲಿ ಜೋಳದ ಬೆಲೆಯು ರೂಪಾಯಿಗೆ 14 1/4 ಸೇರು ಇದ್ದು, 1875 ರಲ್ಲಿ ರೂಪಾಯಿಗೆ 19 ಸೇರು ಆಗಿದ್ದಿತು. ಇದೇ ರೀತಿ ಗೋದಿ, ಅಕ್ಕಿಗಳ ಬೆಲೆಯು ಕಡಿಮೆ ಆಗಿದ್ದಿತು. ಹತ್ತಿಯ ಬೇಡಿಕೆ ಹೆಚ್ಚಾಗಿ ಹೆಚ್ಚಿನ ಭೂಮಿಯು ಬಿತ್ತನೆಗೆ ಬಂದಿತು. ಇದರಿಂದ ಪಾಳುಬಿದ್ದ ಜಮೀನೆಲ್ಲವೂ ಬೆಳೆಯುವ ಪ್ರದೇಶವಾಗಿ ಪರಿವರ್ತಿತವಾಯಿತು. ಬೆಳೆಯ ವಿಸ್ತಾರದಿಂದ ಬಂದ ಲಾಭವನ್ನೆಲ್ಲವನ್ನು ಖರ್ಚುಮಾಡಿ, ಜನರು ಪುನಃ ಸಾಲಗಾರರಾಗಿ ಹೆಚ್ಚು ಕೃಷಿ ಭೂಮಿಯನ್ನು ವಿಸ್ತರಿಸಿದರು.

1865 ರಿಂದ 1875 ರವರೆಗೆ ಬೆಲೆಗಳಲ್ಲಿನ ಬದಲಾವಣೆ ಈ ರೀತಿ ಇದ್ದಿತು.

| | 1865 | 1874 | 1875 |
|---|---|---|---|
| ಗೋದಿ | 9 1/4 | 20 | 26-27 |
| ಜೋಳ | 12 1/2 | 23 | 29 |
| ಅಕ್ಕಿ | 7 3/4 | 15 | 20-21 |

(ರೂಪಾಯಿಗೆ ಸೇರು)

ಅರಳೆಯ ಉಬ್ಬರದ ಕಾರಣಗಳಿಂದಾಗಿ, 19 ನೇ ಶತಮಾನದ ಉತ್ತರಾರ್ಧಭಾಗದಲ್ಲಿ ಧಾರವಾಡದಲ್ಲಿನ ಜನಜೀವನ ಆರ್ಥಿಕವಾಗಿ ಗಮನೀಯ ಬದಲಾವಣೆ ಆಗಿರುವದು ಕಂಡುಬರುತ್ತದೆ. 1876-78 ರಲ್ಲಿ ಜಿಲ್ಲೆಯಲ್ಲಿ ಅತೀವ ಕ್ಷಾಮವಿದ್ದು ಅಗತ್ಯ ಸಾಮಗ್ರಿಗಳ ಬೆಲೆ ಹೆಚ್ಚಾಗಿ ಬಡಜನರಿಗೆ ಜೀವನ ದುಸ್ತರವಾಗಿತ್ತು. ಸರ್ಕಾರದಿಂದ ಪರಿಹಾರ ಕಾರ್ಯ ನಡೆದಿದ್ದರೂ ಜನರು ಜಿಲ್ಲೆಯಿಂದ ವಲಸೆಹೋಗಲು ಪ್ರಾರಂಭಿಸಿದರು. ಮೇ 1877 ರಲ್ಲಿ ಮಳೆ ಬಂದಾಗ ಪುನಃ ಜನರು ಜಿಲ್ಲೆಗೆ ಮರಳಿದರು. ಜಿಲ್ಲೆಯಲ್ಲಿ ಜೋಳದ ಬೆಲೆಯು ರೂಪಾಯಿಗೆ 4 1/2 ಸೇರು, ಆಗಸ್ಟ್ 1877 ರಲ್ಲಿ ಇದ್ದು ನವೆಂಬರ್ ವೇಳೆಗೆ ರೂ.ಗೆ 14 1/2 ಸೇರು ದೊರೆಯುವಂತಾಯಿತು. 1879-80 ರ ನಂತರ ಕ್ಷಾಮ ಮರೆಯಾಯಿತು. ಮುಂದಿನ ವರ್ಷಗಳು ಆರ್ಥಿಕವಾಗಿ ಅನುಕೂಲಕರವಾಗಿದ್ದವು.

**ಕೋಷ್ಟಕ 8.6 : 1895-96 ರಿಂದ 1900-1901 ರವರೆಗೆ ಕೆಲವು ಅಗತ್ಯ ವಸ್ತುಗಳ ಬೆಲೆಗಳನ್ನು ತೋರಿಸುವ ಪಟ್ಟಿ.**

| | ಜೋಳ ರೂ.ಆ.ಪೈ. | ಗೋದಿ ರೂ.ಆ.ಪೈ. | ಅಕ್ಕಿ ರೂ.ಆ.ಪೈ. | ಉದ್ದಿನ ಬೇಳೆ ರೂ.ಆ.ಪೈ. | ತೊಗರಿಬೇಳೆ ರೂ.ಆ.ಪೈ. | ತುಪ್ಪ ರೂ.ಆ.ಪೈ. | ಉಪ್ಪು ರೂ.ಆ.ಪೈ. |
|---|---|---|---|---|---|---|---|
| 1895-96 | 1-11-5 | 2-0-9 | 3-7-9 | 3-1-5 | 4-8-7 | 34-4-10 | 3-7-3 |
| 1896-97 | 1-11-9 | 3-0-9 | 3-4-11 | 3-4-10 | 4-0-5 | 33-9-5 | 3-5-3 |
| 1897-98* | 3-4-5 | 5-1-9 | 4-4-0 | 4-12-2 | 5-10-5 | 30-14-6 | 3-7-2 |
| 1898-99 | 2-1-1 | 3-11-2 | 3-2-8 | 3-9-2 | 4-0-6 | 34-0-4 | 3-9-6 |
| 1899-1900 | 2-1-7 | 2-14-8 | 3-5-11 | 2-13-4 | 3-2-2 | 28-0-10 | 4-3-5 |
| 1900-1901 | 3-12-0 | 4-9-2 | 4-9-6 | 4-12-9 | 5-6-4 | 34-15-2 | 3-11-6 |

* (1897-98 ಕ್ಷಾಮದ ವರ್ಷ) ಬೆಲೆಯು 1 ಮಣಕ್ಕೆ (40 ಸೇರಿಗೆ) ರೂ.ಆ.ಪೈ. 1 ರೂ.ಗೆ 16 ಆಣೆ, 1 ಆಣೆಗೆ 12 ಪೈ.

ಆಧಾರ : (ಎಕಾನಾಮಿಕ್ ಲೈಫ್ ಆಫ್ ಕರ್ನಾಟಕ ಚೋಕ್ಸಿ)

1897-98 ರಿಂದ ಸತತವಾಗಿ ಜಿಲ್ಲೆಯಲ್ಲಿ ಪ್ಲೇಗು ಕಾಣಿಸಿಕೊಂಡು ಎರಡು ಲಕ್ಷಕ್ಕೂ ಮೇಲ್ಪಟ್ಟು ಜನ ಸತ್ತರು. 1910-1911 ರಲ್ಲೂ ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಪ್ಲೇಗು ತಲೆದೋರಿತ್ತು. ಇದೇ ಸಮಯದಲ್ಲಿ ಮಲೇರಿಯಾವೂ ಕಾಣಿಸಿಕೊಂಡಿತು. ಈ ಎಲ್ಲಾ ಕಾರಣಗಳಿಂದ, ರೈತರು ಗ್ರಾಮಗಳಲ್ಲಿ ಒಕ್ಕಲುತನ ಮಾಡುವುದರ ಬದಲಿಗೆ ಪಟ್ಟಣಗಳಲ್ಲಿ ಕೂಲಿಮಾಡಿ ಜೀವಿಸಲು ವಲಸೆ ಹೋದರು. ಇದರಿಂದ, ಬಡಜನತೆಯಲ್ಲಿಯೂ ಜೀವನ ಮಟ್ಟದಲ್ಲಿ ಸ್ವಲ್ಪಮಟ್ಟಿಗೆ ಸುಧಾರಣೆ ಕಂಡುಬಂದಿತು ಎಂದು ತಿಳಿಯಲಾಗಿದೆ. ಗದಗಕ್ಕೆ ರೈಲುಮಾರ್ಗದ ಸಂಪರ್ಕ ದೊರೆತಿದ್ದರಿಂದ, ವ್ಯಾಪಾರ ವೃದ್ಧಿಯಾಯಿತು.

1915 ರ ವೇಳೆಗೆ ಸಮೃದ್ಧ ಬೆಳೆಯ ಕಾರಣ ಬೆಲೆಗಳು ಕಡಿಮೆಯಾದವು. ಹತ್ತಿಯ ಬೆಲೆಯು ಹೆಚ್ಚಾಗಿ ರೈತರಿಗೆ ಶೇ.30 ರಿಂದ 75 ರಷ್ಟು ಹೆಚ್ಚು ಬೆಲೆ ದೊರೆಯಿತು. ಆದರೆ, ಆಮದು ಮಾಡುವ ಪದಾರ್ಥಗಳ ಬೆಲೆ ಹೆಚ್ಚಾಯಿತು. ಉದಾಹರಣೆಗೆ ಬೆಂಕಿಪೆಟ್ಟಿಗೆ 144 ಕ್ಕೆ 13 ಆಣೆ ಇದ್ದದ್ದು ರೂ.1-0-6 ಕಾಸು ಆಯಿತು.

**ಕೋಷ್ಟಕ 8.7 : 1913-14 ರಿಂದ 1937-38 ರ ವರೆಗಿನ ಕೆಲವು ವಸ್ತುಗಳ ಬೆಲೆ ಈ ರೀತಿ ಇದ್ದವು.**

| | ಜೋಳ | ಸಜ್ಜೆ | ಗೋದಿ | ಅಕ್ಕಿ | ಬೆಲ್ಲ | ಹತ್ತಿ |
|---|---|---|---|---|---|---|
| 1913-14 | 13 | 11 | 10 | 7 1/2 | 5 3/4 | 1 3/4 |
| 1918-19 | 4 | 4 | 4 1/2 | 4 1/2 | 4 1/2 | - |

| | ಜೋಳ | ಸಜ್ಜೆ | ಗೋದಿ | ಅಕ್ಕಿ | ಬೆಲ್ಲ | ಹತ್ತಿ |
|---|---|---|---|---|---|---|
| 1922-23 | 10 | 8 | 7 | 4 1/2 | 3.1/2 | 1 |
| 1924-25 | 8 | 7 | 5 | 5 1/2 | 3 1/2 | 1 |
| 1928-29 | 10 1/2 | 8 | 7 | 6 | 4 3/4 | 1 1/4 |
| 1930-31 | 16 | 13 1/2 | 9 | 7 1/2 | 6 1/2 | 2 |
| 1933-34 | 17 1/4 | 15 3/4 | 10 1/2 | 12 1/2 | 10 | - |
| 1937-38 | 17 | 13 | 10 | 10 | 8 1/4 | 2 1/2 |

(ಬೆಲೆ ಒಂದು ರೂಪಾಯಿಗೆ ಸೇರುಗಳು)

ಆಧಾರ : (ಎಕನಾಮಿಕ್ ಲೈಫ್ ಆಫ್ ಕರ್ನಾಟಕ, ಚೋಕ್ಸಿ)

ಎರಡನೇಯ ಮಹಾಯುದ್ಧ (1939-45) ದ ಸಮಯದಲ್ಲಿ ಬೆಲೆಗಳು ಹೆಚ್ಚಿದ್ದು ನಂತರ ಕಡಿಮೆಯಾಗತೊಡಗಿದ್ದು ಕಂಡುಬರುತ್ತದೆ. ಮುಂಬಯಿಯಲ್ಲಿ ಗಿರಣಿಗಳ ಪರಿಸ್ಥಿತಿಯಲ್ಲಿ ಸ್ಥಿರತೆ ಇಲ್ಲದ್ದರಿಂದ ಹತ್ತಿಯ ಬೆಲೆಯಲ್ಲಿ ಬದಲಾವಣೆ ಉಂಟಾಯಿತು. ನಂತರದ ವರ್ಷಗಳಲ್ಲಿ ಬೆಲೆಗಳಲ್ಲಿ ಸ್ಥಿರತೆ ಸ್ವಲ್ಪಕಾಲ ಇದ್ದಿತು. 1960ರ ನಂತರದ ಬೆಲೆಗಳು ಹಾಗೂ ಕೆಲವು ಆರ್ಥಿಕ ಸೂಚ್ಯಂಕಗಳನ್ನು ಈ ಅಧ್ಯಾಯದಲ್ಲಿ ಕೊಡಲಾಗಿದೆ.

## ಜೀವನ ಮಟ್ಟ

ಧಾರವಾಡ ಜಿಲ್ಲೆಯಲ್ಲಿ ಗ್ರಾಹಕ ವಸ್ತುಗಳ ಸಗಟು ಮತ್ತು ಚಿಲ್ಲರೆ ಮಾರಾಟ ಬೆಲೆಗಳನ್ನು 1960-61 ರಿಂದ ಪರಿಶೀಲಿಸಿದಾಗ ಜೀವನದ ವೆಚ್ಚ ಹೆಚ್ಚುತ್ತಿರುವುದು ಗಮನಾರ್ಹ. ಒಂದು ಮಧ್ಯಮ ವರ್ಗದ ಸಣ್ಣ ಕುಟುಂಬ ಅಂದರೆ ಪತಿ, ಪತ್ನಿ ಹಾಗೂ ಇಬ್ಬರು ಮಕ್ಕಳು ಇರುವ ಒಂದು ಕುಟುಂಬಕ್ಕೆ 1960 ರಲ್ಲಿ, ಒಂದು ಮಾಸಕ್ಕೆ ಆಗುತ್ತಿದ್ದ ವೆಚ್ಚ ಈ ರೀತಿ ಇತ್ತು. (ಒಂದು ಖಾಸಗಿ ಮನೆತನದಿಂದ ಈ ವಿವರ ಪಡೆಯಲಾಗಿದೆ) : ಮನೆ ಬಾಡಿಗೆ - ಸುಮಾರು 20-30ರೂ, ಮಕ್ಕಳ ವಿದ್ಯಾಭ್ಯಾಸ (ಪ್ರೌಢಶಿಕ್ಷಣದವರೆಗೆ) 5 ರೂ, ಗ್ರಾಹಕ ವಸ್ತುಗಳು (ಅಕ್ಕಿ, ಸಕ್ಕರೆ ಇತ್ಯಾದಿ) ಸುಮಾರು 40 ರೂ, ವೈದ್ಯಕೀಯ ವೆಚ್ಚ 10 ರೂ, ಇತರೆ ಸುಮಾರು 15 ರೂ. ಒಟ್ಟು ಸುಮಾರು 100 ರೂ. 1970-71 ರಲ್ಲಿ ಈ ವೆಚ್ಚ ಸುಮಾರು 200 ರೂ. ಇತ್ತು. 1980-81 ರಲ್ಲಿ ಸುಮಾರು 500 ರೂ, 1990-91 ರಲ್ಲಿ ಸುಮಾರು 1200 ರೂ ಇತ್ತು. 1994 ರ ಹೊತ್ತಿಗೆ ಈ ವೆಚ್ಚ ಸುಮಾರು 1800 ರೂ. ಆಯಿತು. 1994 ರಲ್ಲಿ ವೆಚ್ಚದ ವಿವರಣೆ ಹೀಗಿದೆ. ಮನೆಬಾಡಿಗೆ 500-600 ರೂ, ಮಕ್ಕಳ ವಿದ್ಯಾಭ್ಯಾಸ 200 ರೂ - 300 ರೂ, ಗ್ರಾಹಕ ವಸ್ತುಗಳು ಸುಮಾರು 700ರೂ, ವೈದ್ಯಕೀಯ ಮತ್ತು ಇತರೆ 200ರೂ. ಇತ್ತೀಚಿನ ದಶಕಗಳಲ್ಲಿ ವಿಲಾಸ ವಸ್ತುಗಳೆಂದು ತಿಳಿಯಲಾದ, ರೇಡಿಯೋ, ದೂರದರ್ಶನ, ದ್ವಿಚಕ್ರ ವಾಹನ ಪಟ್ಟಣಗಳಲ್ಲಿ ಹೆಚ್ಚಾಗಿವೆ. ಮೇಲೆ ತಿಳಿಸಿದ ವೆಚ್ಚಗಳು ಧಾರವಾಡ-ಹುಬ್ಬಳ್ಳಿ ಪಟ್ಟಣಗಳಲ್ಲಿಗೆ ಸೀಮಿತವಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಜೀವನ ಮಟ್ಟ ಸುಧಾರಿಸುತ್ತಿದೆ. ಜೀವನಮಟ್ಟವನ್ನು ತಿಳಿಯುವ, ಗ್ರಾಹಕ ವಸ್ತುಗಳ 1970-71, 1980-81, 1990-91 ಮತ್ತು 92-93 ರಲ್ಲಿ ಧಾರವಾಡ ಮಾರುಕಟ್ಟೆಯಲ್ಲಿನ ಬೆಲೆಗಳ ವಿವರಗಳನ್ನು ಇಲ್ಲಿ ಕೊಡಲಾಗಿದೆ. (ಕೋಷ್ಟಕ 8.8)

ಜೋಳ 1960-61 ರಲ್ಲಿ 65 ರೂ. ಕ್ವಿಂಟಾಲ್ ಬೆಲೆ ಇದ್ದು, 35,728 ಕ್ವಿಂಟಾಲ್ ಧಾರವಾಡದ ಮಾರುಕಟ್ಟೆಗೆ ಬಂದಿದ್ದಿತು. 1970-71 ರಲ್ಲಿ ಬೆಲೆ ಸರಾಸರಿ ಬೆಲೆ 150 ರೂ, ಇದ್ದು 20,703 ಕ್ವಿಂಟಾಲ್ ಮಾರುಕಟ್ಟೆಗೆ ಬಂದಿದ್ದಿತು. ಅಂದರೆ 15,025 ಕ್ವಿಂಟಾಲ್ ಕಡಿಮೆಯಾಗಿದ್ದಿತು.

**ಕೋಷ್ಟಕ 8.8 : ಧಾರವಾಡ ಮಾರುಕಟ್ಟೆಯಲ್ಲಿ 1970-71 ರಿಂದ 1992-93 ರ ವರೆಗೆ ಕೆಲವು ಹುಟ್ಟುವಳಿಗಳ ಮಾರಾಟ ಬೆಲೆ.**

(ಬೆಲೆ ಕ್ವಿಂಟಾಲಿಗೆ) ರೂ.ಗಳಲ್ಲಿ

| ಕ್ರ. | ಹುಟ್ಟುವಳಿ | ಸರಾಸರಿ ಧಾರಣೆ | | | |
|---|---|---|---|---|---|
| | | 1970-71 | 1980-81 | 1990-91 | 1992-93 |
| 1 | ಹತ್ತಿ | | | | |
| | ಜಯಧರ | | 518.00 | 1051 | 835 |
| | ಲಕ್ಷ್ಮಿ | | 480.00 | - | - |
| | ವರಲಕ್ಷ್ಮಿ | | 531.00 | - | - |
| | ಡಿಸಿಹೆಚ್ | - | - | 1150 | 1350 |
| 2 | ಶೇಂಗಾಕಾಯಿ | 122 | 295 | 810 | 711 |
| 3 | ಕುಸುಬಿ | - | 335 | 840 | 815 |
| 4 | ಕಡಲಿ | 105 | 375 | 750 | 835 |
| 5 | ತೊಗರಿ | 87 | 260 | 720 | 740 |
| 6 | ಹೆಸರು | 105 | 320 | 730 | 950 |
| 7 | ಉದ್ದು | 110 | 205 | - | 640 |
| 8 | ಅಗಸಿ | 135 | 412 | - | - |
| 9 | ಜಾಡಲ (ಪರಳು) | 125 | 270 | - | - |
| 10 | ಉಳ್ಳಾಗಡ್ಡಿ (ಈರುಳ್ಳಿ) | 24 | 65 | - | 210 |
| 11 | ಜೋಳ | 65 | 175 (ಬಿಳಿ) | 260 (ಬಿಳಿ) | 390 |
| 12 | ಗೋದಿ | 102 | 230 | 415 | 410 |
| 13 | ಭತ್ತ | 69 | 115 | - | - |
| 14 | ಅಕ್ಕಿ | 118 | 210 | - | - |
| 15 | ಕೊತ್ತಂಬರಿಬೀಜ | 260 | 480 | 825 | - |
| 16 | ಅಲಸಂದಿ | 90 | 289 | 670 | 680 |
| 17 | ಒಣಮೆಣಸಿನಕಾಯಿ | 380 | 650 | - | - |
| 18 | ಬೆಲ್ಲ | | 350 | 400 | 608 |
| 19 | ಆಲೂಗಡ್ಡೆ | | 180 | 250 | 130 |
| 20 | ವೀಳೇದೆಲೆ (ಅಂಡಿಗೆ) | | | 220 | 538 |

(ಆಧಾರ : ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ - ಧಾರವಾಡ)

### ಸಗಟು ಬೆಲೆಗಳು

1990-91 ರಲ್ಲಿ ಮುಖ್ಯ ಆಹಾರ ಪದಾರ್ಥಗಳಾದ ಅಕ್ಕಿ, ಗೋಧಿ, ಜೋಳ, ರಾಗಿ, ಸಜ್ಜೆ, ದ್ವಿದಳ ಧಾನ್ಯಗಳಲ್ಲಿ ಕಡಲೆಬೇಳೆ, ಹೆಸರು ಬೇಳೆ, ತೊಗರಿ ಬೇಳೆ, ಉದ್ದಿನ ಬೇಳೆ, ಎಣ್ಣೆ ಕಾಳುಗಳಲ್ಲಿ ಶೇಂಗಾ ಕಾಳು, ಶೇಂಗಾ ಎಣ್ಣೆ, ಕೊಬ್ಬರಿ ಎಣ್ಣೆಯ ಸಗಟು

ಬೆಲೆಯು 1989-90 ನೇ ಸಾಲಿಗಿಂತ ಹೆಚ್ಚಾಗಿದ್ದುದು ಕಂಡುಬಂದಿದೆ. ಆ ಸಾಲಿನಲ್ಲಿ ಅಕ್ಕಿ (ಉತ್ತಮ) ಕ್ವಿಂ.ಗೆ ಸರಾಸರಿ 600 ರೂ. ಅಕ್ಕಿ ಮಧ್ಯಮ 500 ರೂ.ಅಕ್ಕಿ ಸಾಮಾನ್ಯ 300 ರೂ.ಗೋಧಿ 425 ರೂ. ಜೋಳ 300 ರೂ. ರಾಗಿ 180 ರೂ. ಸಜ್ಜೆ 200 ರೂ.ವರೆಗೂ ಇತ್ತು.

ದ್ವಿದಳ ಧಾನ್ಯಗಳಲ್ಲಿ ತೊಗರಿಬೇಳೆ 1989 ರಲ್ಲಿ ಕ್ವಿಂ.ಗೆ ಸರಾಸರಿ 1,200 ರೂ. ಇದ್ದು 1990 ರಲ್ಲಿ 1,530 ರೂ.ಗೆ ಏರಿತ್ತು. ಉದ್ದಿನ ಬೇಳೆ 1989 ರಲ್ಲಿ ಕ್ವಿಂ.ಗೆ ಸರಾಸರಿ 1,025 ರೂ. ಇದ್ದು 1990 ರಲ್ಲಿ 1,235 ರೂ.ಗಳಾಗಿತ್ತು.

ಎಣ್ಣೆಕಾಳುಗಳಾದ ಶೇಂಗಾ ಕ್ವಿಂ.ಗೆ 1,500 ರೂ., ಕುಸುಬೆ 900 ರೂ. ಇತ್ತು. ಶೇಂಗಾ ಎಣ್ಣೆ ಸರಾಸರಿ 10 ಕೆ.ಜಿ.ಗೆ 3,500 ರೂ. ಹಾಗೂ ಕೊಬ್ಬರಿ ಎಣ್ಣೆ 10 ಕೆ.ಜಿ.ಗೆ 4,600 ರೂ. ಇದ್ದು 1989 ರಲ್ಲಿ ಶೇಂಗಾ ಎಣ್ಣೆ 2,800 ರೂ. ಹಾಗೂ ಕೊಬ್ಬರಿ ಎಣ್ಣೆ 3,500 ರೂ.ವರೆಗೆ ಇತ್ತು. ಸಕ್ಕರೆ ಕ್ವಿಂ.ಗೆ ಸರಾಸರಿ 850 ರೂ., ಬೆಲ್ಲ ಉತ್ತಮ ಕ್ವಿಂ.ಗೆ 600 ರೂ., ಸಾಧಾರಣಾ 450 ರೂ. ಇತ್ತು.

1990-91 ರಲ್ಲಿ ಚಿಲ್ಲರೆ ಬೆಲೆಯು (ಸರಾಸರಿ) ಹಿಂದಿನ ಸಾಲಿಗಿಂತ ಹೆಚ್ಚಾಗಿದ್ದುದು ಕಂಡು ಬಂದಿರುತ್ತದೆ. ಒಂದು ಕೆ.ಜಿ. ಉತ್ತಮ ಅಕ್ಕಿಯ ಬೆಲೆ 6.50 ರೂ. ಇದ್ದು ಅದು ಹಿಂದಿನ ವರ್ಷ 6.00 ರೂ. ಇದ್ದಿತು. ಮಧ್ಯಮ ಅಕ್ಕಿಯು 5.50 ರೂ. ಹಾಗೂ ಸಾಧಾರಣ ಅಕ್ಕಿಯ ಬೆಲೆಯು 4.50 ರೂ. ಇದ್ದಿತು. ಗೋಧಿಯ ಬೆಲೆಯು ಕೆ.ಜಿ.ಗೆ 5 ರೂ. ಇದ್ದು, ಹಿಂದಿನ ಸಾಲಿನಲ್ಲಿ 4.50 ರೂ. ಇತ್ತು. ಜೋಳದ ಬೆಲೆಯು 3.50 ರೂ, ರಾಗಿ 2.50 ರೂ, ಸಜ್ಜೆ 2.50 ರೂ, ತೊಗರಿಬೇಳೆ 16.50 ರೂ, ಉದ್ದಿನಬೇಳೆ 13.00 ರೂ., ಕಡಲೆಬೇಳೆ 11.00 ರೂ., ಹೆಸರುಬೇಳೆ 12 ರೂ., ಶೇಂಗಾಕಾಳು ಕೆ.ಜಿ.ಗೆ 17.00 ರೂ., ಮೆಣಸಿನಕಾಯಿ 30 ರೂ., ಶೇಂಗಾ ಎಣ್ಣೆ ಕೆ.ಜಿ.ಗೆ 36 ರೂ., ಕೊಬ್ಬರಿ ಎಣ್ಣೆ 47 ರೂ., ಉಳ್ಳಾಗಡ್ಡಿ 3 ರೂ., ಸಕ್ಕರೆ 8.50 ರೂ., ಬೆಲ್ಲ (ಉತ್ತಮ) 6 ರೂ. ಸಾಧಾರಣ ಬೆಲ್ಲ 4.50 ರೂ. ಬಟಾಣಿ 4 ರೂ. ತೆಂಗಿನಕಾಯಿ ಒಂದಕ್ಕೆ 3.50 ರೂ. ಇತ್ತು.

**ಕೋಷ್ಟಕ 8.9 : 1992-93 ರಲ್ಲಿ ಆಹಾರ ಪದಾರ್ಥಗಳ ಸಗಟು ಬೆಲೆ ಈ ರೀತಿ ಇದ್ದಿತು.**

| | ರೂ. ಕ್ವಿಂಟಾಲ್‌ಗೆ | | | ಚಿಲ್ಲರೆ ಬೆಲೆ ಕಿಗ್ರಾಂರೂ. | |
|---|---|---|---|---|---|
| ಅಕ್ಕಿ (ಉತ್ತಮ) | 650 | - | 700 | 7-10 | 7-20 |
| ಅಕ್ಕಿ (ಮಧ್ಯಮ) | 600 | - | 650 | 6-45 | 6-50 |
| ಅಕ್ಕಿ (ಸಾಧಾರಣ) | 550 | - | 600 | 6-00 | 6-40 |
| ಅಕ್ಕಿ (ಕುಸುಬಲು) | 560 | | | 6-10 | 6-20 |
| ರಾಗಿ | 310 | | 330 | 3-80 | 3-70 |
| ಗೋಧಿ (ಬಿಳಿ) | 530 | | 550 | 6-00 | 6-10 |
| ಗೋಧಿ (ಕೆಂಪು) | 500 | | 560 | 5-60 | 5-70 |
| ಜೋಳ (ಹೈಬ್ರಿಡ್) | 300 | | 330 | 3-80 | 3-90 |
| ಜೋಳ (ಬಿಳಿ) | 420 | | 450 | 5-10 | 5-20 |
| ತೊಗರಿ | 1500 | | 1520 | 16-00 | |
| ಕಡಲೆಕಾಯಿ ಎಣ್ಣೆ | 2675 | | 2700 | 30-00 | |
| ಕೊಬ್ಬರಿ ಎಣ್ಣೆ | 5235 | | 5250 | 61-00 | |
| ಸಕ್ಕರೆ (ಮುಕ್ತಮಾರುಕಟ್ಟೆ) | 1029 | | 1050 | 10-50 | |

| | ರೂ. ಕ್ವಿಂಟಾಲ್‌ಗೆ | | ಚಿಲ್ಲರೆ ಬೆಲೆ ಕಿಗ್ರಾಂರೂ. |
|---|---|---|---|
| ಬೆಲ್ಲ | 660 | 700 | 7-50 |
| ಒಣಮೆಣಸಿನಕಾಯಿ | 3,300 | 3,400 | 38-00 |
| ಈರುಳ್ಳಿ | 310 | 350 | 4-00 |
| ಆಲೂಗಡ್ಡೆ | 290 | 300 | 4-00 |
| ತೆಂಗಿನಕಾಯಿ (ಸಾವಿರ) (ದಪ್ಪ) | 4,250 | 4,300 (1 ಕ್ಕೆ) | 5-50 |

(ಆಧಾರ : ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ - ವರದಿ)

ಧಾರವಾಡ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣವು 13,78,200 ಹೆಕ್ಟೇರುಗಳಿದ್ದು, ರಾಜ್ಯದ ವಿಸ್ತೀರ್ಣದ ಶೇ.7.23 ರಷ್ಟಿದೆ. ಇದರಲ್ಲಿ ಅರಣ್ಯ ಪ್ರದೇಶ ಶೇ.8.20 ರಷ್ಟಿದ್ದು (ರಾಜ್ಯ 15.92), ದೇಶದಲ್ಲಿ ಅರಣ್ಯ ಪ್ರದೇಶದ ವಿಸ್ತೀರ್ಣ ಶೇ.20.6 ಕ್ಕಿಂತಲೂ ಕಡಿಮೆ ಇದೆ. 1955-56 ರಲ್ಲಿ 1,11,800 ಹೆಕ್ಟೇರ ವಿಸ್ತೀರ್ಣ ಅರಣ್ಯ ಪ್ರದೇಶವಾಗಿದ್ದು, 1980-81 ರಲ್ಲಿ 11,60,463 ರಲ್ಲಿ ಹೆಕ್ಟೇರುಗಳು ಮತ್ತು 1990-92 ರಲ್ಲಿ 11,02,777 ಹೆ.ಗಳಿದ್ದವು. ಇದರಿಂದ ನಿವ್ವಳ ಬಿತ್ತನೆ ಪ್ರದೇಶದಲ್ಲಿ ಗಣನೀಯವಾದ ಹೆಚ್ಚಳವಾಗಿಲ್ಲ. ಇತ್ತೀಚಿನ ದಶಕಗಳಲ್ಲಿ ಈ ವಿಸ್ತೀರ್ಣದಲ್ಲಿ ಕಡಿಮೆಯಾಗಿದೆ. ಹಾಗೆಯೇ ವಿವಿಧ ಬೆಳೆಗಳಲ್ಲಿ ಆಗಿರುವ ಬದಲಾವಣೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

**ಜೋಳ :** 1990-91 ರಲ್ಲಿ 83,850 ಕ್ವಿಂಟಾಲ್ ಮಾರುಕಟ್ಟೆಗೆ ಬಂದಿದ್ದು, ಬೆಲೆ ಸರಾಸರಿ 220 ರೂ. ಇದ್ದಿತು. 1992-93 ರಲ್ಲಿ 14,297 ಕ್ವಿಂಟಾಲ್ ಮಾರುಕಟ್ಟೆಗೆ ಬಂದಿದ್ದು ಸರಾಸರಿ 390 ರೂ. ಇದ್ದಿತು. ಜೋಳದ ಸಗಟು ಬೆಲೆ 1970-71 ರಿಂದ 1992-93 ರವರೆಗೆ 65 ರೂ.ನಿಂದ 390 ರೂ.ವರೆಗೆ ಅಂದರೆ ಶೇ.500 ರಷ್ಟು ಹೆಚ್ಚಾಗಿದೆ. ಹೀಗೆ ಎಲ್ಲಾ ವಸ್ತುಗಳ ಚಿಲ್ಲರೆ ಬೆಲೆಯೂ ಸುಮಾರು ಶೇ.300-400 ಹೆಚ್ಚಾಗಿದೆ. ಆದರೆ ವರಮಾನವೂ ಗಣನೀಯವಾಗಿ ಹೆಚ್ಚಾಗಿದೆ. ಒಬ್ಬ ರೈತ 1960-61 ರಲ್ಲಿ 50 ಕ್ವಿಂಟಾಲ್‌ಗೆ 3,250 ರೂ. ಪಡೆಯುತ್ತಿದ್ದು, 1992-93 ರಲ್ಲಿ 13,750 ರೂ. ಪಡೆಯುತ್ತಿದ್ದನು. ಆದರೆ, ಬೆಳೆಯಲು ತಗಲುವ ಖರ್ಚು ಗಣನೀಯವಾಗಿ ಹೆಚ್ಚಾಗಿದೆ. ರೈತನ ವರಮಾನದಲ್ಲಿ ಶೇ.410 ಹೆಚ್ಚಾಗಿದ್ದು ಬೆಲೆಗಳು ಹೆಚ್ಚಾದರೂ ಜೀವನ ಮಟ್ಟವೂ ಸುಧಾರಿಸಿದೆ. ರೈತನು ತಾನು ಬೆಳೆದ ಬೆಳೆಯನ್ನು ಮಾರಲು ಹೆಚ್ಚಿನ ಶ್ರಮವಹಿಸಬೇಕಾಗುತ್ತದೆ. ಮಧ್ಯವರ್ತಿಗಳ ಸಹಾಯವಿಲ್ಲದೆ, ವಸ್ತುಗಳನ್ನು ಮಾರುವುದು ಕಷ್ಟವಾಗಿದ್ದು, ಗ್ರಾಹಕ ಕೊಡುವ ಖರೀದಿ ಬೆಲೆಯಲ್ಲಿ ಶೇ.30-40 ರಷ್ಟು ಮಾತ್ರ ರೈತನಿಗೆ ತಲುಪುತ್ತಿದ್ದು, ಮಧ್ಯವರ್ತಿಗಳಿಗೆ ಶೇ.60-70 ತಲಪುತ್ತಿದೆ. ಈ ದಿಸೆಯಲ್ಲಿ ಒಕ್ಕಲುತನ ಹುಟ್ಟುವಳಿ ಮಾರುಕಟ್ಟೆ ಸಮಿತಿಗಳು ರೈತನಿಗೆ ಸಹಾಯ ಮಾಡುತ್ತಿವೆ.

ಇತ್ತೀಚಿನ ದಶಕಗಳಲ್ಲಿ ಹುಬ್ಬಳ್ಳಿ ನಗರದಲ್ಲಿ, ಕೈಗಾರಿಕೆಗಳು ಹೆಚ್ಚುತ್ತಿದ್ದು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವವರಿಗೆ, ಸಹಾಯ ಒದಗಿಸುವ ಸಂಸ್ಥೆಗಳು ಹೆಚ್ಚಾಗಿವೆ. ಅವುಗಳೆಂದರೆ ವಾಣಿಜ್ಯ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕುಗಳು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಕರ್ನಾಟಕ ಕೈಗಾರಿಕಾ ಸಹಕಾರಿ ಬ್ಯಾಂಕು, ಇತ್ಯಾದಿ. 1992 ರ ವರೆಗೆ ರಾಜ್ಯ ಹಣಕಾಸು ಸಂಸ್ಥೆಯೊಂದೇ, 4,918 ಘಟಕಗಳಿಗೆ ಜಿಲ್ಲೆಯಲ್ಲಿ 9,946.73 ಲಕ್ಷ ರೂ.ಗಳ ಹಣ ಸಂದಾಯ ಮಾಡಿದೆ. ಇದರಿಂದ ಕೆಲವು ವಿಲಾಸ ವಸ್ತುಗಳ ಖರೀದಿಯೂ ಹೆಚ್ಚಾಗಿದೆ. ಹಾಗೆಯೇ ಕೆಲವು ಗ್ರಾಹಕ ವಸ್ತುಗಳ ಬೆಲೆಯೂ ಹೆಚ್ಚಾಗುತ್ತಿದೆ.

## ಭೂಮಿಯ ಮೌಲ್ಯ

ಧಾರವಾಡ ಜಿಲ್ಲೆಯಲ್ಲಿ ಖುಷ್ಕಿ ಜಮೀನು ಹೆಚ್ಚಾಗಿದ್ದು, ಈ ಜಮೀನಿನ ವ್ಯಾಪಾರವೇ ಅಧಿಕವಾಗಿದೆ. 1960-61 ರಿಂದ 1991-92 ರವರೆಗೆ ಜಿಲ್ಲೆಯಲ್ಲಿ ನಡೆದ ವಹಿವಾಟುಗಳ ವಿವರ ಹೀಗಿದೆ. (ತಾಲೂಕುವಾರು ವಿವರಗಳನ್ನು ಕೋಷ್ಟಕ 8.10 ರಲ್ಲಿ ಕೊಡಲಾಗಿದೆ).

ಬ್ಯಾಡಗಿ ತಾಲೂಕಿನಲ್ಲಿ 1960-90 ರವರೆಗೆ, 70-71 ರಲ್ಲಿ 1,268 ಎಕರೆ ವಿಲೇವಾರಿಯಾಗಿದ್ದು, ಮಾರಾಟ ಬೆಲೆ ಎಕರೆಗೆ ಸರಾಸರಿ 554 ರೂ. ಇದ್ದಿತು. ನಂತರ 1990-91 ರಲ್ಲಿ 239 ಎಕರೆ ವಿಲೇವಾರಿಯಾಗಿ ಮಾರಾಟಬೆಲೆ ಎಕರೆಗೆ ಸರಾಸರಿ 6,778 ರೂ. ಇದ್ದಿತು. ಗದಗ ತಾಲೂಕಿನಲ್ಲಿ 1965-66 ರಲ್ಲಿ 6,532 ಎಕರೆ ಭೂಮಿ ವಿಲೇವಾರಿಯಾಗಿ, ಮಾರಾಟ ಬೆಲೆ ಎಕರೆಗೆ 375 ರೂ. ಗಳಿತ್ತು. 1991-92 ರಲ್ಲಿ 1,637 ಎಕರೆ ವಿಲೇವಾರಿಯಾಗಿದ್ದು, ಸರಾಸರಿ ಎಕರೆಗೆ ರೂ.9,473 ರೂ. ಮಾರಾಟ ಬೆಲೆ ಇದ್ದಿತು.

ಹಾವೇರಿ ತಾಲೂಕಿನಲ್ಲಿ 1970-71 ರಲ್ಲಿ 884 ಎಕರೆ ಮಾರಾಟವಾಗಿದ್ದು, ಎಕರೆಬೆಲೆ ರೂ.918 ಇದ್ದು, 1991-92 ರಲ್ಲಿ ಎಕರೆಗೆ 10,901 ರೂ. ಇದ್ದಿತು. ಧಾರವಾಡ ತಾಲೂಕಿನಲ್ಲಿ 1970-71 ರಲ್ಲಿ ಎಕರೆಗೆ ಸರಾಸರಿ ರೂ.405 ಇದ್ದಿದ್ದು, 1991-92 ರಲ್ಲಿ 11,276 ರೂ. ಬೆಲೆ ಇದ್ದಿತು. ಹಾನಗಲ್ ತಾಲೂಕಿನಲ್ಲಿ 1970-71 ರಲ್ಲಿ ಎಕರೆಗೆ ಸರಾಸರಿ 614 ರೂ. ಇದ್ದು, 1990-91 ರಲ್ಲಿ 821 ಎಕರೆ ವಿಲೇವಾರಿಯಾಗಿದ್ದು ಎಕರೆಗೆ ರೂ.4,671 ಮಾರಾಟ ಬೆಲೆ ಇದ್ದಿತು. ಹಿರೇಕೆರೂರು ತಾಲೂಕಿನಲ್ಲಿ 1965-66 ರಲ್ಲಿ 5,554 ಎಕರೆ ಭೂಮಿ ವಿಲೇವಾರಿಯಾಗಿದ್ದು, ಮಾರಾಟ ಬೆಲೆ ಎಕರೆಗೆ ಸರಾಸರಿ 350 ರೂ.ಗಳಾಗಿತ್ತು. 1991-92 (ಡಿಸೆಂಬರ್)ರಲ್ಲಿ 1,503 ಎಕರೆಗೆ ರೂ.87.72 ಲಕ್ಷ ರೂ. ಇದ್ದು, ಮಾರಾಟ ಬೆಲೆ ಸರಾಸರಿ ಎಕರೆಗೆ 5,836 ರೂ. ಇದ್ದಿತು.

ಹುಬ್ಬಳ್ಳಿ ತಾಲೂಕಿನಲ್ಲಿ 1960-61 ರಲ್ಲಿ 1,186 ಎಕರೆ ವ್ಯಾಪಾರವಾಗಿದ್ದು ಎಕರೆಗೆ ಸರಾಸರಿ 524 ರೂ. ಬೆಲೆ ಇದ್ದಿತು. 1991-92 ರಲ್ಲಿ 1,976 ಎಕರೆ ವಿಲೇವಾರಿಯಾಗಿದ್ದು, ಬೆಲೆ ಸರಾಸರಿ 14,080 ರೂ. ಇದ್ದಿತು.

1991-92 ರಲ್ಲಿ ಖುಷ್ಕಿ ಜಮೀನು ಎಕರೆಗೆ ಹುಬ್ಬಳ್ಳಿ ತಾಲೂಕಿನಲ್ಲಿ ಅತ್ಯಂತ ಹೆಚ್ಚು ಅಂದರೆ ಸರಾಸರಿ ರೂ.14,080 ಇದ್ದಿತು; ಮತ್ತು ಮುಂಡರಗಿ ತಾಲೂಕಿನಲ್ಲಿ ಕಡಿಮೆ ಅಂದರೆ ಸರಾಸರಿ ರೂ.3,444 ಇದ್ದಿತು. 1954 ರಿಂದ 1975 ರವರೆಗೆ, ಎಲ್ಲಾ ತಾಲೂಕಿನಲ್ಲಿಯೂ ಭೂಮಿಯ ವಿಲೇವಾರಿ ಹೆಚ್ಚು ಪ್ರಮಾಣದಲ್ಲಿ ಆಗಿದೆ. ಮೂರು ದಶಕಗಳಲ್ಲಿ ಈ ಭೂಮಿಯ ಬೆಲೆಯ ಹೆಚ್ಚಳ ಜಿಲ್ಲೆಯಲ್ಲಿ ಈ ರೀತಿ ಇದೆ. (ತಾಲೂಕುವಾರು) ಕಲಘಟಗಿ - 61.87 ಪಟ್ಟು (ತರಿ), ಖುಷ್ಕಿ - 18.06 ರಷ್ಟು, ಹಾವೇರಿ - 39.78 ಪಟ್ಟು, ಸವಣೂರು - 37.72 ಪಟ್ಟು, ಧಾರವಾಡ 31.4 ಪಟ್ಟು, ಶಿಗ್ಗಾಂವಿ - 31.19 ಪಟ್ಟು, ಹಾನಗಲ್ - 30.42 ಪಟ್ಟು, ಹುಬ್ಬಳ್ಳಿ - 26.87 ಪಟ್ಟು, ಗದಗ - 25.88 ಪಟ್ಟು, ಶಿರಹಟ್ಟಿ - 25.41 ಪಟ್ಟು, ಬ್ಯಾಡಗಿ - 24.54 ಪಟ್ಟು, ಹಿರೇಕೆರೂರು - 23.34 ಪಟ್ಟು, ಕುಂದಗೋಳ - 21.72 ಪಟ್ಟು, ರಾಣೆಬೆನ್ನೂರು - 20.05 ಪಟ್ಟು (ಉಳಿದ ತಾಲೂಕುಗಳ ಮಾಹಿತಿ ದೊರೆತಿಲ್ಲ). ತರಿ ಜಮೀನು ಹೆಚ್ಚಾಗಿ, ಕಲಘಟಗಿ, ನರಗುಂದ ಮತ್ತು ಸವಣೂರು ತಾಲೂಕುಗಳಲ್ಲಿ ವಿಲೇವಾರಿಯಾಗಿವೆ.

ಧಾರವಾಡ ಜಿಲ್ಲೆಯಲ್ಲಿ, 1960-61 ರಿಂದ 1991-92 ರ ವರೆಗೆ ಭೂಮಿ ಮಾರಾಟವನ್ನು ತೋರಿಸುವ ಪಟ್ಟಿಯನ್ನು ಇಲ್ಲಿ ಕೊಡಲಾಗಿದೆ. (ತಾಲೂಕುವಾರು) : 20 ವರ್ಷಗಳಲ್ಲಿ ಸವಣೂರು ತಾಲೂಕಿನಲ್ಲಿ 37.72 ರಷ್ಟು ಮಾರಾಟದಲ್ಲಿ ಹೆಚ್ಚಳವುಂಟಾಗಿದೆ. ಹಾವೇರಿ ತಾಲೂಕಿನಲ್ಲಿ 30 ವರ್ಷಗಳಲ್ಲಿ 39.78 ರಷ್ಟು ಹೆಚ್ಚಳವುಂಟಾಗಿದೆ. ಹಾಗೆಯೇ ಕಲಘಟಗಿಯಲ್ಲಿ 61 ರಷ್ಟು ಮಾರಾಟದಲ್ಲಿ ಹೆಚ್ಚಳವಾಗಿದೆ.

**ಕೋಷ್ಟಕ 8.10 : ಭೂಮಿಯ ಮಾರಾಟ ದರ ಪ್ರತಿ ಎಕರೆಗೆ (ಖುಷ್ಕಿ) ರೂ.ಗಳಲ್ಲಿ**

| ಕ್ರ.ಸಂ. | ತಾಲೂಕುಗಳು | 1960-61 | 1970-71 | 1980-81 | 1985-86 | 1990-91 | 1991-92 | ಹೆಚ್ಚಳ |
|---|---|---|---|---|---|---|---|---|
| 1. | ಬ್ಯಾಡಗಿ | 318 | 554 | 2385 | 3969 | 6778 | 7804 | 24.54 ರಷ್ಟು |
| 2. | ಧಾರವಾಡ | 358 | 405 | 1076 | 6021 | 9346 | 11276 | 31.4 ರಷ್ಟು |
| 3. | ಗದಗ | 366 | 760 | 1801 | 5415 | 7197 | 9473 | 25.88 ರಷ್ಟು |
| 4. | ಹಾನಗಲ್ | 193 | 64 | 1776 | 3075 | 4671 | 5872 | 30.42 ರಷ್ಟು |
| 5. | ಹಾವೇರಿ | 274 | 918 | 2159 | 4216 | 9386 | 10901 | 39.78 ರಷ್ಟು |

| ಕ್ರ.ಸಂ. | ತಾಲೂಕುಗಳು | 1960-61 | 1970-71 | 1980-81 | 1985-86 | 1990-91 | 1991-92 | ಹೆಚ್ಚಳ |
|---|---|---|---|---|---|---|---|---|
| 6. | ಹಿರೇಕೆರೂರು | 250 | 500 | 1000 | 2558 | 4500 | 5836 | 23.34 ರಷ್ಟು |
| 7. | ಹುಬ್ಬಳ್ಳಿ | 524 | 1374 | 4173 | 8040 | 12317 | 14080 | 26.87 ರಷ್ಟು |
| 8. | ಕಲಘಟಗಿ | 294 | 875 | 2020 | 4210 | 8985 | 18190 | 61.87 ರಷ್ಟು |
| 9. | ಕುಂದಗೋಳ | 444 | 842 | 3372 | 7894 | 12335 | 9646 | 21.72 ರಷ್ಟು |
| 10. | ಮುಂಡರಗಿ | - | - | 1073 | 1541 | 2834 | 3444 | 4.14 ರಷ್ಟು |
| 11. | ನರಗುಂದ | - | - | - | 4105 | 7696 | 10880 | 1.54 ರಷ್ಟು |
| 12. | ನವಲಗುಂದ | 374 | 1000 | 3498 | - | - | - | - |
| 13. | ರಾಣೆಬೆನ್ನೂರು | 444 | 870 | 1930 | 4541 | 7368 | 8885 | 20.05 ರಷ್ಟು |
| 14. | ರೋಣ | 366 | 583 | 1701 | 2583 | 5032 | 6721 | 18.36 ರಷ್ಟು |
| 15. | ಸವಣೂರ್ | - | 266 | 1995 | 3948 | 6994 | 10034 | 37.72 ರಷ್ಟು |
| 16. | ಶಿಗ್ಗಾಂವಿ | 327 | 735 | 2190 | 3036 | 7637 | 10200 | 31.19 ರಷ್ಟು |
| 17. | ಶಿರಹಟ್ಟಿ | 205 | 476 | 1090 | 2261 | 4802 | 5129 | 25.01 ರಷ್ಟು |

ಆಧಾರ : ತಾಲೂಕು ಸಬ್‌ರಿಜಿಸ್ಟ್ರಾರ್‌ಗಳು ಒದಗಿಸಿದ ಮಾಹಿತಿ.

### ಭೂಮಿಯ ಬಳಕೆ : ಕರ್ನಾಟಕ ರಾಜ್ಯ ದೂರಸಂವೇದಿ ತಂತ್ರಜ್ಞಾನ ಬಳಕೆ ಕೇಂದ್ರ (ಕರ್ನಾಟಕ ಸ್ಟೇಟ್ ರಿಮೋಟ್ ಸೆನ್ಸಿಂಗ್ ಟೆಕ್ನಾಲಜಿ ಯುಟಿಲೈಸೇಶನ್ ಸೆಂಟರ್)

ಈ ಕೇಂದ್ರವು ಉಪಗ್ರಹದ ಮೂಲಕ ಪಡೆದಿರುವ ಮಾಹಿತಿಯಂತೆ ಧಾರವಾಡ ಜಿಲ್ಲೆಯಲ್ಲಿ ಭೂಮಿಯ ಉಪಯೋಗ 1988-89 ರಲ್ಲಿ ಈ ಕೆಳಕಂಡಂತಿದೆ.

1) ನಿರ್ಮಾಣ ಮಾಡಿರುವ ಪ್ರದೇಶ - 4529 ಹೆ - ಒಟ್ಟು ಭೌಗೋಳಿಕ ಕ್ಷೇತ್ರದ 0.33 ಶೇ.

| | | | |
|---|---|---|---|
| 2) | ಕೃಷಿ ಪ್ರದೇಶ | 11,78,452 ಹೆ. | 85.78 ಶೇ. |
| 3) | ಅರಣ್ಯ ಪ್ರದೇಶ | 1,07,704 ಹೆ. | 07.84 ಶೇ. |
| 4) | ಪಾಳು ಭೂಮಿ | 72,831 ಹೆ. | 5.30 ಶೇ. |
| 5) | ಕೆರೆ, ಭಾವಿ ಇತ್ಯಾದಿಗಳ ವಿಸ್ತಾರ | 10,221 ಹೆ. | 0.74 ಶೇ. |
| 6) | ಇತರೆ | 63 ಹೆ. | 0.01 ಶೇ. |
| | ಒಟ್ಟು | 13,73,800 ಹೆ. | 100.0 ಶೇ |

(ಕೋಷ್ಟಕ 8.11 ಮುಂದಿನಪುಟದಲ್ಲಿ)

ಈ ಜಿಲ್ಲೆಯಲ್ಲಿ 9 ವರ್ಷದ ಅವಧಿಯಲ್ಲಿ ಅಂದರೆ 1979-80 ರಿಂದ 1988-89 ರವರೆಗೆ ಅರಣ್ಯ ಪ್ರದೇಶದಲ್ಲಿ ಸೇ.1.91 ರಷ್ಟು ಹೆಚ್ಚಾಗಿದ್ದು ಸಾಗುವಳಿಗೆ ದೊರಕದ ಪ್ರದೇಶ ಶೇ. 38.2 ರಷ್ಟು ಹೆಚ್ಚಾಗಿದೆ. ಬಂಜರು ಮತ್ತು ವ್ಯವಸಾಯ ಮಾಡಲು ಸಾಧ್ಯವಿಲ್ಲದ ಪ್ರದೇಶದಲ್ಲಿ ಶೇ.28.47 ರಷ್ಟು ಕಡಿಮೆಯಾಗಿರುವುದು ಕಂಡುಬರುತ್ತದೆ. ಹಾಗೂ ಬೀಳೂ ಅಲ್ಲದ ಉಳುಮೆಗೂ ಬಳಸದ ಜಮೀನು ಶೇ.44.2 ಕಡಿಮೆಯಾಗಿದೆ. ಮತ್ತು ಚಾಲ್ತಿ ಸಾಗುವಳಿಯಲ್ಲಿ ಬೀಳುಬಿಟ್ಟ ಜಮೀನು ಶೇ. 241.12 ರಷ್ಟು ಹೆಚ್ಚಾಗಿದೆ. ಆದರೆ ಬಿತ್ತನೆಯಾಗಿರುವ ನಿವ್ವಳ ಪ್ರದೇಶದಲ್ಲಿ ಶೇ. 7.28 ರಷ್ಟು ಕಡಿಮೆಯಾಗಿರುವುದು ಗಮನಿಸಬೇಕಾದ ಅಂಶ.

## ಕೋಷ್ಟಕ 8.11 : ಭೂಮಿಯ ಉಪಯೋಗದ ವಿವರ

| | ಸಾವಿರ ಹೆಕ್ಟೇರ್‌ಗಳಲ್ಲಿ | | | | |
|---|---|---|---|---|---|
| | 1960-61 | 1970-71 | 1980-81 | 1991-92 | ಹೆಚ್ಚಳ : ಕಡಿಮೆ |
| 1. ಗ್ರಾಮ ಸಂಬಂಧವಾದ ಕಾಗದಪತ್ರಗಳ ಮೇರೆಗೆ ಭೌಗೋಳಿಕ ಪ್ರದೇಶ | 1377.1 | 1378.0 | 1378.0 | 1378.0 | |
| 2. ಅರಣ್ಯ | 8.1 | 8.2 | 8.20 | 8.37 | + .37 |
| 3. ಸಾಗುವಳಿಗೆ ದೊರಕದ ಪ್ರದೇಶ | | | | | |
| ಅ) ವ್ಯವಸಾಯವನ್ನು ಬಿಟ್ಟು ಇತರ ಉದ್ದೇಶಗಳಿಗೆ ಉಪಯೋಗಿಸುವ ಪ್ರದೇಶ | 0.7 | 1.62 | 2.10 | 4.54 | + 4.47 |
| ಬ) ಬಂಜರು ಮತ್ತು ವ್ಯವಸಾಯ ಮಾಡಲು ಸಾಧ್ಯವಲ್ಲದ ಪ್ರದೇಶ | 3.9 | 1.97 | 2.26 | 1.56 | - 2.34 |
| 4. ಇತರ ಬೆಳೆ ಅಲ್ಲದ ಉಳುಮೆ ಆಗದ ಜಮೀನು | | | | | |
| ಅ) ಸಾಗುವಳಿಗೆ ಯೋಗ್ಯವಾದ ಬಂಜರು ಪ್ರದೇಶ | 0.7 | 0.72 | 0.70 | 0.49 | - 0.21 |
| ಬ) ಖಾಯಂ ಗೋಮಾಳ ಮತ್ತು ಇತರ ಹುಲ್ಲುಗಾವಲುಗಳು | 2.4 | 2.80 | 2.68 | 1.36 | - 1.04 |
| ಇ) ಬಿತ್ತನೆಯಾಗಿರುವ ಪ್ರದೇಶದಲ್ಲಿ ನಮೂದಿಸಿಲ್ಲದ ವಿವಿಧ ವೃಕ್ಷ ಮತ್ತು ತೋಪುಗಳಿರುವ ಜಮೀನುಗಳು | 0.8 | 0.35 | 0.30 | 0.17 | - 0.63 |
| 5. ಬೀಳು ಜಮೀನು | | | | | |
| ಅ) ಚಾಲ್ತಿ ಸಾಗುವಳಿಯಲ್ಲಿ ಬೀಳುಬಿಟ್ಟ ಜಮೀನು | 1.0 | 1.85 | 2.84 | 2.70 | + 1.7 |
| ಬ) ಇತರ ಬೀಳು ಜಮೀನುಗಳು | 1.5 | 1.58 | 0.70 | 0.80 | - 0.70 |
| 6. ಬಿತ್ತನೆಯಾಗುವ ನಿವ್ವಳ ಪ್ರದೇಶ | | | | | |
| 7. ಒಟ್ಟು ಬಿತ್ತನೆಯಾಗಿರುವ ಪ್ರದೇಶ | 1162500 ಹ. | 1144300 ಹ. | 1160463 ಹ. | 1102777 ಹ. | |

ಆಧಾರ : ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ.

ಒಂದಕ್ಕಿಂತ ಹೆಚ್ಚು ಸಲ ಬಿತ್ತನೆಯಾಗಿರುವ ಪ್ರದೇಶದಲ್ಲಿ ಶೇ. 426 ರಷ್ಟು ಹೆಚ್ಚಾಗಿದೆ. ನೀರಾವರಿ ಕಾರ್ಯ ಗಮನೀಯವಾಗಿ ಹೆಚ್ಚಾಗಿದ್ದು ಮತ್ತು ಬೇಸಾಯ ವಿಧಾನಗಳಲ್ಲಿಯೂ ಗಮನಾರ್ಹವಾದ ಬೆಳವಣಿಗೆ ಕಂಡು ಬಂದಿರುವುದು ಸ್ಪಷ್ಟ.

**ಭೂ ಬಳಕೆ (1990-91ರಲ್ಲಿ) :** ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 13.78 ಲಕ್ಷ ಹೆ.ಗಳಿದ್ದು ಅದರಲ್ಲಿ ಅರಣ್ಯ 1.15 ಲಕ್ಷ ಹೆ. (ಶೇ. 8.3) ಇರುತ್ತದೆ. ಸಾಗುವಳಿಗೆ ಲಭ್ಯವಿಲ್ಲದ ಭೂಮಿ 0.83 ಲಕ್ಷ ಹೆ. (ಶೇ.6.0), ಬೀಳುಭೂಮಿ ಅಲ್ಲದ ಸಾಗುವಳಿ ಮಾಡದಿರುವ ಇತರ ಬೀಳುಭೂಮಿ 0.28 ಲಕ್ಷ ಹೆ. (ಶೇ. 2.3), ಬೀಳು ಭೂಮಿ 0.9 ಲಕ್ಷ ಹೆ. ಇದ್ದು ಇದರಲ್ಲಿ 9.72 ಲಕ್ಷ ಹೆ. ಬಿತ್ತನೆಯಾಗಿರುತ್ತದೆ. ಎರಡು ಪೀಕು (ಬೆಳೆ) ತೆಗೆದುಕೊಂಡ ಕ್ಷೇತ್ರ 1.56 ಲಕ್ಷ ಹೆ.ಇರುತ್ತದೆ. ಇದು ಹಿಂದಿನ ವರ್ಷಕ್ಕಿಂತ ಶೇ.18.32 ರಷ್ಟು ಕಡಿಮೆ. 199-91 ರಲ್ಲಿ ನಿವ್ವಳ ಬಿತ್ತನೆಯಾದ ಪ್ರದೇಶ ಬ್ಯಾಡಗಿ ತಾಲೂಕಿನಲ್ಲಿ 0.30 ಲಕ್ಷ ಹೆ., ಧಾರವಾಡ ತಾಲೂಕಿನಲ್ಲಿ 0.84 ಲಕ್ಷ ಹೆ., ಗದಗ ತಾಲೂಕಿನಲ್ಲಿ 0.62 ಲಕ್ಷ ಹೆ., ಹಾನಗಲ್ ತಾಲೂಕಿನಲ್ಲಿ 0.52 ಲಕ್ಷ ಹೆ., ಹಾವೇರಿ ತಾಲೂಕಿನಲ್ಲಿ 0.63 ಲಕ್ಷ ಹೆ., ಹಿರೇಕೆರೂರು 0.56 ಲಕ್ಷ ಹೆ., ಹುಬ್ಬಳ್ಳಿ ತಾಲೂಕಿನಲ್ಲಿ 0.64 ಲಕ್ಷ ಹೆ., ಕಲಘಟಗಿ 0.42 ಲಕ್ಷ ಹೆ., ಕುಂದಗೋಳ 0.61 ಲಕ್ಷ ಹೆ., ಮುಂಡರಗಿ 0.38 ಲಕ್ಷ ಹೆ., ನರಗುಂದ 0.35 ಲಕ್ಷ ಹೆ., ನವಲಗುಂದ 0.81 ಲಕ್ಷ ಹೆ., ರಾಣೆಬೆನ್ನೂರು 0.62 ಲಕ್ಷ ಹೆ., ರೋಣ 0.81 ಲಕ್ಷ ಹೆ., ಸವಣೂರು 0.48 ಲಕ್ಷ ಹೆ., ಶಿಗ್ಗಾಂವಿ 0.42 ಲಕ್ಷ ಹೆ., ಹಾಗೂ ಶಿರಹಟ್ಟಿ 0.73 ಲಕ್ಷ ಹೆ. ಹಿಂದಿನ ಸಾಲಿಗೆ ಹೋಲಿಸಿದಾಗ ಜಿಲ್ಲೆಯ ಬಿತ್ತನೆಯಾದ ನಿವ್ವಳ ವಿಸ್ತೀರ್ಣ ಶೇ.7.69 ರಷ್ಟು ಕಡಿಮೆಯಾಗಿದೆ.

**ನಗರೀಕರಣ :** ಒಂದು ಜಿಲ್ಲೆಯಲ್ಲಿ ನಗರ ಜನಸಂಖ್ಯೆಯು ನಗರೀಕರಣವನ್ನು ತೋರ್ಪಡಿಸುವ ಮಾಪನವಾಗಿರುತ್ತದೆ. 1901 ರಿಂದ 1991 ರ ವರೆಗಿನ ನಗರವಾಸಿಗಳ ಜನಸಂಖ್ಯೆಯನ್ನು ಇಲ್ಲಿ ಕೊಡಲಾಗಿದೆ : 1901 - 2,67,752; 1911 - 2,39,585 (-10.5); 1921 - 2,77,901 (+13.8); 1931 - 3,22,717 (+16.12); 1941 - 3,45,993 (+7.2); 1951 - 4,92,804 (+29.7); 1961 - 5,24,624 (+6.4) ; 1971 - 7,37,973 (+40.6); 1981 - 10,38,258 (+28.9); ಹಾಗೂ 1991 - 12,23,839 (+15.16). 1941- ರಿಂದ 1951 ರ ದಶಕದಲ್ಲಿ ಶೇ.29.7 ಹೆಚ್ಚಳವಾಗಿದ್ದು, 1961-1971 ರ ದಶಕದಲ್ಲಿ ಶೇ.40.6 ಹೆಚ್ಚಳವುಂಟಾಗಿದೆ. ಇದರಿಂದ, 1941 ರ ನಂತರ, ನಗರ ಜನಸಂಖ್ಯೆಯು ಹೆಚ್ಚಾಗಿರುವುದು ಬಹುಶಃ ಕೈಗಾರೀಕರಣ ಹಾಗೂ ಔದ್ಯಮಿಕ ಅವಕಾಶಗಳು ಧಾರವಾಡ-ಹುಬ್ಬಳ್ಳಿಯಲ್ಲಿ ಹಾಗೂ ಇತರ ಕೇಂದ್ರಗಳಲ್ಲಿ ಒದಗಿಸಿರುವುದು ಕಾರಣವೆಂದು ತಿಳಿಯಬಹುದು. 1901 ರಲ್ಲಿ 100 ಎಂಬ ಅಂಕಿಯನ್ನು ಮೂಲವಾಗಿಟ್ಟುಕೊಂಡಾಗ, ಜಿಲ್ಲೆಯಲ್ಲಿ ನಂತರದ ದಶಕಗಳಲ್ಲಿ ನಗರೀಕರಣದ ಸೂಚ್ಯಂಕಗಳು ಹೀಗಿವೆ:

| | | | | | |
|---|---|---|---|---|---|
| 1901 | - | 100 | 1951 | - | 184.05 |
| 1911 | - | 89.48 | 1961 | - | 195.14 |
| 1921 | - | 103.79 | 1971 | - | 275.62 |
| 1931 | - | 120.53 | 1981 | - | 387.77 |
| 1941 | - | 129.52 | 1991 | - | 456.78 |

ಪಟ್ಟಣಗಳ ಸಂಖ್ಯೆಯಲ್ಲಿ 1901 ರಿಂದ 1931 ರವರೆಗೆ 25 ಸತತವಾಗಿ ಇದ್ದು 1941 ರಲ್ಲಿ 22, 1951 ರಲ್ಲಿ 29, 1961 ರಲ್ಲಿ 17, 1971 ರಲ್ಲಿ 18, 1981 ರಲ್ಲಿ 22 ಹಾಗೂ 1991 ರಲ್ಲಿ 22 ಇದ್ದಿತು.

1951 ರ ಜನಗಣತಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳೆಂಬ ಸಂಖ್ಯೆಗಳನ್ನು ಕೊಟ್ಟಿದ್ದರೂ, 1961 ರಲ್ಲಿ ಪಟ್ಟಣಗಳನ್ನು ವೃತ್ತಿಗೆ ಅನುಗುಣವಾಗಿ ವರ್ಗೀಕರಿಸಲಾಗಿತ್ತು. 1971 ರ ಜನಗಣತಿಯಲ್ಲಿ ಪಟ್ಟಣ ಪ್ರದೇಶ ಎಂದರೆ, 1) ಮುನಿಸಿಪಾಲಿಟಿ, ಕಾರ್ಪೊರೇಶನ್, ಕಂಟೋನಮೆಂಟ್, ಸ್ಯಾನಿಟರಿ ಬೋರ್ಡ್ ಅಥವಾ ಅಧಿಸೂಚಿತ ಪ್ರದೇಶವಾಗಿರುವ ಎಲ್ಲಾ ಸ್ಥಳಗಳು, 2) ಈ ಕೆಳಕಂಡ ನಿಬಂಧನೆಗಳನ್ನು ಹೊಂದಿರುವ ಸ್ಥಳಗಳು.

ಅ) ಕನಿಷ್ಟ 5,000 ಜನಸಂಖ್ಯೆ ಇರಬೇಕು, (ಬ) ಕೆಲಸ ಮಾಡುವ ಪುರುಷ ಜನಸಂಖ್ಯೆಯಲ್ಲಿ ಶೇ.75 ಭಾಗ,ಕೃಷಿಯೇತರ ಕೆಲಸಗಳಲ್ಲಿ ನಿರತರಾಗಿರಬೇಕು ಹಾಗೂ (ಕ) ಚದರ ಕಿ.ಮೀ.ಗೆ 400 - ಕನಿಷ್ಟ ಜನಸಾಂದ್ರತೆ ಇರಬೇಕು.

1981 ರ ಜನಗಣತಿಯಲ್ಲಿ ಪಟ್ಟಣಗಳ ವಿಶ್ಲೇಷಣೆಯನ್ನು ಸ್ವಲ್ಪ ಬದಲಾವಣೆ ಮಾಡಲಾಗಿದೆ. ಇದರಂತೆ ಪಶುಸಂಗೋಪನೆ, ಅರಣ್ಯ, ಮೀನುಗಾರಿಕೆ, ಮೊದಲಾದ ಕೆಲಸದವರನ್ನು ಕೃಷಿ ಕೆಲಸಗಾರರೆಂದು ಈ ಉದ್ದೇಶಕ್ಕಾಗಿ ಪರಿಗಣಿಸಲಾಯಿತು. (1961-71 ರಲ್ಲಿ ಈ ಕೆಲಸಗಾರರನ್ನು ಕೃಷಿಯೇತರ ಕೆಲಸಗಾರರೆಂದು ಪರಿಗಣಿಸಲಾಗಿತ್ತು). ಈ ಕೆಲವು ಕಾರಣಗಳಿಂದ ಪಟ್ಟಣಗಳ ಸಂಖ್ಯೆ ಕಡಿಮೆಯಾಗಿದ್ದು ನಂತರ ಹೆಚ್ಚಾಗಿದೆ. ಜಿಲ್ಲೆಯಲ್ಲಿ 1971 ರ ಜನಗಣತಿಯಲ್ಲಿ ಹಿರೇಕೆರೂರು, ಕಲಘಟಗಿ, ಮುಳಗುಂದ ಮತ್ತು ಮುಂಡರಗಿಗಳು, ಪಟ್ಟಣವಾಗಿ ಪರಿಗಣಿಸಲ್ಪಟ್ಟಿರಲಿಲ್ಲ. ಆದರೆ 1981 ರಲ್ಲಿ ಪಟ್ಟಣಗಳೆಂದು ಪರಿಗಣಿಸಲ್ಪಟ್ಟಿವೆ. ಈ ಜಿಲ್ಲೆಯಲ್ಲಿ 1411 ಗ್ರಾಮಗಳಿದ್ದು, 41 ಬೇಚರಾಕ್ ಹಳ್ಳಿಗಳಾಗಿದ್ದು, 22 ಪಟ್ಟಣಗಳಿವೆ. 1981 ರ ಜನಗಣತಿಯಂತೆ, 5000 ಕ್ಕೂ ಹೆಚ್ಚಿನ ಜನಸಂಖ್ಯೆ ಇರುವ ಗ್ರಾಮಗಳ ಸಂಖ್ಯೆ ಹೀಗಿದೆ. (5000 ಕ್ಕಿಂತ ಕಡಿಮೆ ಇರುವ ಪಟ್ಟಣಗಳು ಇಲ್ಲ). (ಈ ವಿವರ 1991 ರ ಜನಗಣತಿಯಂತೆ ಇನ್ನೂ ಸಿದ್ಧವಾಗಿಲ್ಲ).

**ಕೋಷ್ಟಕ 8.12 : 5000 ಕ್ಕೂ ಹೆಚ್ಚಿನ ಜನಸಂಖ್ಯೆ ಇರುವ ಗ್ರಾಮಗಳ ಸಂಖ್ಯೆ.**

| | ತಾಲೂಕು | ಗ್ರಾಮಗಳು | ಜನಸಂಖ್ಯೆ | ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡಾ |
|---|---|---|---|---|
| 1) | ಬ್ಯಾಡಗಿ | 1 | 7001 | 0.03 |
| 2) | ಧಾರವಾಡ | 4 | 29,906 | 0.11 |
| 3) | ಗದಗ | 5 | 35,838 | 0.14 |
| 4) | ಹಾನಗಲ್ | 2 | 14,106 | 0.05 |
| 5) | ಹಾವೇರಿ | 7 | 47,634 | 0.18 |
| 6) | ಹಿರೇಕೆರೂರು | 4 | 27,567 | 0.10 |
| 7) | ಹುಬ್ಬಳ್ಳಿ | 2 | 15,474 | 0.06 |
| 8) | ಕಲಘಟಗಿ | 1 | 5,458 | 0.02 |
| 9) | ಕುಂದಗೋಳ | 4 | 30,990 | 0.12 |
| 10) | ಮುಂಡರಗಿ | 3 | 19,678 | 0.07 |
| 11) | ನರಗುಂದ | 1 | 6,577 | 0.03 |
| 12) | ನವಲಗುಂದ | 3 | 17,942 | 0.07 |
| 13) | ರಾಣೆಬೆನ್ನೂರು | 3 | 19,049 | 0.07 |
| 14) | ರೋಣ | 4 | 24,262 | 0.09 |
| 15) | ಸವಣೂರು | 1 | 5,116 | 0.02 |
| 16) | ಶಿಗ್ಗಾಂವಿ | 3 | 21,231 | 0.08 |
| 17) | ಶಿರಹಟ್ಟಿ | 3 | 19,271 | 0.07 |
| | ಜಿಲ್ಲಾ | 51 | 3,47,100 | 1.31 |

(ಸೆನ್ಸಸ್ ಆಫ್ ಇಂಡಿಯಾ 1981, ಭಾಗ 2 ಎ, ಸೆಕ್ಷನ್ 9, ಪು.176)

**ಕೋಷ್ಟಕ 8.13 : 1901-1991 ರವರೆಗೆ, ಜಿಲ್ಲೆಯಲ್ಲಿನ ನಗರ, ಮತ್ತು ಪಟ್ಟಣಗಳ ವಿವರ.**

| ವರ್ಷ | ವರ್ಗ 1 | | ವರ್ಗ 2 | | ವರ್ಗ 3 | | ವರ್ಗ 4 | | ವರ್ಗ 5 | | ವರ್ಗ 6 | | ಮೊತ್ತ | |
|---|---|---|---|---|---|---|---|---|---|---|---|---|---|---|
| | ಸಂ. | ಜನಸಂಖ್ಯೆ | ಸಂ. | ಜನಸಂಖ್ಯೆ | ಸಂ. | ಜನಸಂಖ್ಯೆ | ಸಂ. | ಜನಸಂಖ್ಯೆ | ಸಂ. | ಜನಸಂಖ್ಯೆ | ಸಂ. | ಸಂಖ್ಯೆ | ಸಂ. | ಜನಸಂಖ್ಯೆ |
| 1901 | - | - | 1 | 81,143 | 1 | 30,652 | 3 | 38,127 | 13 | 95,127 | 6 | 22,703 | 24 | 2,67,752 |
| 1911 | - | - | 1 | 91,031 | 1 | 29,902 | - | - | 11 | 77,968 | 11 | 40,684 | 24 | 2,39,585 |
| 1921 | 1 | 1,00,992 | - | - | 1 | 41,040 | 2 | 23,764 | 12 | 81,391 | 8 | 30,720 | 24 | 2,77,907 |
| 1931 | 1 | 1,24,398 | - | - | 1 | 45,852 | 3 | 37,909 | 14 | 95,726 | 5 | 18,832 | 24 | 3,22,717 |
| 1941 | 1 | 1,43,504 | 1 | 56,283 | - | - | 4 | 51,390 | 11 | 78,925 | 6 | 15,981 | 21 | 3,46,083 |
| 1951 | 1 | 1,96,180 | 1 | 65,509 | 1 | 25,282 | 5 | 68,549 | 16 | 1,19,756 | 4 | 17,528 | 28 | 4,92,804 |
| 1961 | 1 | 2,48,489 | 1 | 76,614 | 2 | 52,347 | 10 | 1,30,788 | 2 | 16,386 | - | - | 16 | 5,24,624 |
| 1971 | 1 | 3,79,166 | 1 | 95,426 | 3 | 88,842 | 12 | 1,65,261 | 1 | 9,278 | - | - | 18 | 7,37,973 |
| 1981 | 2 | 6,44,476 | 1 | 56,118 | 5 | 1,30,622 | 14 | 2,05,042 | - | - | - | - | 22 | 10,38,258 |
| 1991 | ಲಭ್ಯವಿಲ್ಲ | | | | | | | | | | | | | |

(ಸೆನ್ಸಸ್, ಜನರಲ್ ಪಾಪ್ಯುಲೇಶನ್ ಟೇಬಲ್ಸ್) (ಪುಟ 253, 257) ಪುಟ - 11 ಎ.

ವರ್ಗ 1 - 1,00,000 ಜನಸಂಖ್ಯೆ ಮತ್ತು ಹೆಚ್ಚು; ವರ್ಗ 2 - 50,000 ರಿಂದ 99,999; ವರ್ಗ 3 - 20,000 ರಿಂದ 49,999; ವರ್ಗ 4 - 10,000 ರಿಂದ 19,999; ವರ್ಗ 5 - 5,000 ರಿಂದ 9,999 ಮತ್ತು ವರ್ಗ 6 - 5,000 ಕ್ಕಿಂತ ಕಡಿಮೆ ಜನಸಂಖ್ಯೆ.

ಧಾರವಾಡ ಜಿಲ್ಲೆಯಲ್ಲಿ ಪಟ್ಟಣಗಳಲ್ಲಿನ ಜನಸಂಖ್ಯೆ 1901 ರಲ್ಲಿ ಶೇ.35.25 ಇದ್ದು, ರಾಜ್ಯದ ಸರಾಸರಿ 28.89 ಇದ್ದಿತು. ರಾಜ್ಯದಲ್ಲಿ ಜಿಲ್ಲೆಯು ನಗರೀಕರಣದಲ್ಲಿ 2 ನೇ ಸ್ಥಾನವನ್ನು ಹೊಂದಿವೆ. ರಾಜ್ಯದಲ್ಲಿನ ಪಟ್ಟಣಗಳ ಜನಸಂಖ್ಯೆಯು 1961 ರಲ್ಲಿ ಶೇ.22.33, 1971 ರಲ್ಲಿ ಶೇ.24.31 ಮತ್ತು 1981 ರಲ್ಲಿ ಶೇ.28.89 ಇದ್ದಿತು. ಇದೇ ಅಂಕಿ ಅಂಶಗಳು ಧಾರವಾಡ ಜಿಲ್ಲೆಗೆ ಅನ್ವಯಿಸಿ ಶೇ.26.88, ಶೇ.31.51 ಮತ್ತು ಶೇ.35.25 ಇದ್ದಿತು. 1951 ರಿಂದ 1961 ರಲ್ಲಿ ನಗರೀಕರಣವು ಹೆಚ್ಚಾಗಿಲ್ಲದಿರಲು ಪಟ್ಟಣಗಳ ಸಂಖ್ಯೆ ಕಡಿಮೆಯಾದುದು ಕಾರಣ. ನಗರ ಅಥವಾ ಪಟ್ಟಣಗಳನ್ನು ಗುರುತಿಸಲು ಇದ್ದ ಮಾನದಂಡಗಳಲ್ಲಿ ಆದ ಬದಲಾವಣೆ ಇದರ ಮೂಲಕಾರಣ. 1951 ರಿಂದ 1961 ರ ದಶಕದಲ್ಲಿ ಪಟ್ಟಣಗಳ ಸಂಖ್ಯೆ 29 ರಿಂದ 17 ಕ್ಕೆ ಇಳಿದಿತ್ತು. ಮತ್ತು ಪಟ್ಟಣವಾಸಿಗಳ ಸಂಖ್ಯೆ ಶೇ.31.26 ರಿಂದ ಶೇ.26.88 ಕ್ಕೆ ಇಳಿದಿತ್ತು. 1961 ರ ನಂತರ ಪಟ್ಟಣಗಳ ಸಂಖ್ಯೆ ಮತ್ತು ಪಟ್ಟಣದ ಜನಸಂಖ್ಯೆಯ ಪ್ರಮಾಣವೂ ಹೆಚ್ಚಾಯಿತು. 1961 ರಿಂದ 1971 ರ ವರೆಗೆ ಒಂದು ಪಟ್ಟಣವು ಹೆಚ್ಚಾಗಿ ಪಟ್ಟಣದ ಜನಸಂಖ್ಯೆಯ ಶೇಕಡಾ ಹೆಚ್ಚಳ 36.59 ಇದ್ದಿತು. (ರಾಜ್ಯದ ಶೇಕಡಾ ಹೆಚ್ಚಳ 35.23). 1971 ರಿಂದ 81 ರವರೆಗೆ ಪಟ್ಟಣಗಳ ಸಂಖ್ಯೆ 18 ರಿಂದ 22 ಕ್ಕೆ ಏರಿತು. ಆದರೆ ಈ ದಶಕದಲ್ಲಿ ನಗರೀಕರಣದ ವಿಸ್ತಾರ ಶೇ.40.69 ಇದ್ದು ಇದು ರಾಜ್ಯದ ವಿಸ್ತಾರಕ್ಕಿಂತ ಕಡಿಮೆ ಇದ್ದಿತು (ಶೇ.50.65). ತಾಲೂಕಿನಲ್ಲಿ ಆಗಿರುವ ವಿಸ್ತರಣೆಯನ್ನು ಪರಿಗಣಿಸಿದಾಗ, ಈ ದಶಕದಲ್ಲಿ, ಹಿರೇಕೆರೂರಿನಲ್ಲಿ ಕನಿಷ್ಟ ಅಂದರೆ ಶೇ.6.33, ಮತ್ತು ಹುಬ್ಬಳ್ಳಿಯಲ್ಲಿ ಗರಿಷ್ಟ ಅಂದರೆ ಶೇ.84.49 ಇದ್ದಿತು. ಎರಡನೆಯದಾಗಿ ಗದಗ ತಾಲೂಕು ಶೇ.51.87. ಒಟ್ಟು 17 ತಾಲೂಕುಗಳಲ್ಲಿ, 15 ತಾಲೂಕುಗಳಲ್ಲಿನ ಹೆಚ್ಚಳ, ಜಿಲ್ಲೆಯ ಹೆಚ್ಚಳಕ್ಕಿಂತ ಕಡಿಮೆ ಇದ್ದಿತು. ಗದಗ ತಾಲೂಕಿನಲ್ಲಿ, ಗದಗ-ಬೆಟಗೇರಿ ಮತ್ತು ಮುಳಗುಂದವನ್ನು ಪಟ್ಟಣವೆಂದು ವರ್ಗೀಕರಿಸಲಾಗಿದೆ.

1971ರಲ್ಲಿ ಜನಗಣತಿಯಂತೆ, ಜಿಲ್ಲೆಯಲ್ಲಿ 1359 ಹಳ್ಳಿಗಳೂ, 1981ರಲ್ಲಿ 1362 ಹಳ್ಳಿಗಳೂ ಇದ್ದವೂ. ಪ್ರತಿ ತಾಲೂಕಿನಲ್ಲಿಯೂ ಬದಲಾವಣೆಗಳಾಗಿದ್ದು, ದಶಕದಲ್ಲಿ ಒಟ್ಟು 3 ಹಳ್ಳಿಗಳು ಹೆಚ್ಚಾಗಿವೆ.

ಧಾರವಾಡ ತಾಲೂಕಿನಲ್ಲಿ 1971 ರಲ್ಲಿ 110 ಗ್ರಾಮಗಳಿದ್ದು, 1981 ರಲ್ಲಿ 111 ಗ್ರಾಮಗಳಾದವು. ಕಮಲಾಪುರ ಎಂಬ ಗ್ರಾಮವು ಸ್ವತಂತ್ರ ಗ್ರಾಮವನ್ನಾಗಿ 1971 ರಲ್ಲಿ ಪರಿಗಣಿಸದೆ, 1981 ರಲ್ಲಿ ಸ್ವತಂತ್ರ ಗ್ರಾಮವಾಗಿ ಪರಿಗಣಿಸಿದ್ದರಿಂದ, ಒಂದು ಗ್ರಾಮವು ಹೆಚ್ಚಾಯಿತು. ಹೀಗೆ ಕೆಲವು ತಾಲೂಕುಗಳಲ್ಲಿ ಗ್ರಾಮ, ಮುನಿಸಿಪಾಲಿಟಿ ಅಥವಾ ಅಧಿಸೂಚಿತ ಪ್ರದೇಶ ಇವುಗಳ ವಿವರಣೆಯಲ್ಲಿ, ಬದಲಾವಣೆ ಆದ ಕಾರಣ, ಗ್ರಾಮಗಳ ಸಂಖ್ಯೆಯಲ್ಲಿ ವ್ಯತ್ಯಾಸವುಂಟಾಗಿದೆ. 1901 ರಿಂದ 1971 ರವರೆಗೆ, ವರ್ಗ 1 ರ ಪಟ್ಟಣಗಳು, ಕೇವಲ ಒಂದು ಇದ್ದು, 1981 ರಲ್ಲಿ 2 ಕ್ಕೆ ಏರಿತು. ಹಾಗೂ ಜನಸಂಖ್ಯೆ 1971-81 ರ ದಶಕದಲ್ಲಿ ಸುಮಾರು ಶೇ.70 ರಷ್ಟು ಹೆಚ್ಚಾಗಿದೆ. ಇದಕ್ಕೆ ಗ್ರಾಮೀಣ ಪ್ರದೇಶದಿಂದ, ಪಟ್ಟಣ ಪ್ರದೇಶಕ್ಕೆ ಮುಖ್ಯವಾಗಿ ಹುಬ್ಬಳ್ಳಿ, ಗದಗಗಳಿಗೆ ವಲಸೆ ಬಂದುದು ಕಾರಣವಾಗಿದೆ. ಕೈಗಾರೀಕರಣ ಮತ್ತು ಉದ್ಯೋಗಗಳ ಅವಕಾಶ ಜನರ ವಲಸೆಗೆ ಕಾರಣವಾಗಿದೆ. ಹೀಗೆಯೇ ವರ್ಗ 3 ಮತ್ತು ವರ್ಗ 4 ರ ಪಟ್ಟಣಗಳಲ್ಲಿ 1971-81 ರ ದಶಕದಲ್ಲಿ 2 ಪಟ್ಟಣಗಳು ಹೆಚ್ಚಾಗಿದ್ದುದು ಕಂಡುಬಂದಿದೆ.

ಇತ್ತೀಚಿನ ಅಂದರೆ 1992-93 ರಲ್ಲಿ ಜಿಲ್ಲೆಯಲ್ಲಿ 1,322 ಜನವಸತಿ ಇರುವ ಗ್ರಾಮಗಳು, 40 ಜನವಸತಿ ಇಲ್ಲದ ಗ್ರಾಮಗಳು, 20 ಪಟ್ಟಣ, ನಗರ ಮತ್ತು ನಗರ ಸಮುದಾಯಗಳು ಇದ್ದವು. ಪಟ್ಟಣಗಳ ಜನಸಂಖ್ಯೆಯಲ್ಲಿ ಕಳೆದ ದಶಕಗಳಲ್ಲಿ ಉಂಟಾದ ಹೆಚ್ಚಳವನ್ನು ಈ ಮುಂದಿನ ಪಟ್ಟಿಯಲ್ಲಿ ಕೊಡಲಾಗಿದೆ. ಪ್ಲೇಗ್ ಮುಂತಾದ ಪಿಡುಗುಗಳು ಬಂದಾಗ ಜನ ಹಳೆಯ ಊರನ್ನು ತ್ಯಜಿಸಿ ಹೊಸ ಊರು ಕಟ್ಟಿಕೊಂಡರು. ಒಂದಕ್ಕಿಂತ ಹೆಚ್ಚು ಗ್ರಾಮಗಳ ಜನ ಒಂದು ಹೊಸಗ್ರಾಮ ಅಥವಾ ವಸತಿಯನ್ನು ಕಟ್ಟಿಕೊಂಡ ಉದಾಹರಣೆಗಳು ಇವೆ.

ಹುಬ್ಬಳ್ಳಿ ನಗರದಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯದ ಆಶ್ರಯದಲ್ಲಿ 1956-57 ರಲ್ಲಿ ನಡೆಸಿದ (ಪ್ರೊ|| ಬಿ.ಆರ್. ದೇಶಕ) ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆಯ ಕೆಲವು ವಿವರಗಳು ಹೀಗಿವೆ:

**ಗೃಹ ನಿರ್ಮಾಣ ಚಟುವಟಿಕೆ:** ಹುಬ್ಬಳ್ಳಿ ನಗರದಲ್ಲಿ, 1881 ರಿಂದ 1951 ರವರೆಗೆ ಇದ್ದ ಮನೆಗಳ ಸಂಖ್ಯೆ, ಒಟ್ಟು ಜನಸಂಖ್ಯೆ, ಮತ್ತು ಪ್ರತಿ ಮನೆಗೆ ಇದ್ದ ಜನಸಂಖ್ಯೆ ಈ ರೀತಿ ಇದೆ: 1881 - 7,468, 36,677 - 4.9; 1921 - 17,703, 69,206 - 3.9; 1941 - 21,228, 98,751 - 4.7; ಮತ್ತು 1951 - 14,092, 1,29,609 - 9.2

1881 ರಿಂದ 1921 ರವರೆಗೆ, ನಗರದ ಜನಸಂಖ್ಯೆಯ ಹೆಚ್ಚಳ ಶೇ.87 ಇದ್ದರೆ, ಮನೆಗಳ ಸಂಖ್ಯೆ ಶೇ.137 ರಷ್ಟು ಹೆಚ್ಚಿದೆ, ಇದರಿಂದ ಪ್ರತಿಮನೆಗೆ ಇದ್ದ ಜನಸಂಖ್ಯೆ. 4.9 ರಿಂದ 3.9 ಕ್ಕೆ ಇಳಿದಿತ್ತು. 1921 ರಿಂದ 1941 ರವರೆಗೆ ಜನಸಂಖ್ಯೆಯ ಹೆಚ್ಚಳ ಶೇ.42.7 ಇದ್ದು, ಮನೆಗಳ ಸಂಖ್ಯೆಯಲ್ಲಿ ಹೆಚ್ಚಳ ಶೇ.20 ಇದ್ದಿತು. 1941 ರಿಂದ 1951 ರವರೆಗೆ, ಮನೆಗಳ ಸಂಖ್ಯೆ ಕಡಿಮೆಯಾಗಿರುವುದು ಕಂಡುಬರುತ್ತದೆ. ಜನಗಣತಿಯಲ್ಲಿ ಮನೆಯ ವಿಶ್ಲೇಷಣೆಯಲ್ಲಿ ಬದಲಾವಣೆ ಇದ್ದುದರಿಂದ, 'ಮನೆ'ಗಳ ಸಂಖ್ಯೆ ಕಡಿಮೆಯಾಗಿದೆ. ಈ ಸಮೀಕ್ಷೆಯಲ್ಲಿ ಅಂದರೆ ಒಟ್ಟು 2,589 ಮನೆಗಳಲ್ಲಿನ ವಿವರ ಹೀಗಿದ್ದಿತು: ಮೂರು ಜನ ಅಥವಾ ಕಡಿಮೆ ಇರುವ ಕುಟುಂಬ - 744; 4-6 ಜನಗಳಿರುವ ಕುಟುಂಬ - 1,069; 7-9 ಜನಗಳಿರುವ ದೊಡ್ಡ ಕುಟುಂಬ - 538 ; ಮತ್ತು 10 ಜನಕ್ಕಿಂತಲೂ ಹೆಚ್ಚು ಇರುವ ಕುಟುಂಬ - 238. ಇವುಗಳಲ್ಲಿ ಶೇ.46 ರಷ್ಟು ಸಣ್ಣ ಕುಟುಂಬಗಳಲ್ಲಿ ಒಂದು ಕೊಠಡಿ, ಮತ್ತು ಮಧ್ಯಮ ವರ್ಗದ ಕುಟುಂಬಗಳಲ್ಲಿ ಶೇ.79 ಮನೆಗಳಲ್ಲಿ 2 ಕೊಠಡಿಗಳಿದ್ದವು. ಇದೇ ಸಮೀಕ್ಷೆಯಲ್ಲಿ ವಾಸ ಮಾಡುವ ಮನೆಯ ವಿಸ್ತೀರ್ಣದಂತೆ, ವರ್ಗೀಕರಿಸಿದ ವಿವರ.

ನೂರು ಚ.ಅಡಿಗಳಿಗಿಂತಲೂ ಕಡಿಮೆ - 437 ಕುಟುಂಬಗಳು ಶೇ.16.9; 100-200 ಚ.ಅಡಿ : 810 (ಕು) ಶೇ.31.3; 200-300 ಚ.ಅಡಿ : 477 (ಕು) ಶೇ.18.4; 300-400 ಚ.ಅಡಿ : 228 (ಕು) ಶೇ.8.8; 400-500 ಚ.ಅಡಿ: 195 (ಕು) ಶೇ.7.5; 500-600 ಚ.ಅಡಿ: 121 (ಕು) ಶೇ.4.7; 600-700 ಚ.ಅಡಿ: 35 (ಕು) ಶೇ.1.4; 700-800 ಚ.ಅಡಿ: 74 (ಕು) ಶೇ.2.8; 800-900 ಚ.ಅಡಿ: 26 (ಕು)ಶೇ.1; 900 ಚ. ಅಡಿಗಿಂತಲೂ ಹೆಚ್ಚು : 182 (ಕು) ಶೇ.7.0; ಮತ್ತು ಇತರೆ 4 (ಕು) ಶೇ.0.22; ಒಟ್ಟು : 2589 (ಕು) ಶೇ.100. (ಕು - ಕುಟುಂಬ)

ಇದೇ ರೀತಿ ಮನೆಯಲ್ಲಿ ಒಬ್ಬ ವ್ಯಕ್ತಿಗೆ ಸಿಗುವ ತಲಾ ವಿಸ್ತೀರ್ಣ ಚದರ ಅಡಿಗಳಲ್ಲಿ ಹೀಗಿದ್ದಿತು.

1) 25 ಚ.ಅಡಿಗಿಂತಲೂ ಕಡಿಮೆ : 538 (ಕುಟುಂಬಗಳು) 20.7 (ಶೇ); 2) 25 ರಿಂದ 30 ಚ.ಅಡಿ : 175 (ಕು) 6.8 (ಶೇ); 3) 30 ರಿಂದ 50 ಚ.ಅಡಿ : 670 (ಕು) 25.9 (ಶೇ) ; 4) 50 ರಿಂದ 100 ಚ.ಅಡಿ : 701 (ಕು) 27.1 (ಶೇ); 5) 100 ರಿಂದ 150 ಚ.ಅಡಿ : 215 (ಕು) 8.3 (ಶೇ); 6) 150 ರಿಂದ 200 ಚ.ಅಡಿ : 101 (ಕು) 3.9 (ಶೇ); 7) 200 ರಿಂದ 300 ಚ.ಅಡಿ : 101 (ಕು) 3.9 (ಶೇ); 8) 300 ರಿಂದ 500 ಚ.ಅಡಿ : 51 (ಕು) 2.0 (ಶೇ); 9) 500 ರಿಂದ 700 ಚ.ಅಡಿ : 18 (ಕು) 0.7 (ಶೇ); 10) 700 ರಿಂದ 900 ಚ.ಅಡಿ : 8 (ಕು) 0.3 (ಶೇ); 11) 900 ಚ.ಅಡಿಗಿಂತಲೂ ಹೆಚ್ಚು : 8 (ಕು) 0,3 (ಶೇ) ಹಾಗೂ 12) ಇತರೆ 3 (ಕು) 0.1 (ಶೇ); ಒಟ್ಟು 2,589 (ಕು) 100.

**ಮನೆಬಾಡಿಗೆ :** ಈ ಸಮೀಕ್ಷೆಯಂತೆ, 50 ಚದರ ಅಡಿಗೆ 5 ರೂನಂತೆ ಬಾಡಿಗೆ ಕೊಡುವವರಲ್ಲಿ, 15 ವರ್ಷಗಳಿಗಿಂತಲೂ ಹೆಚ್ಚು ಕಾಲ ಬಾಡಿಗೆಗೆ ಇರುವವರು ಶೇ.0.7, 1-2 ವರ್ಷ ಬಾಡಿಗೆಗೆ ಇರುವವರು ಶೇ.4.6 ಇದ್ದಿತು. 50 ಚದರ ಅಡಿಗೆ 3 ರೂ.ವರೆಗೆ ಬಾಡಿಗೆ ಕೊಡುತ್ತಿದ್ದವರು ಶೇ.97.4 ಇದ್ದಿತು. (ಇವರುಗಳು 15 ವರ್ಷಗಳಿಗಿಂತಲೂ ಹೆಚ್ಚು ಕಾಲ ಬಾಡಿಗೆಗೆ ಇದ್ದವರು). ಎರಡನೇ ಮಹಾಯುದ್ಧದ ಸಮಯದಲ್ಲಿ ಅನೇಕ ಕುಟುಂಬಗಳ ಹುಬ್ಬಳ್ಳಿ ನಗರಕ್ಕೆ ವಲಸೆ ಬಂದರು. ಇದಲ್ಲದೆ 1942 ರಲ್ಲಿ ಬಿಜಾಪುರ, ಬಳ್ಳಾರಿ ಜಿಲ್ಲೆಗಳಲ್ಲಿ ಕಾಣಿಸಿದ ಕ್ಷಾಮದಿಂದಾಗಿಯೂ ಜನ ವಲಸೆ ಬಂದರು. 1948 ರಲ್ಲಿ ಹೈದರಾಬಾದ್‌ನ ಗಡಿಯಲ್ಲಿ ಆದ ಅಶಾಂತಿಯಿಂದಲೂ ಜನಗಳು ಬಂದರು. ಮನೆಗಳಿಗೆ ಬೇಡಿಕೆ ಹೆಚ್ಚಾಯಿತು. ಇದರಿಂದ ಬಾಡಿಗೆ ಹೆಚ್ಚಿಸಬೇಕಾಗಿ ಬಂದು ಮುಂಬೈ ರಾಜ್ಯದ ಮನೆ ಬಾಡಿಗೆ ಕಾಯ್ದೆ ಅನ್ವಯ ಈ ಬಾಡಿಗೆ ಅತಿ ಹೆಚ್ಚಾಗಿರಲ್ಲವೆಂದು ಕಂಡುಬರುತ್ತದೆ.

**ಕೋಷ್ಟಕ 8.14 : ಕಳೆದ ಎರಡು ದಶಕಗಳಲ್ಲಿ ಪಟ್ಟಣಗಳ ವಿಸ್ತರಣಾ ಪ್ರಮಾಣ ಹೀಗಿದೆ.**

| | ಪಟ್ಟಣಗಳು | ಜನಸಂಖ್ಯೆ | ಪಟ್ಟಣಗಳ ವಿಸ್ತರಣಾ ಪ್ರಮಾಣ | |
|---|---|---|---|---|
| | (ವರ್ಗ 1) | (1991) | 1971-81 | 1981-91 |
| 1) | ಧಾರವಾಡ-ಹುಬ್ಬಳ್ಳಿ | 6,47,640 | 39.02 | 22.87 |
| 2) | ಗದಗ-ಬೆಟಗೇರಿ | 1,33,918 | 22.99 | 14.10 |
| | (ವರ್ಗ 2) | | | |
| 3) | ರಾಣೆಬೆನ್ನೂರು | 67,419 | 42.62 | 16.00 |
| | (ವರ್ಗ 3) | | | |
| 4) | ಹಾವೇರಿ | 45,312 | 32.25 | 24.59 |
| 5) | ನರಗುಂದ | 29,917 | 35.72 | 27.14 |
| 6) | ಸವಣೂರು | 29,679 | 36.89 | 18.54 |
| 7) | ಲಕ್ಷ್ಮೇಶ್ವರ | 28,771 | 23.55 | 13.08 |
| 8) | ಅಣ್ಣಿಗೇರಿ | 25,237 | 26.79 | 35.58 |
| 9) | ಗಜೇಂದ್ರಗಡ | 24,176 | 30.41 | 19.53 |
| 10) | ಹಾನಗಲ್ | 20,904 | 23.60 | 22.32 |
| 11) | ಬ್ಯಾಡಗಿ | 20,574 | 25.03 | 14.71 |
| | ವರ್ಗ 4 | | | |
| 12) | ಶಿಗ್ಗಾಂವಿ | 19,923 | 25.78 | 32.95 |
| 13) | ನವಲಗುಂದ | 19,428 | 31.48 | 23.49 |
| 14) | ರೋಣ | 19,100 | 24.94 | 16.73 |
| 15) | ಮುಂಡರಗಿ | 16,541 | - | 21.47 |
| 16) | ಮುಳಗುಂದ | 15,760 | - | 8.43 |
| 17) | ಶಿರಹಟ್ಟಿ | 14,983 | 43.43 | 12.59 |
| 18) | ಕುಂದಗೋಳ | 14,686 | 28.08 | 2.52 |
| 19) | ನರೇಗಲ್ | 14,566 | 11.62 | 2.70 |
| 20) | ಆಳ್ನಾವರ | 14,485 | 25.58 | 11.20 |

(ಜನಗಣತಿ - 1981-1991)

ಹಿರೇಕೆರೂರು ಮತ್ತು ಕಲಘಟಗಿಗಳನ್ನು 1981ರಲ್ಲಿ ಪಟ್ಟಣಗಳೆಂದು ಪರಿಗಣಿಸಿದ್ದು, 1991ರಲ್ಲಿ, ಪಟ್ಟಣಗಳಾಗಿ ಪರಿಗಣಿಸಿಲ್ಲ.

ಮೇಲ್ಕಂಡ ಪಟ್ಟಿಯನ್ನು ಪರಿಶೀಲಿಸಿದಾಗ, ಧಾರವಾಡ-ಹುಬ್ಬಳ್ಳಿ ಪಟ್ಟಣದಲ್ಲಿ 1981-92 ರ ದಶಕದಲ್ಲಿ ಪಟ್ಟಣ ಬೆಳೆದ ಪ್ರಮಾಣ ಶೇ.22.87 ಇದ್ದು ಇದು ಹಿಂದಿನ ದಶಕದ ಶೇ.55 ರಷ್ಟಿದೆ. ಹೀಗೆಯೇ ಎಲ್ಲಾ ಪಟ್ಟಣಗಳೂ 1971-81 ರ ದಶಕದಲ್ಲಿ ಹೆಚ್ಚು ತೀವ್ರವಾಗಿ ಬೆಳೆದಿದ್ದು 1981-91 ರ ದಶಕದಲ್ಲಿ ಬೆಳೆಯುವ ಪ್ರಮಾಣ ಕಡಿಮೆಯಾಗಿದೆ. ಇದಕ್ಕೆ ಗ್ರಾಮದಲ್ಲಿ ಒದಗಿಸಿರುವ ಸೌಲಭ್ಯಗಳು ಹಾಗೂ ಪಟ್ಟಣದಲ್ಲಿನ ಜೀವನಕ್ಕೆ ತಗಲುವ ಹೆಚ್ಚಿನ ಖರ್ಚು ಕಾರಣಗಳೆಂದು ತಿಳಿಯಬಹುದು. ಅಣ್ಣಿಗೇರಿ ಮತ್ತು ಅಳ್ನಾವರ ಪಟ್ಟಣಗಳಲ್ಲಿ ಮಾತ್ರ, 1971-81 ರ ದಶಕದಲ್ಲಿ ಉಂಟಾದ ಹೆಚ್ಚಳವು, 1981-91 ರ ದಶಕದಲ್ಲಿನ ಹೆಚ್ಚಳಕ್ಕಿಂತ ಕಡಿಮೆ ಇದ್ದಿತು.

## ಗೃಹ ನಿರ್ಮಾಣ

ಈ ಜಿಲ್ಲೆಯಲ್ಲಿ ಗೃಹನಿರ್ಮಾಣ ಚಟುವಟಿಕೆ 1960 ರ ವರೆಗೂ ಹೆಚ್ಚು ತೀವ್ರ ಗತಿಯಲ್ಲಿ ಮುಂದುವರಿದಿರಲಿಲ್ಲ, ಕೇವಲ ಗುಡಿಸಲುಗಳು ಸಾಧಾರಣ ಮನೆಗಳು ಹೆಚ್ಚಾಗಿದ್ದವು. ನಂತರದ ದಶಕಗಳಲ್ಲಿ ಈ ಚಟುವಟಿಕೆ ಹೆಚ್ಚಾಗಿದೆ. 1921 ರಿಂದ 1961 ರ ವರೆಗೆ ಒಂದು ಚದರ ಮೈಲಿಗೆ ಇದ್ದ ಜನಗಣತಿ ಮನೆಗಳ ವಿವರ ಹೀಗಿದೆ. 1921-38; 1931-39; 1941-47; 1951-39; ಮತ್ತು 1961-48. ಆದರೆ ಸ್ವಾತಂತ್ರ್ಯಾನಂತರ ವಸತಿಗಳ ನಿರ್ಮಾಣ ಹಾಗೂ ಮನೆ ಕಟ್ಟಲು ನಿವೇಶನಗಳನ್ನು ಒದಗಿಸುವ ಯೋಜನೆಗಳನ್ನು ಸರಕಾರ ರೂಪಿಸಿತು. ಕೇಂದ್ರದಲ್ಲೂ, ರಾಜ್ಯದಲ್ಲೂ ಗೃಹನಿರ್ಮಾಣ ಮಂತ್ರಾಲಯಗಳು ಕಾರ್ಯಗತವಾಗಿವೆ. ಪಂಚವಾರ್ಷಿಕ ಯೋಜನೆಯಲ್ಲೂ ಇದಕ್ಕೆ ಆದ್ಯತೆ ನೀಡಿದೆ. ಬ್ಯಾಂಕ್, ಗೃಹನಿರ್ಮಾಣ ನಿಗಮ, ನಗರಾಭಿವೃದ್ಧಿ ಪ್ರಾಧಿಕಾರ, ಸಹಕಾರಿ ಸಂಘಗಳು ಈ ದಿಸೆಯಲ್ಲಿ ಕಾರ್ಯಮಗ್ನವಾಗಿವೆ.

1961 ರ ಜನಗಣತಿ ಪ್ರಕಾರ ಹುಬ್ಬಳ್ಳಿ ಪಟ್ಟಣದಲ್ಲಿ ಪ್ರತೀ ಸಾವಿರ ಮನೆಗಳಲ್ಲಿ 5 ಕೊಠಡಿಗಳಿರುವ ಮನೆಗಳು - 64, 4 ಕೊಠಡಿಗಳಿರುವ ಮನೆಗಳು - 81, 3 ಕೊಠಡಿಗಳಿರುವ ಮನೆಗಳು - 149, 2 ಕೊಠಡಿಗಳಿರುವ ಮನೆಗಳು - 350, ಹಾಗೂ ಒಂದು ಕೊಠಡಿ ಇರುವ ಮನೆಗಳು - 356 ಇದ್ದವು. ಈ ಜನಗಣತಿಯಂತೆ, ಒಂದು ಕೊಠಡಿ ಎಂದರೆ, ಬಾಗಿಲು, ಮೇಲ್ಛಾವಣಿ ಇದ್ದು ಒಬ್ಬ ವ್ಯಕ್ತಿ ಮಲಗಲು ಅನುಕೂಲವಿರುವ ಸ್ಥಳ (ಹುಬ್ಬಳ್ಳಿಯಲ್ಲಿ ನೇಯ್ಗೆ ಉದ್ಯೋಗದವರ ವಿಶಾಲವಾದ ಮನೆಗಳು ಸಾಕಷ್ಟಿವೆ ಎಂದು ಇಲ್ಲಿ ಗಮನಿಸಬೇಕು). 1971 ರ ಜನಗಣತಿಯಲ್ಲಿ, ಪ್ರತಿ ಸಾವಿರ ಜನಗಣತಿ ಮನೆಗಳಿಗೆ, 5 ಕೊಠಡಿಗಳಿರುವ ಮನೆ - 23; 4 ಕೊಠಡಿಗಳಿರುವ ಮನೆ - 32; 3 ಕೊಠಡಿಗಳಿರುವ ಮನೆ - 87; 2 ಕೊಠಡಿಗಳಿರುವ ಮನೆ - 286; ಒಂದು ಕೊಠಡಿಯ ಮನೆ - 572 ಇದ್ದವು. 1981 ರ ಜನಗಣತಿಯಂತೆ, ಜಿಲ್ಲೆಯಲ್ಲಿ ಒಟ್ಟು 3,33,640 ಮನೆಗಳಿದ್ದು, ಅವುಗಳಲ್ಲಿ 1,73,580 ಸ್ವಂತ ಮನೆಗಳಾಗಿದ್ದವು. ಉಳಿದ 1,60,060 ಮನೆಗಳು ಬಾಡಿಗೆ ಮನೆಗಳಾಗಿದ್ದವು. 1961 ರಲ್ಲಿ ಒಂದು ಸಾಧಾರಣ ಮನೆ (ಮಧ್ಯಮ ವರ್ಗದ) ಕಟ್ಟಲು 1 ಚದರ ಅಡಿಗೆ 50-60 ರೂ.ಗಳು ಖರ್ಚಾಗುತ್ತಿದ್ದು, 1971 ರಲ್ಲಿ ಈ ಖರ್ಚು, ಸುಮಾರು 175 ರಿಂದ 200 ರೂ. ಇದ್ದಿತು. 1981 ರಲ್ಲಿ ಚದರ ಅಡಿಗೆ 300-320 ರೂ. ಇದ್ದಿತು. 1992-93 ರಲ್ಲಿ ಸುಮಾರು 350 ರೂ. ಇದ್ದಿತು. ಇತ್ತೀಚೆಗೆ ಅಂದರೆ 1993-94 ರಲ್ಲಿ ಗೃಹನಿರ್ಮಾಣ ಕಾರ್ಯ ಜಿಲ್ಲೆಯಲ್ಲಿ ಹೆಚ್ಚುತ್ತಿದ್ದು, ಮುಖ್ಯವಾಗಿ ಧಾರವಾಡ, ಹುಬ್ಬಳ್ಳಿ, ಗದಗಿನಲ್ಲಿ ಹೆಚ್ಚಿದೆ. ಹುಬ್ಬಳ್ಳಿಯಲ್ಲಿ ಇತ್ತೀಚೆಗೆ ಬಹುಮಹಡಿ ಮನೆಗಳು ಹಾಗೂ ಸಂಕೀರ್ಣಗಳು ಬರುತ್ತಿವೆ.

## ಕೃಷಿ ವಲಯ

ಜಿಲ್ಲಾ ಆದಾಯದ ಶೇ.65.17 ರಷ್ಟು 1974-75 ರಲ್ಲಿ ಕೃಷಿಯಿಂದಲೇ ಬಂದಿದೆ. (ರಾಜ್ಯದಲ್ಲಿ ಇದು ಶೇ.70.48) ನೂತನ ವಿಧಾನಗಳಿಂದ ಹೆಚ್ಚು ಪ್ರದೇಶವನ್ನು ಬೇಸಾಯಕ್ಕೆ ಒಳಪಡಿಸಲು ತೀವ್ರ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕೆಲವು ಮುಖ್ಯವಾದ ಬೆಳೆಗಳ ವಿವರಗಳನ್ನು ಪಟ್ಟಿಯಲ್ಲಿ ಕೊಟ್ಟಿದೆ (ಅಧ್ಯಾಯ 4).

**ಅಕ್ಕಿ :** 1960-61 ರಲ್ಲಿ 97,664 ಹೆ. (ರಾಜ್ಯದ ಶೇ.9.50) ಇದ್ದದ್ದು, 1970-71 ರಲ್ಲಿ 97,513 ಹೆ. (8.33 ಶೇ.); 1980-81 ರಲ್ಲಿ 77,751 (6.98 ಶೇ.) ಮತ್ತು 1989-90 ರಲ್ಲಿ 81,993 (ಶೇ.6.93) ಆಗಿ, 30 ವರ್ಷಗಳಲ್ಲಿ ಅಕ್ಕಿ ಬೆಳೆಯುವ ಪ್ರದೇಶವು ಕಡಿಮೆಯಾಗಿರುವುದು ಕಂಡುಬರುತ್ತದೆ. ಅಕ್ಕಿಯ ಉತ್ಪಾದನೆ 1960-61 ರಲ್ಲಿ 92,659 ಟನ್ (ರಾಜ್ಯದ ಶೇ.6.98);

1970-71 ರಲ್ಲಿ 1,27,109 ಟನ್ (ಶೇ.6.36); 1980-81 ರಲ್ಲಿ 1,24,611 ಟನ್ (ಶೇ.5.52) ಮತ್ತು 1989-90 ರಲ್ಲಿ 52,550 (ಶೇ.2.21) ಇದ್ದು 30 ವರ್ಷಗಳಲ್ಲಿ ಸುಮಾರು ಶೇ.40 ರಷ್ಟು ಕಡಿಮೆಯಾಗುವುದು ಕಂಡು ಬರುತ್ತದೆ. ಇಳುವರಿಯು 1960-61 ರಲ್ಲಿ ಹೆಕ್ಟೇರಿಗೆ 990 ಕಿಜಿ ಇದ್ದದ್ದು 1970-71 ರಲ್ಲಿ 1,372 ಕಿ.ಜಿ; 1980-81 ರಲ್ಲಿ 1,687 ಕಿಜಿ; 1990-91 ರಲ್ಲಿ 831 ಕಿಜಿ; 1991-92 ರಲ್ಲಿ 1,480 ಕಿಜಿ; 1992-93 ರಲ್ಲಿ 1,326 ಕಿಜಿ ಆಗಿದ್ದಿತು.

**ಜೋಳ :** 1960-61 ರಲ್ಲಿ 2,96,712 ಹೆಕ್ಟೇರ್‌ನಲ್ಲಿ (ರಾಜ್ಯದ ಶೇ.9.99) ಜೋಳ ಬೆಳೆಯುತ್ತಿದ್ದು, 1990 ರ ಹೊತ್ತಿಗೆ 2,66,895 (11.41 ಶೇ.) ಹೆಕ್ಟೇರ್‌ನಷ್ಟಾಗಿ, ಶೇ.10 ರಷ್ಟು ಕಡಿಮೆಯಾಗಿರುವುದು ಕಂಡು ಬರುತ್ತದೆ. ಉತ್ಪಾದನೆಯು 1960-61 ರಲ್ಲಿ 1,78,379 ಟನ್ (ರಾಜ್ಯದ ಶೇ.15.46) ಇದ್ದಿದ್ದು 30 ವರ್ಷಗಳಲ್ಲಿ ಅಂದರೆ 1990 ರಲ್ಲಿ 2,06,665 ಟನ್ (ಶೇ.12.79) ಇದ್ದಿತ್ತು. ಈ ಅವಧಿಯಲ್ಲಿ ಗಣನೀಯವಾಗಿ ಉತ್ಪಾದನೆ ಹೆಚ್ಚಿದ್ದರೂ ಇದು ರಾಜ್ಯದ ಶೇಕಡಾವಾರಿನಲ್ಲಿ ಕಡಿಮೆ ಇದ್ದಿತು. ಸರಾಸರಿ ಇಳುವರಿ ಹೆಕ್ಟೇರಿಗೆ 1970-71 ರಲ್ಲಿ 886 ಕಿಜಿ, 1980-81 ರಲ್ಲಿ 1,146 ಕಿಜಿ; 1990-91 ರಲ್ಲಿ 620 ಕಿಜಿ, 1991-92 ರಲ್ಲಿ 956 ಕಿಜಿ; 1992-93 ರಲ್ಲಿ 872 ಕಿಜಿ ಆಗಿದ್ದಿತು.

**ರಾಗಿ :** 1960-61 ರಲ್ಲಿ 10,886 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬೆಳೆಯುತ್ತಿದ್ದು, (ರಾಜ್ಯದ ಶೇ.1.09) 1989-1990 ರಲ್ಲಿ (0.80 ಶೇ.) ಇದ್ದಿತು. ಉತ್ಪಾದನೆ 15,486 ಟನ್ (ಶೇ.2.06) ಇದ್ದಿದ್ದು, 1990 ರಲ್ಲಿ 8,909 ಟನ್ (ಶೇ.0.67) ಆಗಿದ್ದಿತು. ಇಳುವರಿ 1960-61 ರಲ್ಲಿ ಹೆಕ್ಟೇರಿಗೆ 497 ಕಿಜಿ ಇದ್ದು 1970-71 ರಲ್ಲಿ - 891 ಕಿಜಿ; 1980-81 ರಲ್ಲಿ - 695 ಕಿಜಿ, 1991-92 ರಲ್ಲಿ 866 ಕಿಜಿ ಮತ್ತು 1992-93 ರಲ್ಲಿ 986 ಕಿಜಿ ಇದ್ದಿತು.

**ಎಲ್ಲಾ ಏಕದಳ ಧಾನ್ಯಗಳು :** 1960-61 ರಲ್ಲಿ 5,48,951 ಹೆಕ್ಟೇರ್ ಪ್ರದೇಶದಲ್ಲಿ 3,21,077 ಟನ್ ಬೆಳೆದಿದ್ದು ಇಳುವರಿ ಹೆಕ್ಟೇರಿಗೆ 584 ಕಿಜಿ ಇದ್ದಿತು. 1970-71 ರಲ್ಲಿ ಬೆಳೆಯುವ ಪ್ರದೇಶ 5,23,618 ಹೆಕ್ಟೇರಿನಷ್ಟಿದ್ದು, ಉತ್ಪಾದನೆ 3,99,501 ಟನ್ ಆಗಿದ್ದು, ಇಳುವರಿ ಹೆಕ್ಟೇರಿಗೆ 803 ಕಿಜಿ ಇದ್ದಿತು. 1980-81 ರಲ್ಲಿ 4,97,813 ಹೆಕ್ಟೇರ್ ಪ್ರದೇಶದಲ್ಲಿ 4,78,222 ಟನ್ ಬೆಳೆದಿದ್ದು, ಇಳುವರಿ ಹೆಕ್ಟೇರಿಗೆ 1921 ಕಿಜಿ ಇದ್ದಿತು. 1989-90 ರಲ್ಲಿ 4,87,714 ಹೆಕ್ಟೇರ್ ಪ್ರದೇಶದಲ್ಲಿ 3,62,091 ಟನ್ ಬೆಳೆದಿದ್ದು ಇಳುವರಿ ಹೆಕ್ಟೇರಿಗೆ 781 ಕಿಜಿ ಇದ್ದಿತು. 30 ವರ್ಷಗಳಲ್ಲಿ ಬೆಳೆಯುವ ಪ್ರದೇಶದಲ್ಲಿ ಇಳುವರಿ ಕಡಿಮೆಯಾಗಿದ್ದು, ಇಳುವರಿ 1980-81 ರಲ್ಲಿ ಹೆಚ್ಚಾಗಿದ್ದು 1989-90 ರಲ್ಲಿ ಕಡಿಮೆಯಾಗಿರುವುದು ಕಂಡು ಬರುತ್ತದೆ.

**ಎಲ್ಲಾ ಎಣ್ಣೆ ಬೀಜಗಳು :** 1960-61 ರಲ್ಲಿ 1,59,076 ಹೆಕ್ಟೇರ್ ಪ್ರದೇಶದಲ್ಲಿ 53,892 ಟನ್‌ಗಳಷ್ಟು ಬೆಳೆದಿದ್ದು ಎಣ್ಣೆ ಬೀಜಗಳು ಇಳುವರಿ ಹೆಕ್ಟೇರಿಗೆ ಸರಾಸರಿ 338 ಕಿಜಿ ಇದ್ದಿತು. 1970-71 ರಲ್ಲಿ 1,78,697 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದು ಇಳುವರಿ ಸರಾಸರಿ ಹೆಗೆ 650 ಟನ್ ಇದ್ದಿತು. 1980-81 ರಲ್ಲಿ 1,42,570 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದು ಇಳುವರಿ ಹೆಕ್ಟೇರಿಗೆ 564 ಕಿಜಿ ಇದ್ದಿತು. 1989-90 ರಲ್ಲಿ 2,32,587 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದು ಇಳುವರಿ 545 ಕಿಜಿ ಇದ್ದಿತು. 30 ವರ್ಷಗಳಲ್ಲಿ ಇಳುವರಿ ಹೆಚ್ಚಿದ್ದು ಪುನಃ ಕಡಿಮೆಯಾಗಿರುವುದು, ಬೆಳೆಯುವ ವಿಸ್ತೀರ್ಣ ಕೂಡ ಕಡಿಮೆಯಾಗಿರುವುದು ಕಂಡು ಬರುತ್ತದೆ.

**ಹತ್ತಿ :** 1960-61 ರಲ್ಲಿ 2,56,284 ಹೆಕ್ಟೇರ್ ಪ್ರದೇಶದಲ್ಲಿ 1,16,475 ಬೇಲ್‌ಗಳಷ್ಟು ಹತ್ತಿ ಬೆಳೆದಿದ್ದು, ಇಳುವರಿ ಹೆಕ್ಟೇರಿಗೆ 82 ಕಿಜಿ ಇದ್ದಿತು. 1970-71 ರಲ್ಲಿ 2,52,547 ಹೆಕ್ಟೇರ್ ಪ್ರದೇಶದಲ್ಲಿ 90,635 ಬೇಲ್‌ಗಳಿದ್ದು ಇಳುವರಿ ಹೆಕ್ಟೇರಿಗೆ ಸರಾಸರಿ 68 ಕಿಜಿ ಇದ್ದಿತು. 1980-81 ರಲ್ಲಿ 2,52,142 ಹೆಕ್ಟೇರು ಪ್ರದೇಶದಲ್ಲಿ 1,60,629 ಬೇಲ್‌ಗಳಷ್ಟು ಹತ್ತಿ ಬೆಳೆದಿದ್ದು, ಇಳುವರಿ ಹೆಕ್ಟೇರಿಗೆ 114 ಕಿಜಿ ಇದ್ದಿತು. 1989-90 ರಲ್ಲಿ 2,33,049 ಹೆಕ್ಟೇರ್ ಪ್ರದೇಶದಲ್ಲಿ 1,90,141 ಬೇಲ್‌ಗಳಷ್ಟು ಹತ್ತಿ ಬೆಳೆದಿದ್ದು, ಇಳುವರಿ ಹೆಕ್ಟೇರಿಗೆ 146 ಕಿಜಿಗಳಷ್ಟು ಇದ್ದಿತು. ರಾಜ್ಯದಲ್ಲಿ 1989-90 ರಲ್ಲಿ ಹತ್ತಿ ಬೆಳೆ ಇಳುವರಿ ಹೆಕ್ಟೇರಿಗೆ 228 ಕಿಜಿ ಇದ್ದಿತು. 1992-93 ರಲ್ಲಿ 1.96 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ ಬೆಳೆಯಲಾಗಿತ್ತು.

**ಗೋವಿನ ಜೋಳ :** 1960-61 ರಲ್ಲಿ ಮುಸುಕಿನ ಜೋಳದ (ಗೋವಿನ) ಬೆಳೆ ಇರಲಿಲ್ಲ. 1970-71 ರಲ್ಲಿ 206 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದು, ಇಳುವರಿ ಹೆಕ್ಟೇರಿಗೆ 3,494 ಕಿಜಿ ಇದ್ದಿತು. 1980-81 ರಲ್ಲಿ 7,695 ಹೆಕ್ಟೇರ್ ಪ್ರದೇಶದಲ್ಲಿ ಇದನ್ನು

ಬೆಳೆದಿದ್ದು, ಇಳುವರಿ ಹೆಕ್ಟೇರಿಗೆ ಸರಾಸರಿ 2,304 ಕಿಜಿ ಇದ್ದಿತು. 1989-90 ರಲ್ಲಿ 220 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದು ಇಳುವರಿ ಹೆಕ್ಟೇರಿಗೆ 2,249 ಕಿಜಿ ಇದ್ದಿತು. ಇಳುವರಿ ಹೆಕ್ಟೇರಿಗೆ 1970-71 ರಲ್ಲಿ 3494 ಕಿಜಿ, 1980-81 ರಲ್ಲಿ - 2,304 ಕಿಜಿ, 1991-92 ರಲ್ಲಿ - 2918 ಕಿಜಿ ಹಾಗೂ 1992-93 ರಲ್ಲಿ - 3,192 ಇದ್ದಿತು.

**ಗೋದಿ :** 1960-61 ರಲ್ಲಿ 1,10,120 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದು, ಇಳುವರಿ ಹೆಕ್ಟೇರಿಗೆ ಸರಾಸರಿ 215 ಕಿಜಿ ಇದ್ದಿತು. 1970-71ರಲ್ಲಿ ಇಳುವರಿ ಹೆಕ್ಟೇರಿಗೆ 289 ಕಿಜಿ ಇದ್ದಿತು. 1980-81 ರಲ್ಲಿ 1,10,724 ಹೆಕ್ಟೇರ್ ಪ್ರದೇಶದಲ್ಲಿ ಟನ್ ಬೆಳೆದಿದ್ದು ಇಳುವರಿ ಹೆಕ್ಟೇರಿಗೆ 390 ಕಿಜಿ ಇದ್ದಿತು. 1989-90 ರಲ್ಲಿ 80,729 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದು, ಇಳುವರಿ ಹೆಕ್ಟೇರಿಗೆ 366 ಕಿಜಿ ಇದ್ದಿತು. ಇಳುವರಿ ಹೆಕ್ಟೇರಿಗೆ 1990-91 ರಲ್ಲಿ 526 ಕಿಜಿ, 1991-92 ರಲ್ಲಿ 615 ಕಿಜಿ, 1992-93 ರಲ್ಲಿ 632 ಕಿಜಿ ಇದ್ದಿತು. ಇದರಿಂದ ಗೋದಿ ಬೆಳೆಯುವ ಪ್ರದೇಶವು ಕಡಿಮೆಯಾಗಿದ್ದು ಇಳುವರಿ ಹೆಚ್ಚಾಗಿರುವುದು ಕಂಡು ಬರುತ್ತದೆ.

ಜಿಲ್ಲೆಯ ಮುಖ್ಯ ಕಸುಬು ಎನಿಸಿದ ಕೃಷಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿ, ಉತ್ಪಾದನೆ ಹೆಚ್ಚಿಸಲು ವಿಶೇಷ ಗಮನ ಹರಿಸಲಾಗುತ್ತಿದೆ. ಮಳೆಯ, ನೀರಾವರಿಯ ಗರಿಷ್ಠ ಲಾಭ ಪಡೆದು ಪ್ರಮಾಣಿತ ಬೀಜ, ಗೊಬ್ಬರ, ಕ್ರಿಮಿನಾಶಕ ಔಷಧಿಗಳು ಹಾಗೂ ತಾಂತ್ರಿಕ ಸಲಹೆ ಸಹಾಯಗಳಿಂದ ಹೆಚ್ಚು ಬೆಳೆ ಬೆಳೆಯುವಂತೆ ರೈತರಿಗೆ ಕೃಷಿ ಇಲಾಖೆಯು ಸಹಾಯ ಮಾಡುತ್ತಿದೆ. 1990-91 ರ ಮೂರೂ ಹಂಗಾಮುಗಳಲ್ಲಿ ಸೇರಿ 17,94,777 ಹೆಕ್ಟೇರು ಕ್ಷೇತ್ರದಲ್ಲಿ ಕೃಷಿ ಕೈಗೊಳ್ಳಲಾಯಿತು. ಹಾಗೂ 6,94,890 ಟನ್ ಉತ್ಪಾದನೆ ಸಾಧಿಸಲಾಯಿತು. ಇದರಲ್ಲಿ 11,55,750 ಹೆಕ್ಟೇರು ಕ್ಷೇತ್ರದಲ್ಲಿ ಆಹಾರ ಬೆಳೆಗಳನ್ನು ಬೆಳೆಯಲಾಯಿತು. 1,62,467 ಹೆಕ್ಟೇರು ಕ್ಷೇತ್ರದಲ್ಲಿ ಹತ್ತಿ ಬಿತ್ತಿ 1,51,486 ಬೇಲು ಹತ್ತಿ ಉತ್ಪಾದಿಸಲಾಯಿತು. ಅದರಂತೆ 1,77,761 ಹೆಕ್ಟೇರು ಕ್ಷೇತ್ರದಲ್ಲಿ ಬೇಳೆ ಕಾಳು, 2,05,232 ಹೆಕ್ಟೇರು ಕ್ಷೇತ್ರದಲ್ಲಿ ಎಣ್ಣೆಕಾಳು ಬಿತ್ತಿ ಅನುಕ್ರಮವಾಗಿ 58,564 ಟನ್ ಹಾಗೂ 93,403 ಟನ್ ಉತ್ಪಾದನೆ ಪಡೆಯಲಾಯಿತು. ಜಿಲ್ಲೆಯಲ್ಲಿ ಮಲೆನಾಡಿನ ಹಾನಗಲ್, ಹಿರೇಕೆರೂರು, ಕಲಘಟಗಿ, ಧಾರವಾಡ, ಹುಬ್ಬಳ್ಳಿ ಮತ್ತು ಶಿಗ್ಗಾಂವಿ ತಾಲೂಕುಗಳಲ್ಲಿ ಜಾರಿಗೊಳಿಸಲಾದ ಸಮಗ್ರ ಅಕ್ಕಿ ಅಭಿವೃದ್ಧಿ ಯೋಜನೆಯಂತೆ 1990-91 ಸಾಲಿನಲ್ಲಿ 751 ಕ್ವಿಂಟಲ್ ಪ್ರಮಾಣಿತ ಬೀಜ ವಿತರಿಸಲಾಯಿತು. 1,948 ಹೆಕ್ಟೇರಿನಲ್ಲಿ ಕಳೆನಾಶಕ ಬಳಸಲಾಯಿತು. 656 ಹೆಕ್ಟೇರಿನಲ್ಲಿ ಕಳೆನಾಶಕ ಪ್ರಾತ್ಯಕ್ಷಿಕೆ ಹಾಗೂ 400 ಹೆಕ್ಟೇರಿನಲ್ಲಿ ಅಕ್ಕಿ ಉತ್ಪಾದನಾ ತಾಂತ್ರಿಕತೆ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲಾಯಿತು. ಈ ಕಾರ್ಯಕ್ರಮಗಳಿಗಾಗಿ 16,74,129ರೂ.ಗಳನ್ನು ವೆಚ್ಚ ಮಾಡಲಾಯಿತು. ವಿಶೇಷ ಆಹಾರ ಧಾನ್ಯ ಉತ್ಪಾದನಾ ಯೋಜನೆ (ಜೋಳ)ಯಲ್ಲಿ 638 ಕ್ವಿಂಟಲ್ ಪ್ರಮಾಣಿತ ಬೀಜಗಳನ್ನು ಹಂಚಲಾಯಿತು. ಒಟ್ಟು 584 ಸಸ್ಯ ಸಂರಕ್ಷಣಾ ಉಪಕರಣಗಳನ್ನು ವಿತರಿಸಲಾಯಿತು. 1872 ಹೆಕ್ಟೇರು ಕ್ಷೇತ್ರದಲ್ಲಿ ಕಳೆನಾಶಕ ಹಾಗೂ ಇತರೇ ಔಷಧಿಗಳನ್ನು ಉಪಯೋಗಿಸಲಾಯಿತು. ಈ ಕಾರ್ಯಕ್ರಮಕ್ಕಾಗಿ ಆದ ವೆಚ್ಚ 8.8 ಲಕ್ಷ ರೂ.ಗಳು. ಇದಲ್ಲದೆ ವಿಶೇಷ ಘಟಕ ಯೋಜನೆಯಲ್ಲಿ 234 ಮೊದಲ ಹಂತದ ಫಲಾನುಭವಿಗಳಿಗೆ ಹಾಗೂ 168 ಎರಡನೇ ಹಂತದ ಫಲಾನುಭವಿಗಳಿಗೆ ಕೃಷಿ ಸಾಮಗ್ರಿ ಹಾಗೂ ಇತರ ಸಹಾಯ ಒದಗಿಸಲಾಯಿತು.

## ನೀರಾವರಿ ಭೂ ಅಭಿವೃದ್ಧಿ

ಮಲಪ್ರಭಾ ಯೋಜನೆಯಿಂದಾಗಿ ಧಾರವಾಡ ಜಿಲ್ಲೆಯ ನವಲಗುಂದ, ನರಗುಂದ ಮತ್ತು ರೋಣ ತಾಲೂಕುಗಳಲ್ಲಿಯ 1,45,199 ಹೆಕ್ಟೇರು ಭೂಮಿಗೆ ನೀರಾವರಿಯೊದಗಿಸಲು ಯೋಜಿಸಲಾಗಿದ್ದು, 61,176 ಹೆಕ್ಟೇರು ಭೂಮಿ ನೀರಾವರಿಗೊಳಗಾಗಿದೆ. ನೀರಾವರಿ ಉತ್ತಮ ರೀತಿಯಿಂದಾಗಿ, ಆಗಬೇಕಾದಲ್ಲಿ ನೀರಾವರಿ ಕ್ಷೇತ್ರದಲ್ಲಿಯ ಸಾಗುವಳಿ ಭೂಮಿಯನ್ನು ಅಭಿವೃದ್ಧಿಪಡಿಸುವುದು ಅತ್ಯಗತ್ಯ. ಭೂಮಿ ಅಭಿವೃದ್ಧಿಗೊಳಿಸುವುದರಿಂದ ನೀರನ್ನು ಎಲ್ಲ ಭೂಮಿಗೆ ಒದಗಿಸಲು ಸಹಾಯವಾಗುತ್ತದೆ. ಈ ಕಾರ್ಯಕ್ಕಾಗಿ ಎಲ್ಲ ನೀರಾವರಿ ಪ್ರದೇಶಗಳಂತೆ ಘಟಪ್ರಭಾ-ಮಲಪ್ರಭಾ ನೀರಾವರಿ ಪ್ರದೇಶಕ್ಕಾಗಿ ಒಂದು ಪ್ರಾಧಿಕಾರ ಸ್ಥಾಪಿಸಲಾಗಿದೆ. ಈ ಪ್ರಾಧಿಕಾರವು ಮಲಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ 90-91 ನೇ ಸಾಲಿನಲ್ಲಿ 3,813 ಹೆಕ್ಟೇರು ಭೂಮಿಯನ್ನು ಅಭಿವೃದ್ಧಿಗೊಳಿಸಿದೆ. ಇದರಲ್ಲಿಯ ಬಹುಪಾಲು ಭೂಮಿ ರೈತರಿಂದಲೇ ಅಭಿವೃದ್ಧಿಗೊಳಿಸಲಾಗಿದೆ. ವಿಶೇಷ ಘಟಕ ಯೋಜನೆ ಅಡಿಯಲ್ಲಿ ಈ ಕ್ಷೇತ್ರದಲ್ಲಿಯ 200 ರೈತರಿಗೆ ಕೃಷಿ ಸಾಮಗ್ರಿಗಳನ್ನು ಉಚಿತವಾಗಿ ಪೂರೈಸಲಾಗಿದೆ. ಎಲ್ಲ ಕಾಮಗಾರಿಗಳಿಗಾಗಿ ಪ್ರಾಧಿಕಾರವು 32 ಲಕ್ಷ ರೂ. ಖರ್ಚು ಮಾಡಿದೆ. ನೀರಾವರಿಯ ಕೊನೆಯ ಅಂಚಿನಲ್ಲಿರುವ, ನೀರಿನಿಂದ ವಂಚಿತರಾಗುವ ರೈತರ ಅನುಕೂಲಕ್ಕಾಗಿ ಅಂಥ ಕ್ಷೇತ್ರಗಳಲ್ಲಿ ಕೊಳವೆ

ಭಾವಿಗಳನ್ನು ತೋಡಲಾಗುತ್ತಿದೆ. ಅದರಂತೆಯೇ ನೀರಾವರಿ ಕ್ಷೇತ್ರದಲ್ಲಿಯ ಜವಳು ಭೂಮಿಯಲ್ಲಿಯ ನೀರನ್ನು ಹೊರಗೆ ಹಾಕಲು ಬಸಿಕೊಳವೆಗಳನ್ನು ಹಾಕಲಾಗುತ್ತಿದೆ. ಕೊಳವೆ ಭಾವಿಗಳಿಗಾಗಿ 8.40 ಲಕ್ಷ ರೂ.ಗಳನ್ನು ಹಾಗೂ ಜವಳು ಭೂಮಿ ಅಭಿವೃದ್ಧಿಗಾಗಿ 50 ಸಾವಿರ ರೂ.ಗಳನ್ನು ಖರ್ಚು ಮಾಡಲಾಗಿದೆ.

**ರೇಷ್ಮೆ :** ರೇಷ್ಮೆ ಕೃಷಿಯು ಅಲ್ಪ ವೆಚ್ಚದಲ್ಲಿ ಹೆಚ್ಚು ಲಾಭವನ್ನು ತರುವ ಹಾಗೂ ಹೆಚ್ಚು ಉದ್ಯೋಗ ಒದಗಿಸುವ ಕೃಷಿ ಆಗಿದೆ. ಇತ್ತೀಚೆಗೆ ಹೆಚ್ಚು ಪ್ರಚಲಿತಗೊಳ್ಳುತ್ತಿರುವ ಈ ಉದ್ದಿಮೆಗೆ ಧಾರವಾಡ ಜಿಲ್ಲೆಯಲ್ಲಿ ಒಳ್ಳೆಯ ಭವಿಷ್ಯ ರೂಪಿತವಾಗಿದೆ. ಹೆಚ್ಚು ಜನರು ಈ ಕೃಷಿಯತ್ತ ಒಲಿಯುತ್ತಿದ್ದು ನಿರುದ್ಯೋಗ ನಿವಾರಣೆ, ಆರ್ಥಿಕ ಉನ್ನತಿ ಸಾಧನೆಯಾಗುತ್ತಿದೆ. ಧಾರವಾಡ ಜಿಲ್ಲೆಯಲ್ಲಿ ರೇಷ್ಮೆ ಅಭಿವೃದ್ಧಿಗೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಲಾಗಿದ್ದು, 6 ತಾಂತ್ರಿಕ ಸಲಹಾ ಕೇಂದ್ರಗಳು 78 ಚಾಕಿ ಸಾಕಣೆ ಕೇಂದ್ರಗಳು, 2 ಬಿತ್ತನೆ ಕೋಠಿಗಳು, 5ರೇಷ್ಮೆ ಕ್ಷೇತ್ರಗಳು ಇದಕ್ಕಾಗಿ ಕಾರ್ಯಮಾಡುತ್ತಿವೆ. ಜಿಲ್ಲೆಯಲ್ಲಿ (1990-91ರಲ್ಲಿ) ವಿಶೇಷ ಘಟಕ ಯೋಜನೆಯಲ್ಲಿ ರಾಜ್ಯ ನೆರವು ಕಾರ್ಯಕ್ರಮದಂತೆ 1.46 ಲಕ್ಷ ರೂ.ಗಳ ಮೌಲ್ಯದಲ್ಲಿ ಹಿಪ್ಪುನೇರಳೆ ಸಸಿ, ರಾಸಾಯನಿಕ ಗೊಬ್ಬರ, ಕೀಟನಾಶಕ ಮತ್ತು ರೇಷ್ಮೆ ಹುಳು ಸಾಕಾಣಿಕೆ ಉಪಕರಣಗಳನ್ನು 75 ಫಲಾನುಭವಿಗಳಿಗೆ ಉಚಿತವಾಗಿ ಹಂಚಲಾಗಿದೆ. ಗದಗ ತಾಲೂಕ ಬೆಳದಡಿಯಲ್ಲಿರುವ ಸಮುದಾಯ ಅಭಿವೃದ್ಧಿ ಕೇಂದ್ರಕ್ಕೆ 43,000 ರೂ.ಗಳನ್ನು ಖರ್ಚು ಮಾಡಿ 69 ಜನರಿಗೆ ಪ್ರಯೋಜನ ದೊರಕಿಸಿಕೊಡಲಾಗಿದೆ. ಕೇಂದ್ರ ನೆರವು ಯೋಜನೆಯಲ್ಲಿ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಿಸಲು 14 ಫಲಾನುಭವಿಗಳಿಗೆ ತಲಾ 10 ಸಾವಿರ ರೂ.ಗಳಂತೆ 1.40 ಲಕ್ಷ ರೂ. ವಿನಿಯೋಗಿಸಲಾಗಿದೆ. ಇಲಾಖೆಯ ನೆರವು ಯೋಜನೆಯಲ್ಲಿ ಪ್ಲಾಸ್ಟಿಕ್ ಚಂದ್ರಿಕೆಗಳನ್ನು 50 ಜನರಿಗೆ ಒದಗಿಸಲಾಗಿದೆ. ಒಬ್ಬರಿಗೆ ರೇಷ್ಮೆ ಹುಳು ಸಾಕಣೆ ಮನೆ ನಿರ್ಮಿಸಲು ಸಹಾಯ ಒದಗಿಸಲಾಗಿದೆ. ಒಟ್ಟು 34ಸಾವಿರ ರೂ.ಗಳನ್ನು ಖರ್ಚು ಮಾಡಲಾಗಿದೆ. ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಲ್ಲಿ ಹಿಪ್ಪು ನೇರಳೆ ಕಡ್ಡಿ, ರೇಷ್ಮೆ ಹುಳು ಸಾಕಾಣಿಕೆ ಸಲಕರಣೆ, ಗೊಬ್ಬರ, ಕೀಟನಾಶಕಗಳ ಪೂರೈಕೆಗಾಗಿ 20 ಫಲಾನುಭವಿಗಳಿಗೆ 39 ಸಾವಿರ ರೂ.ಗಳನ್ನು ಹಾಗೂ ಇಬ್ಬರು ಫಲಾನುಭವಿಗಳಿಗೆ ರೇಷ್ಮೆ ಹುಳು ಸಾಕಣೆ ಮನೆ ನಿರ್ಮಾಣಕ್ಕೆ 10 ಸಾವಿರ ರೂ.ಗಳನ್ನು ನೀಡಲಾಗಿದೆ; ಹಾಗೂ 23 ಸಾವಿರ ರೂ.ಗಳನ್ನು ಖರ್ಚು ಮಾಡಿ ಒಂದು ಚಾಕಿ ಸಾಕಾಣಿಕೆ ಕೇಂದ್ರಕ್ಕೆ ರೇಷ್ಮೆ ಹುಳು ಸಾಕಣೆ ಉಪಕರಣ ಅಳವಡಿಸಲಾಗಿದೆ. ಡಿಪಿಎಪಿ (ಬರ ಸಂಭವ ಪ್ರದೇಶ ಯೋಜನೆ) ಯೋಜನೆಯಲ್ಲಿ 25 ಲಕ್ಷ ರೇಷ್ಮೆ ಸಸಿ ಬೆಳೆಸಿ ರೈತರಿಗೆ ನೀಡಲಾಗಿದೆ. ಇದಕ್ಕಾಗಿ 2.69 ಲಕ್ಷ ರೂ.ಗಳನ್ನು ಹಾಗೂ 100 ಫಲಾನುಭವಿಗಳಿಗೆ ರೇಷ್ಮೆ ಹುಳು ಸಾಕಾಣಿಕೆ ಉಪಕರಣ ಸರಬರಾಜು ಮಾಡಲು 1.72 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಜವಾಹರ ರೋಜಗಾರ ಯೋಜನೆಯಲ್ಲಿ 30 ಸಾವಿರ ರೂ. ಖರ್ಚು ಮಾಡಿ ಒಂದು ಲಕ್ಷ ಹಿಪ್ಪುನೇರಳೆ ಸಸಿಗಳನ್ನು ಬೆಳೆಸಿ ರೈತರಿಗೆ ನೀಡಲಾಗಿದೆ. 1990-91 ನೇ ಸಾಲಿನಲ್ಲಿ 8.80 ಲಕ್ಷ ರೇಷ್ಮೆ ಮೊಟ್ಟೆಗಳಿಂದ 293 ಮೆ.ಟನ್ ರೇಷ್ಮೆ ಗೂಡುಗಳನ್ನು ಉತ್ಪಾದಿಸಲಾಗಿದೆ. 1991 ರಲ್ಲಿದ್ದಂತೆ 575 ಗ್ರಾಮಗಳಲ್ಲಿ 3,080 ಎಕರೆ ಕ್ಷೇತ್ರದಲ್ಲಿ 2,600 ರೇಷ್ಮೆ ಕೃಷಿಕರು, ರೇಷ್ಮೆ ಕೃಷಿ ಕೈಗೊಂಡಿದ್ದಾರೆ. ಅಲ್ಲದೆ ಪ್ರತ್ಯೇಕವಾಗಿ ಹಾಗೂ ಪರೋಕ್ಷವಾಗಿ 18,000 ಜನರು ಈ ಗುಡಿ ಕೈಗಾರಿಕೆಯಲ್ಲಿ ಪಾಲುಗೊಂಡಿದ್ದಾರೆ.

ರೇಷ್ಮೆ ಮೊಟ್ಟೆಗಳ ಬೇಡಿಕೆಯನ್ನು ಪೂರೈಸಲು ಹಾಗೂ ಮೊಟ್ಟೆಗಳ ಗುಣಮಟ್ಟವನ್ನು ಕಾಪಾಡಿಕೊಂಡು ಬರಲು, ಧಾರವಾಡದ ರಾಯಾಪುರದಲ್ಲಿರುವ ರೇಷ್ಮೆ ಕ್ಷೇತ್ರದಲ್ಲಿ ಜಪಾನಿನ ತಂತ್ರಜ್ಞಾನ ನೆರವಿನಿಂದ ಒಂದು ಕೋಟಿ ರೂ.ಗಳ ವೆಚ್ಚದಲ್ಲಿ ಸುಸಜ್ಜಿತ ಶೈತ್ಯಾಗಾರವನ್ನು ಸ್ಥಾಪಿಸಲಾಗಿದೆ. ದೇಶಿ ತಳಿ ಹಾಗೂ ಬೈವೊಲ್ಟಿನ್ ವಿದೇಶಿ ತಳಿಯ ಸಹಯೋಗದೊಂದಿಗೆ ಮಿಶ್ರತಳಿ ರೇಷ್ಮೆ ಮೊಟ್ಟೆಗಳನ್ನು ಇಲ್ಲಿ ತಯಾರಿಸಲಾಗುತ್ತಿದೆ. ಹಾಗೂ ಸಾಮಾನ್ಯ ಪರಿಸ್ಥಿತಿಯಲ್ಲಿ ಮೊಟ್ಟೆಗಳನ್ನು ತಯಾರಿಸಲು ಬೇಕಾಗುವ ಅವಧಿಯನ್ನು ಕೂಡ ಆಧುನಿಕ ತಂತ್ರ ಜ್ಞಾನದಿಂದ ಕಡಿಮೆಗೊಳಿಸಿ, ರೈತರಿಗೆ ಸಕಾಲದಲ್ಲಿ ಮೊಟ್ಟೆಗಳನ್ನು ಒದಗಿಸಲು ಇಲ್ಲಿ ಪ್ರಯತ್ನಿಸಲಾಗುತ್ತಿದೆ.

1992-93 ನೇ ಸಾಲಿನಲ್ಲಿ ರೇಷ್ಮೆ ಅಭಿವೃದ್ಧಿಗಾಗಿ ವಿಶೇಷ ಘಟಕ ಯೋಜನೆಯಲ್ಲಿ 249 ಫಲಾನುಭವಿಗಳಿಗೆ 6.68 ಲಕ್ಷ ರೂ. ಮೊತ್ತದಲ್ಲಿ ಹಿಪ್ಪುನೇರಳೆ ಕಡ್ಡಿಗಳನ್ನೂ, ರಾಸಾಯನಿಕ ಗೊಬ್ಬರ, ಕೀಟನಾಶಕ, ಮತ್ತು ಹುಳು ಸಾಕುವ ಉಪಕರಣಗಳನ್ನು ಉಚಿತವಾಗಿ ಸರಬರಾಜು ಮಾಡಲಾಗಿದೆ. ಪಶ್ಚಿಮ ಘಟ್ಟ ಅಬಿವೃದ್ಧಿ ಯೋಜನೆಯಲ್ಲಿ 0.92 ಲಕ್ಷ ರೂ. ಖರ್ಚಿನಲ್ಲಿ 1.10 ಲಕ್ಷ ನರ್ಸರಿ ಬೆಳೆಸಲಾಗಿದೆ ಹಾಗೂ 20 ಫಲಾನುಭವಿಗಳಿಗೆ ಸೌಲಭ್ಯಗಳನ್ನು ಒದಗಿಸಲಾಗಿದೆ. ಬರಗಾಲ ಪ್ರದೇಶದ ಅಭಿವೃದ್ಧಿ ಯೋಜನೆಯಲ್ಲಿ 0.98 ಲಕ್ಷ ರೂ. ಖರ್ಚು ಮಾಡಿ 1118.72 ಹೆ.ಕ್ಷೇತ್ರದಲ್ಲಿ ಹಿಪ್ಪುನೇರಳೆ ಬೆಳೆಯಲಾಗಿದ್ದು 245 ಟನ್ ರೇಷ್ಮೆ ಗೂಡು ಉತ್ಪಾದನೆ ಮಾಡಲಾಗಿದೆ.

ರೇಷ್ಮೆ ಕೃಷಿಯಲ್ಲಿ 1991-92ರಲ್ಲಿ ಜಿಲ್ಲೆಯಲ್ಲಿನ ಕೆಲವು ಮುಖ್ಯ ಮಾಹಿತಿಗಳನ್ನು ಇಲ್ಲಿ ಕೊಡಲಾಗಿದೆ. 1)ರೇಷ್ಮೆ ತಾಲೂಕುಗಳು - 15; 2) ರೇಷ್ಮೆ ಗ್ರಾಮಗಳು - 523; 3) ರೇಷ್ಮೆ ಕುಟುಂಬಗಳು - 2,137; ಅವುಗಳಲ್ಲಿ ಪ.ಜಾ. 210; ಪ.ಪಂ 32; ಹಾಗೂ ಇತರೆ 1895; 4) ರೇಷ್ಮೆ ಫಾರಂಗಳು (ಸರ್ಕಾರಿ) - 5; 5) ಚಾಕಿ ಕೇಂದ್ರಗಳು - 78; 6) ಚರಕಾ ರೀಲರ್‌ಗಳು - 18; 7) ಒಟ್ಟು ರೀಲರ್‌ಗಳು - 53; 8) ಒಟ್ಟು ಘಟಕಗಳು - 53; 9) ಚರಕಗಳು - 34; 10) ಬೇಸಿನ್‌ಗಳು - 224; 11) ರೇಷ್ಮೆಗೂಡಿನ ಉತ್ಪಾದನೆ - 400 ಲಕ್ಷ ಟನ್; 12) ರೇಷ್ಮೆ ಉತ್ಪಾದನೆ - 251 ಟನ್; 13) ಹುಳು ಉತ್ಪಾದನೆ - 17.98 ಲಕ್ಷ; 14) ರೇಷ್ಮೆಗೂಡಿನ ವಹಿವಾಟಿನ ಮೌಲ್ಯ - 133.9 ಲಕ್ಷ ರೂ. (ಆಧಾರ: ರೇಷ್ಮೆ ಇಲಾಖೆ).

**ತೋಟಗಾರಿಕೆ :** ಜಿಲ್ಲೆಯಲ್ಲಿ 1,26,232 ಹೆಕ್ಟೇರು ಕ್ಷೇತ್ರದಲ್ಲಿ ತೋಟಗಾರಿಕೆ ನಡೆಸಲಾಗುತ್ತಿದೆ. ಸುಮಾರು 3,000 ಹೆಕ್ಟೇರು ಕ್ಷೇತ್ರದಲ್ಲಿ ಮಾವು, ಪೇರಲ, ಚಿಕ್ಕು, ಬಾಳೆ ಮೊದಲಾದ ಹಣ್ಣುಗಳನ್ನು ಸುಮಾರು 14,000 ಹೆಕ್ಟೇರು ಕ್ಷೇತ್ರದಲ್ಲಿ ಆಲೂಗಡ್ಡೆ, ಟೊಮೆಟೋ, ಬದನೆ, ಬೆಂಡೆ ಮೊದಲಾದ ತರಕಾರಿಗಳನ್ನು ಸುಮಾರು 5,000 ಹೆಕ್ಟೇರು ಕ್ಷೇತ್ರದಲ್ಲಿ ತೆಂಗನ್ನು ಬೆಳೆಯಲಾಗುತ್ತಿದ್ದರೆ 80,000 ಹೆಕ್ಟೇರು ಕ್ಷೇತ್ರದಲ್ಲಿ ಮೆಣಸಿನಕಾಯಿ ಬೆಳೆಯಲಾಗುತ್ತಿದೆ. ಸುಮಾರು 15,000 ಹೆಕ್ಟೇರು ಕ್ಷೇತ್ರದಲ್ಲಿ ಈರುಳ್ಳಿ, ಕೊತ್ತಂಬರಿ ಬೆಳೆಯಲಾಗುತ್ತಿದೆ.

ಜಿಲ್ಲೆಯಲ್ಲಿ 18 ತೋಟಗಾರಿಕೆ ಕ್ಷೇತ್ರಗಳು ಸಸ್ಯ ಸಂಗೋಪನಾ ಕ್ಷೇತ್ರಗಳು ಹಣ್ಣಿನ ಸಸಿ, ಕಸಿ ತಯಾರಿಸಲು ಹಾಗೂ ತೆಂಗಿನ ಸಸಿಗಳನ್ನು ಉತ್ಪತ್ತಿ ಮಾಡಲು ಹಾಗೂ ರೈತರಿಗೆ ವಿತರಿಸಲು ಕಾರ್ಯ ಮಾಡುತ್ತವೆ. 1990-91ನೇ ಸಾಲಿನಲ್ಲಿ ತೆಂಗಿನ ಯೋಜನೆ, ತೋಟಗಳಲ್ಲಿ ಹನಿ ನೀರಾವರಿ, ಮಾರುಕಟ್ಟೆ ಧನ ಸಹಾಯ, ರೈತರಿಗೆ ತರಬೇತಿ, ತೋಟಗಾರಿಕೆ ಕ್ಷೇತ್ರದಲ್ಲಿ ಮೂಲ ಸೌಕರ್ಯ ಒದಗಿಸುವುದು, ಮಂಡಳ ನರ್ಸರಿ ಸ್ಥಾಪನೆ, ತೋಟಗಾರಿಕೆ ಪ್ರದೇಶ ವಿಸ್ತರಣೆ, ಸಸ್ಯ ಸಂರಕ್ಷಣೆ, ತೋಟಗಾರಿಕೆ ಕಟ್ಟಡಗಳು, ವಿಶೇಷ ಘಟಕ ಯೋಜನೆಗಳಂಥ ಒಟ್ಟು 11 ಯೋಜನೆಗಳನ್ನು ಹಾಗೂ ಪಶ್ಚಿಮಘಟ್ಟ ಯೋಜನೆ, ಅಭಾವ ಪೀಡಿತ ಪ್ರದೇಶ ಅಭಿವೃದ್ಧಿ ಯೋಜನೆ, ನ್ಯೂಟ್ರಿಷನಲ್ ಗಾರ್ಡನ್, ತೆಂಗಿನ ತೋಟಗಾರಿಕೆ, ಪಂಪ್‌ಸೆಟ್ ಧನ ಸಹಾಯ ಮೊದಲಾದ 4 ವಿಶೇಷ ಯೋಜನೆಗಳನ್ನು ಜಿಲ್ಲೆಯಲ್ಲಿ ಕಾರ್ಯಗತಗೊಳಿಸಲಾಗಿದೆ. 40,000 ತೆಂಗಿನ ಬೀಜದ ಕಾಯಿಗಳನ್ನು ಸಂಗ್ರಹಿಸಿ ಬಿತ್ತನೆ ಮಾಡಲಾಗಿದೆ. 3,45,755 ಸಸಿ\ಕಸಿ ಉತ್ಪಾದಿಸಲಾಗಿದೆ. 259 ಎಕರೆ ಪ್ರದೇಶಕ್ಕೆ ಹನಿ ನೀರಾವರಿ ಸೌಕರ್ಯ ಒದಗಿಸಲಾಗಿದೆ. 228 ರೈತರಿಗೆ ತರಬೇತಿ ನೀಡಲಾಗಿದೆ. 1,050 ಫಲಾನುಭವಿಗಳಿಗೆ ಸಸ್ಯ ಸಂರಕ್ಷಣೆಗಾಗಿ ಶೇಕಡಾ 50 ರ ಸಹಾಯಧನ ರೂಪದಲ್ಲಿ ಕ್ರಿಮಿನಾಶಕಗಳನ್ನು ಒದಗಿಸಲಾಗಿದೆ. ತೋಟಗಾರಿಕಾ ಕಾರ್ಯಗಳಿಗಾಗಿ ಒಟ್ಟು 29.88 ಲಕ್ಷ ರೂಗಳನ್ನು ವೆಚ್ಚ ಮಾಡಲಾಗಿದೆ. 1992-93 ರಲ್ಲಿ ಹಣ್ಣುಗಳನ್ನು ಬೆಳೆದ ಒಟ್ಟು ವಿಸ್ತೀರ್ಣ 3,000 ಹೆಗಳಿದ್ದು, ಮುಖ್ಯವಾಗಿ ಮಾವು, ಬಾಳೆ, ದ್ರಾಕ್ಷಿ, ನಿಂಬೆ, ಪೇರಲ, ಕಲ್ಲಂಗಡಿ, ದಾಳಿಂಬೆ ಮುಂತಾದ ಮುಖ್ಯ ಬೆಳೆಗಳನ್ನು ಬೆಳೆಯಲಾಗಿದೆ. ತರಕಾರಿ ಬೆಳೆಗಳ ಒಟ್ಟು ವಿಸ್ತೀರ್ಣ 35,000 ಹೆ.ಇದ್ದು ತರಕಾರಿ ಬೆಳೆಗಳಲ್ಲಿ ಹೆಚ್ಚಾಗಿ ಆಲೂಗಡ್ಡೆ, ಈರುಳ್ಳಿ, ಟೊಮೋಟೊ, ಬದನೆ, ಹಸಿರು ತರಕಾರಿ ಮುಖ್ಯವಾದವು. 1,031 ಹೆ.ಪ್ರದೇಶದಲ್ಲಿ ತೆಂಗಿನ ಗಿಡ 221ಹೆ.ಪ್ರದೇಶದಲ್ಲಿ ಅಡಿಕೆ, 980ಹೆ.ಪ್ರದೇಶದಲ್ಲಿ ಎಲೆಬಳ್ಳಿ ಹಾಗೂ 517ಹೆ.ಪ್ರದೇಶದಲ್ಲಿ ಹೂಗಳನ್ನು ಬೆಳೆಯಲಾಗಿದೆ. (ಅಧ್ಯಾಯ 4 ರಲ್ಲಿ ವಿವರ ಕೊಡಲಾಗಿದೆ)

**ಪಶುಸಂಗೋಪನೆ**

ಪಶು ಸಂಪತ್ತಿನ ಅಭಿವೃದ್ಧಿಗೆ ಸರಕಾರ ವಿವಿಧ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಿದೆ. ಜಾನುವಾರುಗಳ ಆರೋಗ್ಯ ಪರೀಕ್ಷೆ, ಸಾಕುಪ್ರಾಣಿಗಳ ಸೂಕ್ತ ಚಿಕಿತ್ಸೆ, ಸುಧಾರಿತ ತಳಿ ಅಭಿವೃದ್ಧಿ, ಪಶು ಸಂಪತ್ತಿನ ನಿರ್ವಹಣೆ, ಮೇವು ಅಭಿವೃದ್ಧಿ ಯೋಜನೆಗಳು, ಈ ಕಾರ್ಯಕ್ರಮದಲ್ಲಿ ಪ್ರಮುಖವಾದವುಗಳು. ಪಶುಗಳಿಗೆ ಅಂಟುರೋಗ ಮತ್ತು ಇತರ ಜಾಡ್ಯಗಳು ಬರದಂತೆ ನೋಡಿಕೊಳ್ಳಲು ಹಾಗೂ ತಳಿ ಅಭಿವೃದ್ಧಿಗೊಳಿಸಲು, ಜಿಲ್ಲೆಯಲ್ಲಿ 190 ಪಶು ವೈದ್ಯಕೀಯ ಸೇವಾ ಸಂಸ್ಥೆಗಳು ಕಾರ್ಯಮಾಡುತ್ತಿವೆ. ಗದಗ, ಹಾವೇರಿ, ಹುಬ್ಬಳ್ಳಿ ಹಾಗೂ ಧಾರವಾಡಗಳಲ್ಲಿ ನಾಲ್ಕು ಪಶು ವೈದ್ಯಕೀಯ ಆಸ್ಪತ್ರೆಗಳಿವೆ. 30 ಪಶು ವೈದ್ಯ ಶಾಲೆಗಳು, 166 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು, 17 ಸಂಚಾರಿ ಪಶು ಚಿಕಿತ್ಸಾಲಯಗಳಿವೆ. ಸಂಚಾರಿ ಪಶುಚಿಕಿತ್ಸಾಲಯಗಳು ಪ್ರತಿ ತಾಲೂಕಿನಲ್ಲಿ 5 ಮಾರ್ಗಗಳನ್ನು ಹೊಂದಿದ್ದು, ಪ್ರತಿ ಮಾರ್ಗದಲ್ಲಿ 5-6 ಗ್ರಾಮಗಳಿವೆ. ವಾರದ 5 ದಿನಗಳಲ್ಲಿ, ಪ್ರತೀದಿನ ಒಂದು ಮಾರ್ಗದಲ್ಲಿ ಸಂಚರಿಸಿ ಪಶು

ಚಿಕಿತ್ಸೆ ಕಾರ್ಯಕೈಕೊಳ್ಳಲಾಗುವುದು. ಇವುಗಳ ಮುಖಾಂತರ 1990 ರಲ್ಲಿ ಆರೂವರೆ ಸಾವಿರಕ್ಕೂ ಹೆಚ್ಚು ಪಶುಗಳಿಗೆ ವಿವಿಧ ಕಾಯಿಲೆಗಳಿಗೆ ಚಿಕಿತ್ಸೆ ನೀಡಲಾಗಿದೆ. 1.20 ಲಕ್ಷ ಪಶುಗಳಿಗೆ ಕೃತಕ ಗರ್ಭಧಾರಣೆ ನಡೆಸಲಾಗಿದೆ. 80,000 ಜಾನುವಾರುಗಳ ಅನುಸರಣೆಯಿಂದಾಗಿ 34 ಸಾವಿರಕ್ಕೂ ಹೆಚ್ಚು ಜಾನುವಾರುಗಳು ಗರ್ಭಧರಿಸಿದವು. ದೊಡ್ಡ ರೋಗ ನಿಯಂತ್ರಣಕ್ಕೆ 774 ಹಳ್ಳಿಗಳ 3.84 ಲಕ್ಷ ಪಶುಗಳಿಗೆ ರಾಣಿಖೇತ ರೋಗದ ವಿರುದ್ಧ 1.49 ಲಕ್ಷ ಜಾನುವಾರುಗಳಿಗೆ ಲಸಿಕೆ ಹಾಕಲಾಗಿದೆ.

ಉತ್ತಮ ತಳಿಯ ಹುಲ್ಲಿನ ಬೀಜಗಳನ್ನು ಹಾಗೂ ಹುಲ್ಲು ಬೇರುಗಳನ್ನು ರೈತರಿಗೆ ವಿತರಿಸಿ ಮೇವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. 1990-91ರಲ್ಲಿ 365 ಹೆಕ್ಟೇರಿನಲ್ಲಿ 10 ಮೆ.ಟನ್ ಮೇವು ಉತ್ಪಾದಿಸಲಾಗಿದೆ. ವಿಶೇಷ ಘಟಕ ಯೋಜನೆಯಲ್ಲಿ ಪರಿಶಿಷ್ಟ ಜಾತಿಯ 87 ಫಲಾನುಭವಿಗಳಿಗೆ ಎಮ್ಮೆ ಹಸುಗಳನ್ನು ವಿತರಿಸಲಾಗಿದೆ. ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆಯಂತೆ ಆಯ್ದ ಸಣ್ಣ, ಅತೀ ಸಣ್ಣ ರೈತರು ಮತ್ತು ಭೂರಹಿತ ಕೃಷಿ ಕಾರ್ಮಿಕರಿಗೆ 250 ಕುರಿಗಳನ್ನು ವಿತರಣೆ ಮಾಡಲಾಗಿದೆ. ಬರಪೀಡಿತ ಪ್ರದೇಶ ಅಬಿವೃದ್ಧಿ ಕಾರ್ಯಕ್ರಮದಲ್ಲಿ ಜಿಲ್ಲೆಯ 11 ತಾಲೂಕುಗಳಲ್ಲಿ ಸಿಲ್ವಿಪಾಶ್ಚರ್ ಹುಲ್ಲು ಅಭಿವೃದ್ಧಿ ಕ್ಷೇತ್ರಗಳನ್ನು ಬೆಳೆಸಲಾಗಿದೆ. ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯಲ್ಲಿ ಪಶು ಚಿಕಿತ್ಸಾ ಶಿಬಿರ ಏರ್ಪಡಿಸಿ 64 ಫಲಾನುಭವಿಗಳಿಗೆ ಮೊಲಗಳ ಹಾಗೂ ಗಿರಿರಾಜ ಕೋಳಿ ತಳಿಗಳನ್ನು ವಿತರಿಸಲಾಗಿದೆ.

ಜಿಲ್ಲಾ ಮಟ್ಟದ ಯೋಜನೆಯಲ್ಲಿ 1990-91 ರಲ್ಲಿ ಹೊಸ ಸಿಡೇನೂರ, ಕರಡಿಗುಡ್ಡ, ಸೊರಟೂರ, ಆಡೂರ, ಸೋಮಪುರ, ಮರೋಳ, ಬನಹಟ್ಟಿ, ತಡಸ, ಹರಸಿ, ಐರಣಿ, ಶಾಂತಗಿರಿ, ಬನ್ನೂರ, ಕಡಕೋಳ, ಬನ್ನಿಕೊಪ್ಪ, ಸಾಲೆಹೊಸೂರು ಈ 15 ಗ್ರಾಮಗಳಲ್ಲಿ ಹೊಸದಾಗಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಲಕ್ಕುಂಡಿ, ಧುಂಡಸಿ, ಅಳ್ನಾವರ, ಹುಲಕೊಪ್ಪ ಹಾಗೂ ಸಾತೇನಹಳ್ಳಿ, ಈ 5 ಗ್ರಾಮಗಳಲ್ಲಿದ್ದ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಿ ಪಶು ಚಿಕಿತ್ಸಾಲಯಗಳನ್ನಾಗಿ ಪರಿವರ್ತಿಸಲಾಗಿದೆ. ಪಶುಪಾಲನೆ ಮತ್ತು ಪಶು ಸಂಗೋಪನಾ ಚಟುವಟಿಕೆಗಳಿಗಾಗಿ ಜಿಲ್ಲೆಯಲ್ಲಿ 1990-92 ರಲ್ಲಿ ಇಲಾಖೆಯು 72.47 ಲಕ್ಷ ರೂ.ಗಳನ್ನು ವಿನಿಯೋಗಿಸಿದೆ.

## ಹಾಲು ಉತ್ಪಾದನೆ

ಧಾರವಾಡದ ಸಹಕಾರಿ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಒಕ್ಕೂಟ ನಿಯಮಿತವು ರಾಯಾಪುರ ಡೈರಿ ಆವರಣದಲ್ಲಿ ಕಾರ್ಯಮಾಡುತ್ತದೆ. ಧಾರವಾಡ, ಕಾರವಾರ ಜಿಲ್ಲೆಗಳು ಇದರ ವ್ಯಾಪ್ತಿಯಲ್ಲಿ ಬರುತ್ತವೆ. ಹಳ್ಳಿಯಲ್ಲಿ ಹಾಲು ಉತ್ಪಾದಕರ ಸಹಕಾರಿ ಸಂಘಗಳ ರಚನೆ, ಹಾಲು ಉತ್ಪಾದಕರಿಗೆ ಉತ್ತಮ ಮಾರುಕಟ್ಟೆ, ಯೋಗ್ಯದರ, ಸದಸ್ಯರಿಗೆ ವಿವಿಧ ತರಬೇತಿ, ಪಶು ವೈದ್ಯಕೀಯ ಚಿಕಿತ್ಸೆ ಮೊದಲಾದ ಕಾರ್ಯಕ್ರಮಗಳನ್ನು ಒಕ್ಕೂಟವೂ ಕಾರ್ಯಗತಗೊಳಿಸುತ್ತದೆ. ಧಾರವಾಡ ಜಿಲ್ಲೆಯ ವ್ಯಾಪ್ತಿಯಲ್ಲಿ 5 ಶೀಥಲ ಕೇಂದ್ರಗಳಿವೆ. 460 ಹಾಲು ಉತ್ಪಾದಕರ ಸಹಕಾರಿ ಸಂಘಗಳಿವೆ. ಪ್ರತಿನಿತ್ಯ 19 ವಿತರಣೆ ಮಾರ್ಗಗಳಿಂದ 54,000 ಲೀಟರ್ ಹಾಲು ಮಾರಾಟ ಮಾಡಲಾಗುತ್ತದೆ. 1990-91 ನೇ ಸಾಲಿನಲ್ಲಿ 618 ಟನ್ ಕೆನೆರಹಿತ ಹಾಲಿನ ಪುಡಿ, 436 ಟನ್ ಕೆನೆಸಹಿತ ಹಾಲಿನ ಪುಡಿ, 586 ಟನ್ ಬೆಣ್ಣೆ, 256 ಟನ್ ತುಪ್ಪಗಳನ್ನು ಉತ್ಪಾದಿಸಲಾಗಿದೆ. 1992-93 ನೇ ಸಾಲಿನಲ್ಲಿ 431 ಸಹಕಾರಿ ಸೊಸೈಟಿಗಳಿದ್ದು, 64,000 ರೈತ ಕುಟುಂಬದ ಸದಸ್ಯರಿದ್ದು 248 ಹಾಲು ವಿತರಣಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು 187 ಹುಬ್ಬಳ್ಳಿಯಲ್ಲಿಯೂ 61 ಧಾರವಾಡ ಪಟ್ಟಣದಲ್ಲಿವೆ. 1990-91 ರಲ್ಲಿ 192.74 ಲಕ್ಷ ಕೆಜಿ ಹಾಲು ಸಂಗ್ರಹಣೆ ಮಾಡಲಾಗಿದೆ. 489 ಮೆ.ಟನ್ ತುಪ್ಪ, 9 ಮೆ.ಟನ್ ಫೇಡಾ, 0.7 ಮೆ.ಟನ್ ಶ್ರಿಖಂಡ 1794 ಮೆ.ಟನ್ ಹಾಲಿನ ಪುಡಿ ಮತ್ತು 1402 ಮೆ.ಟನ್ ಬೆಣ್ಣೆ ಉತ್ಪಾದನೆ ಮಾಡಲಾಗಿದೆ. ನೆರೆಯ ಮಹಾರಾಷ್ಟ್ರ, ಗೋವೆಗಳಿಗೆ ಇಲ್ಲಿಂದ ಹಾಲು ಪೂರೈಕೆಯಾಗುತ್ತದೆ.

## ಕೈಗಾರಿಕೆ

ಜಿಲ್ಲಾ ಕೈಗಾರಿಕಾ ಕೇಂದ್ರವು ಕೈಗಾರಿಕೆಗಳ ಸ್ಥಾಪನೆ, ಅವುಗಳಿಗೆ ನಿವೇಶನ, ಮಳಿಗೆ, ಸಾಲ, ಸಹಾಯಧನ ಮುಂತಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುತ್ತದೆ. ಅಲ್ಲದೆ ಉತ್ಪಾದಿತ ವಸ್ತುಗಳನ್ನು ಮಾರಾಟ ಮಾಡಲು ವ್ಯವಸ್ಥೆ ಮಾಡಲು ನೆರವು ನೀಡುತ್ತದೆ. ಈ ದಿಶೆಯಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ರಾಜ್ಯ ಸಣ್ಣ ಕೈಗಾರಿಕೆ ಅಬಿವೃದ್ಧಿ ನಿಗಮ, ಕರ್ನಾಟಕ, ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ ಮುಂತಾದ ಸಂಸ್ಥೆಗಳು ಕೈಗಾರಿಕೆ ಕೇಂದ್ರಕ್ಕೆ ನೆರವಾಗುತ್ತವೆ. 1990-91 ನೇ ಸಾಲಿನಲ್ಲಿ 44 ದೊಡ್ಡ ಪ್ರಮಾಣದ, 930

ಸಣ್ಣ ಪ್ರಮಾಣದ ಕೈಗಾರಿಕೆಗಳು ಇದ್ದು ಜಿಲ್ಲೆಯಲ್ಲಿನ ಒಟ್ಟು ಕೈಗಾರಿಕೆಗಳ ಸಂಖ್ಯೆ. 10,782 ಕ್ಕೆ ಏರಿವೆ. ಇವುಗಳಲ್ಲಿ 38,325 ಲಕ್ಷ ರೂಪಾಯಿಗಳ ಬಂಡವಾಳವನ್ನು ಹೂಡಲಾಗಿದೆ. ಇವುಗಳಲ್ಲಿ 36 ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗಾವಕಾಶ ದೊರಕಿದೆ. ಜಿಲ್ಲಾ ಕೈಗಾರಿಕಾ ಕೇಂದ್ರವು ಸಹಾಯಧನ, ಅಭಿವೃದ್ಧಿ ಸಾಲ ನೀಡುವುದರ ಜೊತೆಗೆ ಸ್ಟ್ಯಾಂಪ್‌ಡ್ಯೂಟಿ ವಿನಾಯತಿ ಪತ್ರ, ನವ್ಯ ಕೈಗಾರಿಕಾ ಪತ್ರ, ಸ್ಥಿರಆಸ್ತಿ ಪ್ರಮಾಣ ಪತ್ರಗಳನ್ನು ನೀಡುತ್ತದೆ. ಈ ಕಕ್ಷೆಯಲ್ಲಿ 287 ಘಟಕಗಳಿಗೆ ಸಹಾಯ ನೀಡಲಾಗಿದೆ. 52 ನಿವೇಶನಗಳನ್ನು ಮತ್ತು 9 ಮಳಿಗೆಗಳನ್ನು 1990-91 ರಲ್ಲಿ ಹಂಚಲಾಗಿದೆ. 194 ರೋಗಗ್ರಸ್ತ ಘಟಕಗಳ ಪೈಕಿ 72 ಘಟಕಗಳನ್ನು ಪುನಃಶ್ಚೇತನಗೊಳಿಸಲು ಸಹಾಯ ಮಾಡಲಾಗಿದೆ. 40 ಭಾವೀ ಉದ್ದಿಮೆದಾರರಿಗೆ ಉದ್ಯಮ ಶೀಲತೆ ತರಬೇತಿ ನೀಡಲಾಗಿದೆ. ಗದಗದಲ್ಲಿ ಸಹಕಾರಿ ರಂಗದಲ್ಲಿ 100 ಸಣ್ಣ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆಗಾಗಿ ವಿಶೇಷ ಆಂದೋಲನ ಕೈಗೊಳ್ಳಲಾಗಿದ್ದು, 40 ಘಟಕಗಳಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಸಾಲ ನೀಡಿದೆ. ಸ್ವಯಂ ಉದ್ಯೋಗ ಯೋಜನೆ ಅಡಿಯಲ್ಲಿ ಜಿಲ್ಲೆಯು ಗುರಿಮೀರಿ ಪ್ರಗತಿ ಸಾಧಿಸುತ್ತಿದೆ. 1990-91 ರಲ್ಲಿ ಕೇಂದ್ರವು 599 ಅಭ್ಯರ್ಥಿಗಳಿಗೆ 122.62 ಲಕ್ಷ ರೂಪಾಯಿಗಳ ಸಾಲ ಮಂಜೂರು ಮಾಡಿದೆ. ಇದರಲ್ಲಿ 243 ಅಭ್ಯರ್ಥಿಗಳಿಗೆ ವ್ಯಾಪಾರಕ್ಕಾಗಿ, 155 ಜನರಿಗೆ ಸೇವಾ ಕಾರ್ಯಕ್ಕಾಗಿ ಮತ್ತು 201 ಅಭ್ಯರ್ಥಿಗಳಿಗೆ ಕೈಗಾರಿಕೆಗಳ ಸ್ಥಾಪನೆಗಾಗಿ ಸಾಲ ನೀಡಲಾಗಿದೆ.

1991-92 ಸಾಲಿನಲ್ಲಿ ಇದ್ದ ಕೈಗಾರಿಕೆಗಳ ಸಂಖ್ಯೆ ಹೀಗಿವೆ : 1) ದೊಡ್ಡ ಹಾಗೂ ಮಧ್ಯಮ ಪ್ರಮಾಣ 44, ಬಂಡವಾಳ 159.80 ಕೋಟಿ ರೂ. ಸುಮಾರು 26,200 ಜನರಿಗೆ ಉದ್ಯೋಗಾವಕಾಶ ದೊರೆತಿದೆ; 2) ಸಣ್ಣ ಪ್ರಮಾಣದ ಕೈಗಾರಿಕೆ ಘಟಕ - 11,682; ಬಂಡವಾಳ 71.52 ಕೋಟಿ ರೂ; ಸುಮಾರು 66,780 ಜನರಿಗೆ ಉದ್ಯೋಗಾವಕಾಶ ದೊರೆತಿದೆ.

ಕೈಗಾರಿಕೆಗಳ ಬೆಳವಣಿಗೆಗೆ ಸಹಾಯ ಹಾಗೂ ಸವಲತ್ತುಗಳನ್ನು ಸರ್ಕಾರ ಹಾಗೂ ಸ್ವಾಯತ್ತ ಸಂಸ್ಥೆಗಳು ಒದಗಿಸುತ್ತಲಿವೆ. ಸ್ಥಿರಾಸ್ತಿ ಬಂಡವಾಳದ ಮೇಲೆ ಸಹಾಯ ಧನ, ಬಡ್ಡಿ ಅನುದಾನ ವಿದ್ಯುಚ್ಛಕ್ತಿ ಅನುದಾನ, ಅತಿ ಸಣ್ಣ ಕೈಗಾರಿಕಾ ಘಟಕಗಳಿಗೆ ಸರ್ಕಾರ ಒದಗಿಸುತ್ತದೆ. ಜಿಲ್ಲೆಯಲ್ಲಿ 1991-92 ನೇ ಸಾಲಿನಲ್ಲಿ 117 ಘಟಕಗಳಿಗೆ 163.98 ಲಕ್ಷ ರೂ. ಸಹಾಯ ಧನ ಒದಗಿಸಲಾಗಿದೆ. 89 ಕೈಗಾರಿಕಾ ಘಟಕಗಳಿಗೆ, ಕಬ್ಬಿಣ, ಉಕ್ಕು, ಸೀಮೆ ಎಣ್ಣೆ, ಮೇಣ, ಕೋಕ್, ಫರ್ನೇಸ್ ಆಯಿಲ್, ಟೈಟಾನಿಯಂ ಡೈ ಆಕ್ಸೈಡ್ ಮೊದಲಾದ ಸಾಮಗ್ರಿಗಳನ್ನು ಒದಗಿಸಲಾಗಿದೆ. ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ನಿಗಮವು ವಿವಿಧ ರೀತಿಯ ಕಾರ್ಯಾಗಾರಗಳನ್ನು ನಿರ್ಮಿಸಿಕೊಡುತ್ತದೆ. 1991-92 ರ ಹೊತ್ತಿಗೆ ಏಳು ಕೈಗಾರಿಕೆ ವಸಾಹತು ಪ್ರದೇಶಗಳಲ್ಲಿ 333 ನಿವೇಶನಗಳನ್ನು ಹಂಚಿಕೆಮಾಡಲಾಗಿತ್ತು. ಮತ್ತು ಈ ಸಾಲಿನಲ್ಲಿ 40 ನಿವೇಶನಗಳನ್ನು ವಿತರಿಸಲಾಗಿದೆ. ಮತ್ತು ವಿವಿಧ ಮಾದರಿಯ 430 ಮಳಿಗೆಗಳನ್ನು ಸಣ್ಣ ಕೈಗಾರಿಕೆಗಳಿಗೆ ವಿತರಿಸಲಾಗಿದೆ.

ಕರ್ನಾಟಕ ಸಣ್ಣ ಕೈಗಾರಿಕಾ ಮಾರುಕಟ್ಟೆ ನಿಗಮದ ಮೂಲಕ 1991-92 ಸಾಲಿನಲ್ಲಿ 20 ಕೈಗಾರಿಕೆ ಘಟಕಗಳು ಸಹಾಯ ಪಡೆದಿವೆ; ಮತ್ತು ರೂ.93.38 ಲಕ್ಷ ರೂ.ಮೌಲ್ಯದ ಉತ್ಪಾದನೆಗಳ ಮಾರಾಟವು ಆಗಿದೆ. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವತಿಯಿಂದ 340 ಗುಡಿ ಕೈಗಾರಿಕೆಗಳ ಸ್ಥಾಪನೆಗೆ 1991-92 ರಲ್ಲಿ 57.48 ಲಕ್ಷ ರೂ.ನೆರವು ಒದಗಿಸಲಾಗಿದೆ.

**'ವಿಶ್ವ' ಯೋಜನೆ** : ಗ್ರಾಮೀಣ ಪ್ರದೇಶದಲ್ಲಿರುವ ಕುಶಲ ಕರ್ಮಿಗಳ ಪ್ರತಿಭೆಯನ್ನು ಹೆಚ್ಚಿಸಲು ಮತ್ತು ಅವರು ತಯಾರಿಸಿದ ವಸ್ತುಗಳನ್ನು ಮಾರಾಟಮಾಡಲು 'ವಿಶ್ವ' ಎಂಬ ಯೋಜನೆಯನ್ನು 1991 ರಲ್ಲಿ ಸರ್ಕಾರ ಪ್ರಾರಂಭಿಸಿತು. 1991-92 ರವರೆಗೆ, 10 ತಾಲೂಕುಗಳಲ್ಲಿ 10 ತರಬೇತಿ ಕೇಂದ್ರಗಳ ಮುಖಾಂತರ 11 ಚಟುವಟಿಕೆಗಳಿಗೆ ತರಬೇತಿ ವ್ಯವಸ್ಥೆ ಮಾಡಲಾಗಿದೆ. 12 ತಾಲೂಕುಗಳಲ್ಲಿ ವಿವಿಧ ವಿಶ್ವ ವಸ್ತುಗಳ ಉತ್ಪಾದನಾ ಕಾರ್ಯವನ್ನು ಕೈಗೊಳ್ಳಲಾಗಿದೆ; ಇವುಗಳಲ್ಲಿ 21 ಘಟಕಗಳಿಗೆ ಹಣಕಾಸು ಸಂಸ್ಥೆಗಳಿಂದ ಹಣ ಒದಗಿಸಲಾಗಿದೆ; 17 ಘಟಕಗಳು ಕಾರ್ಯಾರಂಭ ಮಾಡಿ, 1,89,240 ರೂ.ಮೌಲ್ಯದ ವಸ್ತುಗಳನ್ನು ಮಾರಾಟ ಮಾಡಲಾಗಿದೆ; ಹಾಗೂ ಸುಮಾರು 1,800 ಜನರಿಗೆ ಉದ್ಯೋಗಾವಕಾಶ ದೊರೆತಿದೆ. ಈ ಘಟಕಗಳಿಗೆ ಒಟ್ಟು 15.56 ಲಕ್ಷ ರೂ.ಮೌಲ್ಯದ ಕಚ್ಚಾ ಸಾಮಗ್ರಿ ಪೂರೈಸಿದ್ದು, 34.24 ಲಕ್ಷ ರೂ.ಮೌಲ್ಯದ ವಸ್ತುಗಳ ಉತ್ಪಾದನೆಯಾಗಿದೆ. 28.24 ಲಕ್ಷ ರೂ.ಮೌಲ್ಯದ ವಸ್ತುಗಳು ಮಾರಾಟವಾಗಿದೆ.

## ಔದ್ಯಮಿಕ ಪ್ರಗತಿ

ಜಿಲ್ಲೆಯಲ್ಲಿ 1956ರ ನಂತರವೇ ಔದ್ಯಮಿಕ ಪ್ರಗತಿಯಾಯಿತೆಂದು ಹೇಳಬಹುದು. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಹಣಕಾಸು ನಿಗಮ, ಕರ್ನಾಟಕ ಔದ್ಯೋಗಿಕ ಸಹಕಾರ ಬ್ಯಾಂಕ್, ಕರ್ನಾಟಕ ಔದ್ಯೋಗಿಕ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ಮೊದಲಾದವುಗಳ ಶಾಖೆಗಳು ಜಿಲ್ಲೆಯಲ್ಲಿ ಪ್ರಾರಂಭವಾಗಿ, ಔದ್ಯಮಿಕವಾಗಿ ಜಿಲ್ಲೆ ಪ್ರಗತಿ ಹೊಂದುತ್ತಲಿದೆ. 1962 ರಲ್ಲಿ 37 ನೋಂದಾಯಿಸಿದ ಕಾರ್ಖಾನೆಗಳಿದ್ದು 1966 ರಲ್ಲಿ 77 ಕ್ಕೆ ಏರಿ, 1975 ರಲ್ಲಿ 486, 1979 ರಲ್ಲಿ 588, 1986 ರಲ್ಲಿ 530 (ರಾಜ್ಯದಲ್ಲಿ 2 ನೇಯದಾಗಿದ್ದಿತು), 1992-93 ರಲ್ಲಿ 664 ಇದ್ದಿತು. (ಸಣ್ಣ ಕೈಗಾರಿಕಾ ಘಟಕಗಳು 11,682) ದುಡಿಯುವ ಬಂಡವಾಳ 1962 ರಲ್ಲಿ 22.03 ಕೋಟಿ ರೂ.ಗಳಿದ್ದು, 1966 ರ ಹೊತ್ತಿಗೆ 61.3 ಕೋಟಿ ರೂ.ಗಳಾಗಿ, 1980-81 ರಲ್ಲಿ 86 ಕೋಟಿ ರೂ, 1986-87 ರಲ್ಲಿ 132.1 ಕೋಟಿ ರೂ.ಗಳಾಗಿತ್ತು.

ಕರ್ನಾಟಕ ರಾಜ್ಯವು ಔದ್ಯೋಗಿಕ ಕಾರ್ಯಕ್ರಮಗಳಲ್ಲಿ ಧಾರವಾಡ ಜಿಲ್ಲೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟಿರುವುದರಿಂದ, ಜಿಲ್ಲೆಯು ಪ್ರಗತಿ ಹೊಂದಿದೆ.

ಧಾರವಾಡ ಜಿಲ್ಲೆಯು ಸ್ವಾತಂತ್ರ್ಯ ಪೂರ್ವದಲ್ಲಿ ಆರ್ಥಿಕವಾಗಿ ಹಿಂದುಳಿದ ಜಿಲ್ಲೆಯಾಗಿದ್ದಿತು. ಮುಂಬೈ ರಾಜ್ಯದಲ್ಲಿ ಪರಭಾಷಿಕರ ಪ್ರಭಾವದಿಂದಲೂ ಕನ್ನಡ ಪ್ರದೇಶಗಳ ಅಭಿವೃದ್ಧಿ ಅಷ್ಟೊಂದು ಆಗಿರಲಿಲ್ಲ, ಕರ್ನಾಟಕ ಸರ್ಕಾರಕ್ಕೆ ಸೇರ್ಪಡೆಯಾದ ನಂತರ ಬೆಳವಣಿಗೆಯನ್ನು ವಿಶ್ಲೇಷಿಸಿದಾಗ ಈ ಕೆಳಕಂಡ ಅಂಶಗಳು ತೋರಿಬರುತ್ತವೆ.

ಉತ್ಪಾದನಾ ಘಟಕದಲ್ಲಿ (ನೋಂದಣಿಯಾದ) 1980-81 ರಲ್ಲಿ - 2,606 ಲಕ್ಷ ರೂ.ಗಳ ಆದಾಯವಿದ್ದು, 1991-92 ರಲ್ಲಿ 14,693 ಲಕ್ಷ ರೂ.ಗಳಿಗೆ ಅಂದರೆ ಶೇ.464 ರಷ್ಟು ಹೆಚ್ಚಿದೆ. ಇದರಿಂದ ಉತ್ಪಾದನಾ ಘಟಕಗಳಿಗೆ ಸರ್ಕಾರದ ಉತ್ತೇಜನ ಹಾಗೂ ಕಾರ್ಯ ತತ್ಪರತೆ ಕಾರಣವಾಗಿದೆ. ಹಾಗೆಯೇ ನೋಂದಣಿಯಾಗದ ಘಟಕಗಳಲ್ಲಿ, ಉತ್ಪಾದಿತ ವಸ್ತುಗಳ ಮೌಲ್ಯವು 1980-81 ರಲ್ಲಿ 2,161 ಲಕ್ಷ ರೂ.ಗಳಿಂದ 1991-92 ರಲ್ಲಿ 11,833 ಲಕ್ಷಕ್ಕೆ (ಶೇ.448 ರಷ್ಟು) ಹೆಚ್ಚಿದೆ. ಆದರೆ ವಿದ್ಯುಚ್ಛಕ್ತಿಯ ಉತ್ಪಾದನೆ ಗಣನೀಯವಾಗಿ ಹೆಚ್ಚಾಗಿದ್ದರೂ ಆದರಿಂದ ಬಂದ ಆದಾಯವೂ 1980-81 ರಲ್ಲಿ 597 ಲಕ್ಷ ರೂ. ಗಳಿದ್ದು, ಶೇ.702 ರಷ್ಟು ಅಂದರೆ 4,791 ಲಕ್ಷ ರೂ.ಗಳಿಗೆ (1991-92) ಹೆಚ್ಚಾಗಿದೆ.

ವ್ಯಾಪಾರ ಮತ್ತು ಉದ್ಯಮದ ಘಟಕಗಳಲ್ಲಿ 1980 ರಲ್ಲಿ 3,949 ಲಕ್ಷ ರೂ. ಆದಾಯವಿದ್ದು, 1991-92 ರಲ್ಲಿ 23,049 ಲಕ್ಷ ರೂ.ಗಳಿಗೆ ಹೆಚ್ಚಾಗಿದೆ. (ಶೇ.480 ಹೆಚ್ಚಳ) ಇದರಿಂದ, ಧಾರವಾಡ ಜಿಲ್ಲೆಯಲ್ಲಿ ವ್ಯಾಪಾರದ ಘಟಕದಲ್ಲಿ, ನಗರೀಕರಣ ಹೆಚ್ಚಾಗಿರುವ ಕಾರಣ ವಹಿವಾಟೂ ಹೆಚ್ಚಾಗಿದೆ.

ಪಂಚವಾರ್ಷಿಕ ಯೋಜನೆಗಳಿಂದಲೂ, ಸರ್ಕಾರದ ಅನೇಕ ಕಾರ್ಯಕ್ರಮಗಳಿಂದಲೂ, ಈ ಜಿಲ್ಲೆಯು ಹಿಂದೆ ಇತ್ತೀಚಿನ ದಶಕಗಳಲ್ಲಿ ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಲಿದೆ.

ಉದ್ದಿಮೆಗಳಲ್ಲಿ ಸಂಘಟಿತವಲ್ಲದ ಘಟಕಗಳು ರಾಜ್ಯದ ಬಂಡವಾಳ ಹೂಡಿಕೆಯಲ್ಲಿ ಗಣನೀಯವಾದ ಪ್ರಭಾವವನ್ನು ಹೊಂದಿದ್ದು ರಾಜ್ಯದ ಹಾಗೂ ದೇಶದ ವರಮಾನದಲ್ಲೂ ಹೆಚ್ಚಿನ ಪರಿಣಾಮವನ್ನು ಬೀರುತ್ತದೆ. ಪ್ರಗತಿಪರ ಕಾರ್ಯಕ್ರಮಗಳನ್ನು ಅಳವಡಿಸುವಾಗ ಗ್ರಾಮೀಣ ಕ್ಷೇತ್ರದಲ್ಲಿನ, ಆರ್ಥಿಕ ಕ್ಷೇತ್ರದ ವಿವಿಧ ಘಟಕಗಳ ಬಗ್ಗೆ ಮಾಹಿತಿ ತಿಳಿದಿರುವುದು ಅವಶ್ಯಕ. ಸಂಘಟಿತ ಘಟಕಗಳಾದ ಕಾರ್ಖಾನೆಗಳು, ರೈಲ್ವೇ, ಸಾರಿಗೆ ಇಲಾಖೆ, ಬ್ಯಾಂಕುಗಳು ಮೊದಲಾದವುಗಳಲ್ಲಿ ಮಾಹಿತಿಗಳನ್ನು ಪಡೆಯುವುದು ಸಾಧ್ಯ. ಆದರೆ ಅಸಂಘಟಿತ ಘಟಕಗಳಲ್ಲಿ ಈ ಮಾಹಿತಿ ದೊರಕುವುದು ದುರ್ಲಭ. ಈ ದಿಸೆಯಲ್ಲಿ 1990 ರಲ್ಲಿ ಆರ್ಥಿಕ ಜನಗಣತಿಯನ್ನು ಕೈಗೆತ್ತಿಕೊಳ್ಳಲಾಯಿತು. ಈ ಜನಗಣತಿಯ ಆಧಾರದ ಮೇಲೆ ಉದ್ದಿಮೆಗಳನ್ನು ಈ ರೀತಿ ವಿಂಗಡಿಸಲಾಯಿತು. (1) ಉದ್ದಿಮೆ ಅಥವಾ ಎಂಟರ್ ಪ್ರೈಸ್-ಸ್ವಂತಕ್ಕಲ್ಲದ ಬೇರೆಯವರ ಬಳಕೆಗೆ ಉತ್ಪಾದನೆ ಮಾಡುವ, ಆದರೆ ಯಾವುದೇ ಸಹಾಯಕರು ಇಲ್ಲದೇ ಕೆಲಸಗಾರರನ್ನು ಹೊಂದಿರದ ಘಟಕ. (2) ಕೌಟುಂಬಿಕ ಉದ್ಯಮ ಅಥವಾ 'ಓನ್ ಅಕೌಂಟ್ ಎಂಟರ್ ಪ್ರೈಸ್'-ಮನೆಯಲ್ಲಿನ ಕುಟುಂಬದ ಸದಸ್ಯರ

ನೆರವಿನಿಂದ ಬೇರೆಯವರ ಬಳಕೆಗೆ ಉತ್ಪನ್ನ ಮಾಡುವ ಘಟಕ, (3) ಯಾವುದೇ ಉದ್ದಿಮೆಯಲ್ಲಿ ಕನಿಷ್ಟ ಒಬ್ಬ ಕೆಲಸಗಾರರನ್ನು ಸಹಜವಾಗಿ ಹಾಗೂ ನಿಯಮಿತವಾಗಿ ನೇಮಿಸಿದ್ದಲ್ಲಿ ಅದನ್ನು 'ಸ್ಥಾವರ' ಅಥವಾ 'ಎಸ್ಟಾಬ್ಲಿಶ್‌ಮೆಂಟ್' ಎಂದು ವಿಂಗಡಿಸಿದ್ದಾರೆ.

1990ರ ಆರ್ಥಿಕ ಗಣತಿಯ ಪ್ರಕಾರ ರಾಜ್ಯದಲ್ಲಿ 16.95 ಲಕ್ಷ ಉದ್ದಿಮೆಗಳು (ಎಂಟರ್ ಪ್ರೈಸಸ್) ಇದ್ದು ಅವುಗಳಲ್ಲಿ 59.18 ಲಕ್ಷ ಕೆಲಸಗಾರರು ಇದ್ದರು. ಇದು ದೇಶದ ಒಟ್ಟು ಉದ್ದಿಮೆಗಳ (238 ಲಕ್ಷ) ಪೈಕಿ ಶೇ.7.1 ಆಗಿದ್ದು ಒಟ್ಟು ಕೆಲಸಗಾರರಲ್ಲಿ ರಾಜ್ಯದ ಪಾಲು ಶೇ.8.9 ಇದ್ದಿತು. ಇವುಗಳಲ್ಲಿ ಬೆಂಗಳೂರು ಜಿಲ್ಲೆಯ ಪಾಲು ಶೇ.12.3 (ಅತಿ ಹೆಚ್ಚು ಇದ್ದು), ಧಾರವಾಡದ ಪಾಲು ಶೇ.7.4, ಅಂದರೆ 4ನೇ ಸ್ಥಾನದಲ್ಲಿದ್ದಿತು. ಒಂದು ಲಕ್ಷಕ್ಕಿಂತಲೂ ಹೆಚ್ಚು ಉದ್ದಿಮೆ ಇದ್ದ ಜಿಲ್ಲೆಗಳೆಂದರೆ, ಬೆಂಗಳೂರು (2.08 ಲಕ್ಷ), ಮೈಸೂರು (1.33 ಲಕ್ಷ), ಬೆಳಗಾವಿ (1.30 ಲಕ್ಷ) ಮತ್ತು ಧಾರವಾಡ (1.25 ಲಕ್ಷ). ಧಾರವಾಡ ಜಿಲ್ಲೆ ಗ್ರಾಮಾಂತರ ಪ್ರದೇಶದಲ್ಲಿ 68,901 ಉದ್ದಿಮೆಗಳು ಒಟ್ಟು ಉದ್ದಿಮೆಗಳ (ಶೇ.66.67) ಮತ್ತು ಪಟ್ಟಣ ಪ್ರದೇಶದಲ್ಲಿ 56,083 (ಶೇ. 8.48) ಮತ್ತು ಒಟ್ಟು 1.25 ಲಕ್ಷ (ಶೇ.7.38) ಇದ್ದವು.

ಒಟ್ಟು ಉದ್ದಿಮೆ (ಎಂಟರ್ ಪ್ರೈಸ್)ಗಳಲ್ಲಿ ಗ್ರಾಮೀಣ ಮತ್ತು ಪಟ್ಟಣದ ವಿವರ ಹೀಗಿದೆ. ಗ್ರಾಮೀಣ 68,901 (ಶೇ. 6.67), ಪಟ್ಟಣ 56,083 - ಶೇ.8.48.

**ಒಟ್ಟು 1,24,984 (ಶೇ. 7.38) ಆವರಣದಲ್ಲಿ ಕೊಟ್ಟಿರುವುದು ರಾಜ್ಯದ ಒಟ್ಟು ಉದ್ದಿಮೆಗಳ ಶೇಕಡಾ.**

| ಸ್ವಂತ ಕೆಲಸಗಾರರು ಮತ್ತು ಕೂಲಿ ಕೆಲಸಗಾರರು | (ರಾಜ್ಯದ ಒಟ್ಟು ಕೆಲಸಗಾರರ ಶೇಕಡಾ) |
|---|---|
| ಒಟ್ಟು ಕೆಲಸಗಾರರು | 3,34,399 (ಶೇ. 5.65) |
| ಕೂಲಿ ಕೆಲಸಗಾರರು | 1,84,480 (ಶೇ. 5.97) |
| ಒಟ್ಟು ಜಿಲ್ಲೆಯ ಕೆಲಸಗಾರರಲ್ಲಿ ಕೂಲಿ ಕೆಲಸಗಾರರ ಶೇ. | 55.17 |
| ಸಾವಿರ ಜನ ಸಂಖ್ಯೆಗೆ ಒಟ್ಟು ಉದ್ದಿಮೆಗಳು | 35 (ರಾಜ್ಯ - 38) |
| ಸ್ವಂತ ಉದ್ದಿಮೆದಾರರು | 25 (ರಾಜ್ಯ - 28) |
| ಇತರ ಉದ್ದಿಮೆ (ಸ್ಥಾವರಗಳು) | 10 (ರಾಜ್ಯ - 13) |
| ಕೆಲಸ ಮಾಡುವವರ ಸಂಖ್ಯೆ : ಸಾವಿರ ಜನ ಸಂಖ್ಯೆಗೆ | 96 (ರಾಜ್ಯ 132) |
| ಜಿಲ್ಲೆಯ ಸ್ಥಾನ | 10 |
| ಕೃಷಿಯೇತರ ಉದ್ದಿಮೆಗಳನ್ನು ಮುಖ್ಯ ಚಟುವಟಿಕೆಯಾಗಿ ಹೊಂದಿರುವ ಕೆಲಸಗಾರರ ಸಂಖ್ಯೆ | 1,21,475 |
| ಇವುಗಳಲ್ಲಿ ಬೇರೆ ಬೇರೆ ಉದ್ದಿಮೆಗಳಲ್ಲಿನ ಕೆಲಸಗಾರರ ವಿವರ. | |
| ಗಣಿ ಕೆಲಸಗಾರರು | 370 (0.11) |
| ಉತ್ಪಾದನೆ : ದುರಸ್ತಿ | 24,450 (6.99) |
| ವಿದ್ಯುಚ್ಛಕ್ತಿ ಇಂಧನ ಹಾಗೂ ನೀರು ಸರಬರಾಜು | 253 (0.07) |
| ನಿರ್ಮಾಣ (ಕಟ್ಟಡ) | 1,478 (0.42) |
| ಸಗಟು ಮತ್ತು ಚಿಲ್ಲರೆ ವ್ಯಾಪಾರ | 43,710 (12.50) |
| ಹೋಟೆಲ್ ಮತ್ತು ರೆಸ್ಟೋರೆಂಟ್ | 8,084 (2.31) |

| ಸ್ವಂತ ಕೆಲಸಗಾರರು ಮತ್ತು ಕೂಲಿ ಕೆಲಸಗಾರರು | (ರಾಜ್ಯದ ಒಟ್ಟು ಕೆಲಸಗಾರರ ಶೇಕಡಾ) |
|---|---|
| ಸಾರಿಗೆ | 1,903 (0.54) |
| ದಾಸ್ತಾನು | 893 (0.26) |
| ಸಂಪರ್ಕ | 675 (0.19) |
| ಆರ್ಥಿಕ ಚಟುವಟಿಕೆ (ಲೇವಾದೇವಿ) | 2,302 (0.66) |
| ಸಮಾಜ ಸೇವೆ | 37,340 (10.67) |
| ಇತರೆ | 17 (0.00) |

**ಕೃಷಿ ಉದ್ಯಮಗಳು :** ಕೃಷಿ ಉದ್ಯಮಗಳೆಂದರೆ ಜಾನುವಾರು ಸಾಕಣೆ, ಕೃಷಿ ಸೇವೆಗಳು, ಬೇಟೆ, ಅರಣ್ಯ ಉತ್ಪತ್ತಿಗಳ ಉದ್ದಿಮೆ, ಮೀನುಗಾರಿಕೆ. ಆದರೆ ಬೆಳೆ ಬೆಳೆಯುವಿಕೆ ಹಾಗೂ ತೋಟಗಾರಿಕೆ ಇದರಲ್ಲಿ ಸೇರುವುದಿಲ್ಲ. 1990ರಲ್ಲಿ ಕೃಷಿ ಉದ್ದಿಮೆ (ಸ್ಥಾವರ)ಗಳಲ್ಲಿ ಕರ್ನಾಟಕದ ಪಾಲು ಶೇ.8.1 ಆಗಿದ್ದಿತು. ಇವುಗಳ ವಿವರ ಈ ರೀತಿ ಇದೆ.

**ಸ್ವಂತ ಉದ್ದಿಮೆ :** ಕೌಟುಂಬಿಕ 2705 (ಶೇ. 2.18); ಸ್ಥಾವರ 804 (ಶೇ. 0.95); ಒಟ್ಟು 3509 (ಶೇ.1.68).

**ಕೆಲಸಗಾರರ ಸಂಖ್ಯೆ :** ಒ.ಐ.ಇ. 4127 (ಶೇ.1.46); ಸ್ಥಾವರ 2,876 (ಶೇ.0.41); ಒಟ್ಟು 7,093 (ಶೇ.0.71).

(ಆಧಾರ : ರಿಪೋರ್ಟ್ ಆನ್ ಥರ್ಡ್ ಎಕನಾಮಿಕ್ ಸೆನ್ಸಸ್ 1990).

**ಖಾದಿ ಮತ್ತು ಗ್ರಾಮೀಣ ಉದ್ಯಮ :**

| | | ಘಟಕ | 1987-88 | 88-89 | 89-90 | 90-91 |
|---|---|---|---|---|---|---|
| 1) | ಖಾದಿ ಮತ್ತು ಗ್ರಾಮೋದ್ಯೋಗ ನಿಗಮದ ಉದ್ಯಮಗಳು | ಸಂಖ್ಯೆ | 31 | 153 | 507 | 366 |
| 2) | ಲಿಡಕರ್ ಸಹಾಯ ಪಡೆದ ಘಟಕಗಳು | ಸಂಖ್ಯೆ | 18 | 34 | 79 | 29 |
| 3) | ಕೈಮಗ್ಗಗಳು | | | | | |
| | ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ | ಸಂಖ್ಯೆ | 265 | 426 | 185 | 270 |
| | ಆ) ಸಹಕಾರ | ” | 181 | - | - | - |
| 4) | ವಿದ್ಯುತಚಾಲಿತ ಮಗ್ಗ | ” | 56 | 14 | 25 | 129 |

ಜಿಲ್ಲೆ ಅಭಿವೃದ್ಧಿ ಕಾರ್ಯದಲ್ಲಿ ಕೈಗಾರಿಕೆಗಳು ಮಹತ್ವದ ಪಾತ್ರವಹಿಸಿವೆ. ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗವನ್ನು ಹೋಗಲಾಡಿಸಲು ಹಾಗು ಪಟ್ಟಣಗಳಿಗೆ ವಲಸೆ ಹೋಗುವುದನ್ನು ತಡೆಗಟ್ಟಲು ಸಣ್ಣ ಕೈಗಾರಿಕೆಗಳು, ಖಾದಿ ಮತ್ತು ಗ್ರಾಮೀಣ ಉದ್ಯಮ ಸಕ್ರೀಯ ಪಾತ್ರ ವಹಿಸುತ್ತವೆ. ಕರಕುಶಲ ಕಲೆಗಳಿಗೆ ಎಲ್ಲಾ ರೀತಿಯ ಪ್ರೋತ್ಸಾಹ ಕೊಟ್ಟು, ಅವು ಕ್ಷೀಣವಾಗದಂತೆ ನೋಡಿಕೊಳ್ಳಲು, ಕುಶಲ ಕರ್ಮಿಗಳಿಗೆ ಕಚ್ಚಾ ಸಾಮಗ್ರಿಗಳನ್ನು ಕೊಡುವುದಲ್ಲದೆ ಸೂಕ್ತ ತರಬೇತಿಯನ್ನು ಕೊಡಲಾಗುತ್ತಿದೆ. ಕುರಿ ಮತ್ತು ಉಣ್ಣೆ ಸಂಪನ್ಮೂಲಗಳನ್ನು ವ್ಯಾಪಕವಾಗಿ ಬಳಸಿಕೊಳ್ಳಲು ಯೋಜನೆಗಳನ್ನು ಜಿಲ್ಲಾ ಪರಿಷತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕೈಮಗ್ಗ ಅಭಿವೃದ್ಧಿ ನಿಗಮ, ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮಗಳು ಈ ದಿಸೆಯಲ್ಲಿ ಹೆಚ್ಚಿನ ಕಾರ್ಯ ಮಾಡಿವೆ.

**ಜೈವಿಕ ಅನಿಲ ಘಟಕಗಳ ವಿವರ :** ಧಾರವಾಡ ಜಿಲ್ಲೆಯಲ್ಲಿ ಇಂಧನ ಮತ್ತು ದೀಪದ ವ್ಯವಸ್ಥೆಗಾಗಿ, ಸೌದೆ (ಕಟ್ಟಿಗೆ) ಸೀಮೆ ಎಣ್ಣೆ, ವಿದ್ಯುಚ್ಛಕ್ತಿಗಳ ಕೊರತೆಯನ್ನು ನೀಗಿಸಲು, ಲಭ್ಯವಿರುವ ನಿರುಪಯುಕ್ತ ವಸ್ತುಗಳನ್ನು ಇಂಧನ ಮತ್ತು ಬೆಳಕು ಉತ್ಪಾದನೆಗೆ ಬಳಸಿಕೊಳ್ಳುವಲ್ಲಿ, ಹೆಚ್ಚಿನ ಪ್ರಯತ್ನ ನಡೆದಿದೆ. 1951 ರಿಂದ ಇತ್ತೀಚೆಗೆ ಡ್ರಮ್ ಮಾದರಿಯ ಗೋಬರ ಅನಿಲಯಂತ್ರಗಳನ್ನು

ನಿರ್ಮಿಸಲು ಪ್ರಾರಂಭಮಾಡಿ ಉರುವಲು ಸಮಸ್ಯೆ ಬಗೆಹರಿಸಲು ಪ್ರಯತ್ನ ಮಾಡಲಾಗಿದೆ. ಧಾರವಾಡ ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದಮೇಲೆ, 31.3.71 ರವರೆಗೆ ಒಟ್ಟು 1900 ಜೈವಿಕ ಅನಿಲ ಘಟಕಗಳನ್ನು 86.51 ಲಕ್ಷ ರೂ. ಖರ್ಚಿನಲ್ಲಿ ಸ್ಥಾಪಿಸಲಾಗಿದೆ. 1987-88 ರಿಂದ 1990-91 ರವರೆಗೆ ಜೈವಿಕ ಅನಿಲ ಘಟಕಗಳ ವಿವರವನ್ನು ಇಲ್ಲಿ ಕೊಡಲಾಗಿದೆ.

ಸ್ಥಾಪಿಸಿದ ಜೈವಿಕ ಅನಿಲ ಘಟಕಗಳು ಮತ್ತು ಸಹಾಯ ಧನ ಬಿಡುಗಡೆ ಕ್ರಮವಾಗಿ 1987-88 - 831 (ವೆಚ್ಚ 47.10 ಲಕ್ಷ ರೂ); 1988-89 - 448 (18.05 ಲಕ್ಷ ರೂ.); 1989-90 - 414 (14.39 ಲಕ್ಷ ರೂ); ಮತ್ತು 1990-91 - 207, (6.97 ಲಕ್ಷ ರೂ.)

1971 ರಿಂದ 1992-93 ರವರೆಗೆ ಪ್ರತೀ ನೋಂದಾಯಿತ ಕಾರ್ಖಾನೆಗೆ ಇದ್ದ ಜನ ಸಂಖ್ಯೆ ಈ ರೀತಿ ಇದೆ. 1971 - 6,279 (7,682); 1976 - 5,113 (4,411); 1981 - 5009 (3,735); 1986 - 9,420 (3,532); 1991 - 5,399 (5,836); 1991-92 - 5560 (6,499); 1992-93 - 5706 (6637). (ಆವರಣದಲ್ಲಿ ಕೊಟ್ಟಿರುವ ಸಂಖ್ಯೆ ರಾಜ್ಯಕ್ಕೆ ಸಂಬಂದಪಟ್ಟಿದ್ದು).

ಪ್ರತೀ ನೋಂದಾಯಿತ ಕಾರ್ಖಾನೆಗೆ ಇದ್ದ ಕಾರ್ಮಿಕರ ಸಂಖ್ಯೆ : 1971 - 47 (72); 1976 - 65(65); 1981 - 62(55); 1986 - 178 (68); 1991 - 93 (100); 1991-92 - 95 (107); 1992-93 - 96 (107). (ಆವರಣದಲ್ಲಿ ರಾಜ್ಯಕ್ಕೆ ಸಂಬಂಧಪಟ್ಟ ಸಂಖ್ಯೆಯನ್ನು ಕೊಟ್ಟಿದೆ).

1981-86 ರ ಅವಧಿಯಲ್ಲಿ ಪ್ರತೀ ನೋಂದಾಯಿತ ಕಾರ್ಖಾನೆಗೆ ಇದ್ದ ಕಾರ್ಮಿಕರ ಸಂಖ್ಯೆ ಗಣನೀಯ ಹೆಚ್ಚಾಗಿರುವುದು ಕಂಡುಬರುತ್ತದೆ. ಪುನಃ ನಂತರದ ವರ್ಷಗಳಲ್ಲಿ ಈ ಸಂಖ್ಯೆ ಇಳಿಮುಖವಾಗಿದೆ.

**ಕೋಷ್ಟಕ 8.17 : ವ್ಯವಸ್ಥಿತ ಘಟಕಗಳಲ್ಲಿ ಇದ್ದ ಉದ್ಯೋಗಗಳ ಶೇಕಡಾ (1991 ರಿಂದ 1993 ರವರೆಗೆ) ಜಿಲ್ಲೆಯಲ್ಲಿ ಇದ್ದ ವಿವರ.**

| ಕ್ರಮ ಸಂಖ್ಯೆ | ಉದ್ದಿಮೆ | ಒಟ್ಟು ಉದ್ಯೋಗಗಳಲ್ಲಿನ ಶೇಕಡಾ ಮಾರ್ಚ್ 91 | ಮಾರ್ಚ್ 92 | ಮಾರ್ಚ್ 93 |
|---|---|---|---|---|
| 1 | 2 | 3 | 4 | 5 |
| 1 | ಪ್ರೈಮರಿ ಘಟಕ | 5.8 | 5.7 | 5.6 |
| | ಅ) ಅರಣ್ಯ ಮತ್ತು ಸಸ್ಯ | 3.8 | 3.8 | 3.7 |
| | ಆ) ಗಣಿ ಕೆಲಸಗಾರಿಕೆ | 2.0 | 1.9 | 1.9 |
| 2 | ಸೆಕೆಂಡರಿ ಘಟಕ | 30.3 | 30.9 | 31.5 |
| | ಅ) ಉತ್ಪಾದನೆ | 27.0 | 27.6 | 28.2 |
| | ಆ) ವಿದ್ಯುಚ್ಛಕ್ತಿ, ಅನಿಲ, ನೀರು | 3.3 | 3.3 | 3.3 |
| 3 | ನಿರ್ಮಾಣ | 4.1 | 4.3 | 4.2 |
| 4 | ಟರ್ಶಿಯರಿ ಘಟಕ | 59.8 | 59.1 | 58.7 |
| | ಅ) ಸಗಟು ವ್ಯಾಪಾರ, ಚಿಲ್ಲರೆ ವ್ಯಾಪಾರ ಹೋಟೆಲ್ | 2.2. | 2.2 | 2.1 |
| | ಆ) ಸಾರಿಗೆ, ಶೇಕರಣೆ ಮತ್ತು ಸಂಪರ್ಕ | 10.3 | 10.0 | 10.0 |

| 1 | 2 | 3 | 4 | 5 |
|---|---|---|---|---|
| ಇ) | ಆರ್ಥಿಕ ಸಂಸ್ಥೆ, ವಿಮೆ ಹಾಗೂ ಇತರಸೇವೆ | 7.5 | 7.3 | 7.4 |
| ಈ) | ಸಾಮಾಜಿಕ ಮತ್ತು ವೈಯಕ್ತಿಕ ಇತರೆ ಸೇವೆಗಳು | 39.8 | - | 39.2 |

ಸಂಘಟಿತ ಘಟಕಗಳಲ್ಲಿ ಇದ್ದ ಮಹಿಳಾ ಕಾರ್ಮಿಕರ ಶೇಕಡಾ ಈ ರೀತಿ ಇದ್ದಿತು.

| | ಮಾರ್ಚ್ 92 | ಮಾರ್ಚ್ 93 |
|---|---|---|
| ಸಾರ್ವಜನಿಕ ಸಂಸ್ಥೆ | ಶೇ.6.2 | ಶೇ.6.5 |
| ಖಾಸಗಿ | 6.8 | 5.7 |
| ಒಟ್ಟು | 6.4 | 6.2 |

(ಆಧಾರ : ಡಿಸ್ಟ್ರಿಕ್ಟ್ ಸೋಶಿಯೋ ಎಕನಾಮಿಕ ಇಂಡಿಕೇಟರ್ಸ್ ೧೯೯೩) ಅ ಮತ್ತು ಸಾಂ ಇಲಾಖೆ.

(ಕೋಷ್ಟಕ 8.18 ಮುಂದಿನ ಪುಟದಲ್ಲಿ)

## ಅರಣ್ಯ ಅಭಿವೃದ್ಧಿ

ಧಾರವಾಡ ಜಿಲ್ಲೆಯಲ್ಲಿ ಅರಣ್ಯದ ವಿಸ್ತೀರ್ಣವು ಒಟ್ಟು ಭೌಗೋಳಿಕ ಕ್ಷೇತ್ರ ಶೇಕಡಾ 1970-71 ರಿಂದ ಈ ರೀತಿ ಇದ್ದಿತು : 1970-71 - 8.21 ಶೇ.; 1975-76 - 8.08 ಶೇ.; 1980-81 - 8.20 ಶೇ.; 1985-86 - 8.36 ಶೇ.; 1990-91 - 8.36 ಶೇ.; ಹಾಗೂ 1991-92 - 8.37 ಶೇ. ಒಟ್ಟು 22 ವರ್ಷಗಳಲ್ಲಿ, ಅರಣ್ಯ ಪ್ರದೇಶದ ವಿಸ್ತೀರ್ಣದಲ್ಲಿ ಹೆಚ್ಚಿನ ಬದಲಾವಣೆ ಆಗಿಲ್ಲ. ಇದರಿಂದ ಜಿಲ್ಲೆಯಲ್ಲಿ ಅರಣ್ಯ ಪ್ರದೇಶವನ್ನು ಬೇರೆ ಉದ್ದೇಶಗಳಿಗೂ ಬಳಸಿದರೂ ಸಾಮಾಜಿಕ- ಅರಣ್ಯ ಮೊದಲಾದ ಕಾರ್ಯಕ್ರಮಗಳ ಮೂಲಕ ಅರಣ್ಯ ಪ್ರದೇಶದಲ್ಲಿ ವಿಸ್ತೀರ್ಣ ಕಡಿಮೆ ಆಗದಂತೆ ನೋಡಿಕೊಳ್ಳಲಾಗಿದೆ. ಆದರೆ ಇದು ನೈಸರ್ಗಿಕ ಅರಣ್ಯದ ರಕ್ಷಣೆಯ ಅವಶ್ಯಕತೆಗೆ ಪರ್ಯಾಯವಾಗಲಾರದು, ಎಂದು ತಜ್ಞರ ಅಭಿಪ್ರಾಯ.

ಜಿಲ್ಲೆಯಲ್ಲಿ 1970-71 ರಿಂದ ಕೃಷಿಯೇತರ ಉಪಯೋಗಕ್ಕಾಗಿ, ಭೂಮಿಯನ್ನು ಉಪಯೋಗಿಸಿರುವ ವಿಸ್ತೀರ್ಣ, ಒಟ್ಟು ಭೌಗೋಳಿಕ ವಿಸ್ತೀರ್ಣದ ಶೇಕಡಾ - 1970-71 - 1.62 ಶೇ.; 1975-76 - 2.05 ಶೇ.; 1980-81 - 2.10 ಶೇ.; 1985-86 - 4.02 ಶೇ.; 1990-91 - 4.41 ಶೇ.; ಹಾಗೂ 1991-92 - 4.54 ಶೇ. 1980-81 ರಿಂದ 1985-86 ರ ಅವಧಿಯಲ್ಲಿ ಕೃಷಿಯೇತರ ಉದ್ದೇಶಗಳಿಗಾಗಿ ಉಪಯೋಗಿಸಿರುವ ಭೂಮಿಯ ಕ್ಷೇತ್ರಫಲ 2 ಪಟ್ಟು ಹೆಚ್ಚಿದೆ. ಇದರಿಂದ, ಭೂಮಿಯ ಉಪಯೋಗವನ್ನು ಇತರೆ ಅಂದರೆ ಕೈಗಾರಿಕೆ, ಗೃಹನಿರ್ಮಾಣ, ಪಶುಸಂಗೋಪನೆ ಮೊದಲಾದ ಕಾರ್ಯಕ್ರಮಗಳಿಗೆ ಉಪಯೋಗಿಸಿ ಕೊಳ್ಳಲಾಗಿದೆ ಎಂದು ತಿಳಿಯಬಹುದು. ಇದೇ ಸಂಖ್ಯೆಯು ರಾಜ್ಯದಲ್ಲಿ 1970-71 ರಲ್ಲಿ ಶೇ.4.95 ಇದ್ದದ್ದು 1991-92 ರಲ್ಲಿ 2.26 ರಷ್ಟಾಗಿದೆ. ಇದೇ ರೀತಿಯ ಎರಡರಷ್ಟು ಹೆಚ್ಚಾಗಿರುವ ಜಿಲ್ಲೆ ಎಂದರೆ, ಬೆಂಗಳೂರು.

ಬಂಜರು ಮತ್ತು ಕೃಷಿಗೆ ಯೋಗ್ಯವಲ್ಲದ ಭೂಮಿಯು ಜಿಲ್ಲೆಯಲ್ಲಿ 1970-71 ರಲ್ಲಿ ಒಟ್ಟು ಕ್ಷೇತ್ರದ ಶೇ.1.96 ರಷ್ಟಿದ್ದು, 1975-76 ರಲ್ಲಿ ಶೇ.2.17 ಶೇ; 1980-81 ರಲ್ಲಿ ಶೇ.2.26 ಶೇ.; 1985-86 ರಲ್ಲಿ ಶೇ.1.71; 1990-91 ರಲ್ಲಿ - ಶೇ.1.62 ಮತ್ತು 1991-92 ರಲ್ಲಿ ಶೇ.1.56 ಇದ್ದಿತು. ಈ ಗುಂಪಿಗೆ ಸೇರಿದ ಜಮೀನಿನ ವಿಸ್ತೀರ್ಣ 20 ವರ್ಷಗಳಲ್ಲಿ ಕಡಿಮೆಯಾಗಿರುವುದು ಕಂಡು ಬರುತ್ತದೆ.

## ಕೋಷ್ಟಕ 8.18 : ಧಾರವಾಡ ಜಿಲ್ಲೆಯಲ್ಲಿ ಕೈಗಾರಿಕೆ ಪ್ರಗತಿಯ ಸೂಚ್ಯಂಕ (1990)

| | ತಾಲೂಕು | ಕೈಗಾರಿಕೆ ಘಟಕಗಳ ಸಂಖ್ಯೆ | | ಒಟ್ಟುಜನ | ಕೆಲಸಗಾರರ | ಬಂಡವಾಳ | | | ಉತ್ಪಾದನ (ರೂ.) | | | ವಿದ್ಯುತ್ ಬಳಕೆ | | ವೇತನ (ರೂ) |
|---|---|---|---|---|---|---|---|---|---|---|---|---|---|---|
| | | ಪ್ರತಿ 10,000 ಜನಸಂಖ್ಯೆಗೆ | ಪ್ರತಿ 100 ಚ.ಕಿ.ಮೀ | ಸಂಖ್ಯೆಗೆ ಕೆಲಸಗಾರರ ಶೇಕಡಾ | ಜನಸಾಂದ್ರತೆ | ಪ್ರತೀ ಕೆಲಸ ಗಾರನಿಗೆ ರೂ. | ಪ್ರತಿ ಘಟಕಕ್ಕೆ ರೂ. | ಪ್ರತಿಕೆಲಸ ಗಾರನಿಗೆ | ಪ್ರತೀ ಘಟಕಕ್ಕೆ | ತಲಾ | ಪ್ರತೀ ಚ.ಕಿ.ಮೀ. | ಪ್ರತೀಘಟಕ | ಪ್ರತೀಕೆಲಸ ಗಾರನಿಗೆ | ಪ್ರತೀ ಕೆಲಸ ಗಾರನಿಗೆ |
| | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| 1 | ಬ್ಯಾಡಗಿ | 1.82 | 3.21 | 0.14 | 0.25 | 4.61 | 36.57 | 0.02 | 0.19 | 3.43 | 0.01 | 4266 | 541 | 452.43 |
| 2 | ಧಾರವಾಡ | 6.45 | 8.13 | 1.08 | 1.37 | 9.75 | 164.02 | 0.17 | 2.87 | 185.21 | 0.23 | 23326 | 1387 | 2050.79 |
| 3 | ಗದಗ | 6.04 | 11.38 | 0.68 | 1.28 | 11.09 | 124.62 | 0.30 | 3.32 | 200.51 | 0.38 | 21337 | 1898 | 819.61 |
| 4 | ಹಾನಗಲ್ | 1.61 | 2.99 | 0.06 | 0.11 | 24.17 | 92.48 | 0.19 | 0.74 | 11.89 | 0.02 | 28682 | 7499 | 970.52 |
| 5 | ಹಾವೇರಿ | 3.26 | 5.75 | 0.26 | 0.46 | 5.04 | 39.87 | 0.09 | 0.67 | 21.87 | 0.04 | 5584 | 706 | 602.54 |
| 6 | ಹಿರೇಕೆರೂರು | 1.47 | 2.62 | 0.09 | 0.16 | 8.70 | 51.81 | 0.10 | 0.60 | 8.86 | 0.02 | 4092 | 687 | 797.18 |
| 7 | ಹುಬ್ಬಳ್ಳಿ | 6.81 | 37.49 | 1.11 | 6.09 | 13.73 | 223.08 | 1.61 | 26.18 | 1782.94 | 9.81 | 37013 | 2278 | 2508.99 |
| 8 | ಕಲಘಟಗಿ | 0.74 | 0.88 | 0.05 | 0.06 | 23.82 | 150.83 | 0.03 | 0.18 | 1.36 | 0.00 | 13820 | 2182 | 707.63 |
| 9 | ಕುಂದಗೋಳ | 0.40 | 0.62 | 0.12 | 0.03 | 11.28 | 50.75 | 0.86 | 0.39 | 1.53 | 0.00 | 394 | 87 | 788.89 |
| 10 | ಮುಂಡರಗಿ | 1.37 | 1.14 | 0.09 | 0.08 | 9.33 | 61.60 | 0.88 | 5.82 | 79.53 | 0.07 | 37128 | 5625 | 976.67 |
| 11 | ನರಗುಂದ | 1.10 | 1.38 | 0.05 | 0.07 | 7.79 | 37.67 | 0.35 | 1.70 | 18.79 | 0.02 | 17285 | 3576 | 1085.79 |
| 12 | ನವಲಗುಂದ | 0.54 | 0.55 | 0.73 | 0.76 | 7.45 | 1015.17 | 0.20 | 27.70 | 148.89 | 0.15 | 530844 | 3894 | 2470.96 |
| 13 | ರಾಣೆಬೆನ್ನೂರು | 3.73 | 6.85 | 1.21 | 2.22 | 115.06 | 3731.87 | 0.83 | 26.94 | 1006.14 | 1.85 | 877921 | 27067 | 5820.13 |
| 14 | ರೋಣ | 1.05 | 1.39 | 0.06 | 0.09 | 3.37 | 20.78 | 0.03 | 0.16 | 1.71 | 0.00 | 6905 | 1120 | 701.04 |
| 15 | ಸವಣೂರು | 1.40 | 2.01 | 0.10 | 0.15 | 5.54 | 40.27 | 0.04 | 0.26 | 3.68 | 0.01 | 14812 | 2037 | 464.29 |
| 16 | ಶಿಗ್ಗಾವಿ | 1.46 | 2.39 | 0.06 | 0.10 | 7.48 | 32.57 | 0.03 | 0.14 | 2.05 | 0.00 | 7450 | 1710 | 301.31 |
| 17 | ಶಿರಹಟ್ಟಿ | - | - | - | - | - | - | - | - | - | - | - | | |
| | (ಜಿಲ್ಲೆಗೆ) | 3.24 | 5.51 | 4.77 | 0.85 | 29.34 | 454.40 | 0.92 | 14.17 | 496.71 | 0.78 | 99,847 | 6446 | 2645.71 |

(ಆಧಾರ : ಐಎಸ್‌ಇಸಿ)

ಶಾಶ್ವತ ಹುಲ್ಲುಗಾವಲು ಮತ್ತು ಗೋಮಾಳಗಳ ವಿಸ್ತೀರ್ಣ, ಒಟ್ಟು ಭೌಗೋಳಿಕ ಕ್ಷೇತ್ರದ ವಿಸ್ತೀರ್ಣದಲ್ಲಿ 1970-71 ರಲ್ಲಿ ಶೇ.2.80, 1975-76 ರಲ್ಲಿ ಶೇ. 2.68, 1980-81 ರಲ್ಲಿ ಶೇ.2.68, 1985-86 ರಲ್ಲಿ ಶೇ.1.67, 1990-91 ರಲ್ಲಿ ಶೇ.1.35 ಮತ್ತು 1991-92 ರಲ್ಲಿ ಶೇ.1.36 ಇದ್ದಿತು. ಒಟ್ಟು 22 ವರ್ಷಗಳಲ್ಲಿ ಈ ವಿಸ್ತೀರ್ಣವು ಶೇ.50 ರಷ್ಟು ಕಡಿಮೆಯಾಗಿರುವುದು ಕಂಡು ಬರುತ್ತದೆ. ಜಾನುವಾರುಗಳ ಸಂಖ್ಯೆ ಪ್ರತಿ ಚದರ ಕಿ.ಮೀ.ಗೆ 1966 ರಲ್ಲಿ 63, 1972 ರಲ್ಲಿ 68, 1977 ರಲ್ಲಿ 73; 1983 ರಲ್ಲಿ 76 ಮತ್ತು 1990 ರಲ್ಲಿ 69 ಇದ್ದಿತು. ಜಾನುವಾರುಗಳ ಸಂಖ್ಯೆ ಹೆಚ್ಚಾಗುತ್ತಿದ್ದು ಅವುಗಳು ಉಪಯೋಗಿಸುವ ಹುಲ್ಲುಗಾವಲು ಮತ್ತು ಗೋಮಾಳ ಪ್ರದೇಶ ಕಡಿಮೆಯಾಗುತ್ತಿರುವುದು ಗಮನಿಸಬೇಕಾದ ಅಂಶವಾಗಿದೆ. ಈ ಜಾನುವಾರು ಸಂಖ್ಯೆಗಳಲ್ಲಿ ಬೇರೆ ಬೇರೆ ಪ್ರಾಣಿಗಳಿಗೆ ಸಂಬಂಧಪಟ್ಟ ಅಂಕಿ ಸಂಖ್ಯೆಗಳು ಈ ರೀತಿ ಇವೆ.

**ಕೋಷ್ಟಕ 8.19 : ಲಕ್ಷ ಜನಸಂಖ್ಯೆಗೆ ಪ್ರಾಣಿಗಳ ಸಂಖ್ಯೆ.**

| ವರ್ಷ | 1966 | 1972 | 1977 | 1983 | 1990 |
|---|---|---|---|---|---|
| ಹಾಲು ಕೊಡುವ ಹಸುಗಳು | 3,369 | 3,177 | 3,302 | 3,150 | 2,600 |
| ಎಮ್ಮೆಗಳು | 3,828 | 3,524 | 3,593 | 3,250 | 2,500 |
| ಕುರಿಗಳು | 9,577 | 9,496 | 9,017 | 6,690 | 7,250 |
| ಟಗರುಗಳು | 8,505 | 12,403 | 11,109 | 10,160 | 8,900 |
| ಹಂದಿಗಳು | 143 | 162 | 164 | 200 | 230 |
| ಪಕ್ಷಿಗಳು | 12,756 | 15,371 | 10,286 | 11,600 | 17,980 |

ಟಗರು, ಹಂದಿ ಹಾಗೂ ಪಕ್ಷಿಗಳ ಸಂಖ್ಯೆಯಲ್ಲಿ ಹೆಚ್ಚು ಇದ್ದು, ಹಸು, ಎಮ್ಮೆ ಮತ್ತು ಕುರಿಗಳ ಸಂಖ್ಯೆ ಕಡಿಮೆ ಆಗಿವೆ.

ಈ ಜಿಲ್ಲೆಯಲ್ಲಿ 1985-86 ರಲ್ಲಿ ಇದ್ದ ಕಾಯ್ದಿಟ್ಟ ಅರಣ್ಯ - 51,388 ಹೆ; ಸುರಕ್ಷಿತ ಅರಣ್ಯ-401 ಹೆ; ಮತ್ತು ಕಂದಾಯ ಇಲಾಖೆ ಅಧೀನದಲ್ಲಿನ ಅರಣ್ಯ - 2,428 ಹೆ. ಒಟ್ಟು-54,217 ಹೆ. ಆಗಿದ್ದು 1992-93 ರವರೆಗೂ ಈ ಸಂಖ್ಯೆಗಳಲ್ಲಿ ಯಾವ ಬದಲಾವಣೆಯೂ ಇರಲಿಲ್ಲ. 1989-90 ರಲ್ಲಿ ಜಿಲ್ಲಾ ಸಂಖ್ಯೆ ಸಂಗ್ರಹಣಾಧಿಕಾರಿಗಳ ಮಾಹಿತಿಯ ಪ್ರಕಾರ ಜಿಲ್ಲೆಯಲ್ಲಿ ಅರಣ್ಯ (ಎಲ್ಲಾ ಅರಣ್ಯಗಳು ಸೇರಿ)ದ ವಿಸ್ತೀರ್ಣವನ್ನು ಈ ಮುಂದಿನ ಪಟ್ಟಿಯಲ್ಲಿ ಕೊಟ್ಟಿದೆ.

**ಕೋಷ್ಟಕ 8.20 : ತಾಲೂಕುವಾರು ಅರಣ್ಯಪ್ರದೇಶದ ವಿಸ್ತೀರ್ಣ.**

| ಕ್ರಸಂ | ತಾಲೂಕು | ಗ್ರಾಮ ಸಂಬಂಧವಾದ ಕಾಗದ ಪತ್ರಗಳ ಮೇರೆಗೆ ಭೌಗೋಳಿಕ ಪ್ರದೇಶ. (ಹೆ) | ಅರಣ್ಯ ಹೆಕ್ಟೇರುಗಳಲ್ಲಿ | ಶೇಕಡಾ |
|---|---|---|---|---|
| 1) | ಬ್ಯಾಡಗಿ | 43,656 | 4,889 | 11.2 |
| 2) | ಧಾರವಾಡ | 1,11,788 | 13,554 | 12.1 |
| 3) | ಗದಗ | 1,09,751 | 1,749 | 1.5 |
| 4) | ಹಾನಗಲ್ | 77,525 | 8,474 | 10.9 |
| 5) | ಹಾವೇರಿ | 79,985 | 3,849 | 4.8 |
| 6) | ಹಿರೇಕೆರೂರು | 80,694 | 8,876 | 10.9 |

| ಕ್ರಸಂ | ತಾಲೂಕು | ಗ್ರಾಮ ಸಂಬಂಧವಾದ ಕಾಗದ ಪತ್ರಗಳ ಮೇರೆಗೆ ಭೌಗೋಳಿಕ ಪ್ರದೇಶ. (ಹೆ) | ಅರಣ್ಯ (ಹೆ) | ಹೆಕ್ಟೇರುಗಳಲ್ಲಿ ಶೇಕಡಾ |
|---|---|---|---|---|
| 7) | ಹುಬ್ಬಳ್ಳಿ | 73,707 | 2,033 | 2.7 |
| 8) | ಕಲಘಟಗಿ | 68,757 | 19,256 | 28.0 |
| 9) | ಕುಂದಗೋಳ | 64,859 | - | - |
| 10) | ಮುಂಡರಗಿ | 88,398 | 17,646 | 19.9 |
| 11) | ನರಗುಂದ | 43,652 | - | - |
| 12) | ನವಲಗುಂದ | 1,08,218 | - | - |
| 13) | ರಾಣೆಬೆನ್ನೂರು | 90,475 | 10,614 | 11.7 |
| 14) | ರೋಣ | 1,29,091 | 276 | 0.2 |
| 15) | ಸವಣೂರು | 53,901 | 801 | 1.4 |
| 16) | ಶಿಗ್ಗಾಂವಿ | 58,920 | 9,051 | 15.3 |
| 17) | ಶಿರಹಟ್ಟಿ | 94,913 | 12,943 | 13.6 |
| | ಒಟ್ಟು | 13,78,200 | 1,15,181 | 8.35 |

ಆಧಾರ : ಅರಣ್ಯ ಇಲಾಖೆ

ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚುತ್ತಿರುವ ಬೇಡಿಕೆಯಂತೆ ತೇಗ, ಬಂಬು, ಉರುವಲು ಕಟ್ಟಿಗೆ, ಹಣ್ಣುಹಂಪಲು ಜಾತಿಯ ಮರಗಳನ್ನು ಬೆಳೆಯಬೇಕಾಗಿದೆ. ಹಣ್ಣುಗಳ ಬೆಳೆ 1986-87 ರಲ್ಲಿ 0.50 ಟನ್ ಇದ್ದು 1991-92 ರಲ್ಲಿ 0.265 ಟನ್ನು ಅಂದರೆ ಸುಮಾರು ಶೇ.50 ರಷ್ಟು ಕಡಿಮೆ ಆಗಿದೆ. ಧಾರವಾಡ ಜಿಲ್ಲೆಯ ಪೂರ್ವಭಾಗ ಬೈಲು ಪ್ರದೇಶವಾಗಿದ್ದು, ಪಶ್ಚಿಮಭಾಗ ಪಶ್ಚಿಮಘಟ್ಟಕ್ಕೆ ಹೊಂದಿಕೊಂಡಂತಿದ್ದು ಇಲ್ಲಿ ತೇಗ, ಹೊನ್ನೆ ಮತ್ತು ಶ್ರೀಗಂಧ, ಬಿದಿರು, ಗೇರು ಮೊದಲಾದ ಜಾತಿಯ ಗಿಡಮರಗಳನ್ನು ಬೆಳೆಸಲಾಗುತ್ತಿದೆ. ಬಯಲು ಪ್ರದೇಶದಲ್ಲಿ ಉರುವಲು ಹಾಗೂ ದನಕರುಗಳಿಗೆ ಬೇಕಾಗುವ ಸೊಪ್ಪಿನಜಾತಿಯ ಗಿಡಗಳನ್ನು ಬೆಳೆಯಲು ಸಾಧ್ಯ. ಬೀಳು ಅರಣ್ಯ ಪ್ರದೇಶದಲ್ಲಿ ಫಲವತ್ತತೆಯನ್ನು ಹೆಚ್ಚಿಸಿ ಹಸಿರು ಪರಿಸರವನ್ನು ವೃದ್ಧಿಗೊಳಿಸುವುದು, ಭೂಸವಕಳಿ ತಡೆಯುವುದು, ಮಣ್ಣಿನಲ್ಲಿ ಆರ್ದ್ರತೆಯನ್ನು ಕಾಯ್ದುಕೊಳ್ಳುವುದು, ಅರಣ್ಯ ಪ್ರದೇಶದಲ್ಲಿ ಬೆಂಕಿಯಿಂದ ಅರಣ್ಯ ನಾಶವಾಗದಂತೆ ಸಂರಕ್ಷಿಸುವ ದಿಶೆಯಲ್ಲಿ ಅರಣ್ಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು ಮೊದಲಾದ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಂಡಿದೆ. ಹೀಗೆಯೇ ಬೀಳು ಸವಕಲು ಅರಣ್ಯ ಪ್ರದೇಶದಲ್ಲಿ ನೆಡುತೋಪುಗಳನ್ನು ಬೆಳೆಸುವುದು, ಬೀಳು ಹಾಗೂ ನಿರುಪಯುಕ್ತ ಪ್ರದೇಶಗಳಲ್ಲಿ ವಿವಿಧ ಸಸಿಗಳನ್ನು ರೈತರಿಂದ, ಶಾಲಾ ಮಕ್ಕಳಿಂದ ಬೆಳೆಸಿ ಸಾರ್ವಜನಿಕರಿಗೆ ಹಂಚುವುದರಿಂದ ಅರಣ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ವೃದ್ಧಿಸಲಾಗುತ್ತಿದೆ. ಪರಿಶಿಷ್ಟ ವರ್ಗದ ಜನರ ಜಮೀನುಗಳಲ್ಲಿ ವಿಶೇಷ ಘಟಕ ಯೋಜನೆಗಳಲ್ಲಿ ವಿವಿಧ ಜಾತಿಯ ಗಿಡಗಳನ್ನು ಕೊಟ್ಟು ಪ್ರೋತ್ಸಾಹಿಸಲಾಗುತ್ತಿದೆ. ಹೀಗೆ ಅರಣ್ಯ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಿಂದ ಜಿಲ್ಲೆಯ ಆರ್ಥಿಕ ಪ್ರಗತಿಗೆ ಸಹಾಯಕವಾಗಿದೆ. ಈ ದಿಸೆಯಲ್ಲಿ ಅರಣ್ಯ ಇಲಾಖೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರ ಹೀಗಿದೆ.

(1) ಉರುವಲು ಹಾಗೂ ಮೇವು ಯೋಜನೆ : ಈ ಯೋಜನೆಯಂತೆ ಅರಣ್ಯ ಅಭಿವೃದ್ಧಿ ಕಾರ್ಯಕ್ರಮದಲ್ಲಿ ವಿಶೇಷವಾಗಿ ಉರುವಲು ಕಟ್ಟಿಗೆ ಹಾಗೂ ಹಳ್ಳಿಗಾಡು ಪ್ರದೇಶದ ಜನರ ದನಕರುಗಳಿಗೆ ಮೇವು ಗಿಡಮರಗಳನ್ನು ಬೆಳೆಸುವ ಉದ್ದೇಶವಿದೆ.

**ಕೋಷ್ಟಕ 8.21 : 1985-86 ರಿಂದ 1991-92 ರ ವರೆಗೆ ಧಾರವಾಡ ಜಿಲ್ಲೆಯಲ್ಲಿ ಅರಣ್ಯ ಉತ್ಪನ್ನಗಳ ವಿವರ.**

| | 1985-86 | 1986-87 | 1987-88 | 1988-89 | 1989-90 | 1990-91 | 1991-92 |
|---|---|---|---|---|---|---|---|
| 1) ರೋಸ್‌ವುಡ್ | 14,483 ಘ.ಮೀ. | | | | | | |
| 2) ಟೀಕ್‌ವುಡ್ | 29,558 | - | 55.07 ಘ.ಮೀ. | | | | |
| 3) ಮತ್ತಿ | 32,730.9 | | | | | | |
| 4) ನಂದಿ | 600 | | | | | | |
| 5) ಇತರೇ | 2,200 ಟನ್ | 77.29 ಘ.ಮೀ. | - | 67.129 ಘಮೀ | | | |
| 6) ಉರುವಲು | 490 ಘ.ಮೀ. | | 64.652 ಘಮೀ | - | | | |
| 7) ಬೀಡಿ ಎಲೆ | 0.25 ಟನ್ | 0.20 ಟನ್ | - | 0.28 | 20 ಟನ್ | 8.0 ಟನ್ | 5 ಟನ್ |
| 8) ಕಕ್ಕಿ ತರವಾಡ | 0.10 ಟನ್ | | | | | | |
| 9) ಹುಣಸೇಹಣ್ಣು (ಟನ್) | 40.00 | 20.00 | 30 | 40 | 42 | 34 | 25 |
| 10) ಚೌಬೀನೆ (ಘ. ಮೀ) | - | 187.97 | 192.02 | 477.454 | - | 50.68 | 176.522 |
| 11) ಉರುವಲುಸೌದೆ ಮತ್ತು ಇದ್ದಲಿನ ಸೌದೆ (ಟನ್) | | 114.00 | 120.15 | | 85.092 | 121.16 | |
| 12) ಬೊಂಬು | | 2,518 ಮರ | | | | | |
| 13) ಪಾಟಿ | | 88 ಟನ್ | | | | | |
| 14) ಶ್ರೀಗಂಧ | | 1,185 ಬೇರು | | | 5,160 ಕಿಜಿ | 1.21 ಟನ್ | |
| 15) ಬೆತ್ತ | | | 0.20 ಟನ್ | | | | |
| 16) ಜೇನು | | | 0.20 ಟನ್ | | | | |
| 17) ಜೇನುಮೇಣ | | - | - | 0.50 ಟನ್ | | | |
| 18) ಹಣ್ಣುಗಳು | | | | 0.50 ಟನ್ | ೦.೫೦ ಟನ್ | 3.50 ಟನ್ | 0.260 ಟನ್ |
| 19) ರೋಶಾ ಎಣ್ಣೆ | | | | 50 ಲೀ. | 52 ಲೀ. | 27 ಲೀ | |
| 20) ಹುಲ್ಲು (ಮೇವು) | | | | 200 ಟನ್ | 150 ಟನ್ | - | - |
| 21) ರೋಶಾಹುಲ್ಲು | | | | 50 ಟನ್ | 50 ಟನ್ | 25 ಟನ್ | |
| 22) ತೊಗಡಿ (ತರೋಡಾ) | | | | 0.10 ಟನ್ | | 1.5 ಟನ್ | |
| 23) ದಿಮ್ಮಿ | | | | | | | 8,032 ಘ.ಮೀ. |
| 24) ನೀಲಗಿರಿ ಮರ | | | 30,467 ಪೋಲ್ | | | | |

(ಆಧಾರ - ಅರಣ್ಯ ಇಲಾಖೆ - ಬೆಳಗಾವಿ)

(2) ಸಾಮಾಜಿಕ ಅರಣ್ಯ ಯೋಜನೆ : ಈ ರಾಜ್ಯ ಯೋಜನೆಯಲ್ಲಿ ಸರಕಾರಿ ಹಾಗೂ ಸರ್ಕಾರೇತರ ಬೀಳು ಪ್ರದೇಶವನ್ನು ಅಳವಡಿಸಿ ಸಾರ್ವಜನಿಕರ ಸಹಾಯದಿಂದ ಅರಣ್ಯ ಅಭಿವೃದ್ಧಿಪಡಿಸುವ ಗುರಿ ಹೊಂದಲಾಗಿದೆ. ಇದಕ್ಕೆ ವಿಶ್ವಬ್ಯಾಂಕ್‌ನ ನೆರವಿದೆ.

(3) ವಿಶೇಷ ಘಟಕ ಯೋಜನೆ : ಈ ಯೋಜನೆಯಲ್ಲಿ ಪರಿಶಿಷ್ಟಜಾತಿಯ ಜನರ ಆರ್ಥಿಕ ಪ್ರಗತಿ ಹೆಚ್ಚಿಸಲು ಅವರಿಗೆ (1) ಸಣ್ಣ ನೆಡುತೋಪುಗಳನ್ನು ನಿರ್ಮಿಸಿ ವಹಿಸುವುದು, (2) ಬೇಕಾಗುವ ಕಟ್ಟಿಗೆ ಬೆಳೆಸುವ ಹಾಗೂ ಹಣ್ಣು ಹಂಪಲು ನೀಡುವ ಸಸಿಗಳನ್ನು ಬೆಳೆಸಲು ಪ್ರೋತ್ಸಾಹ ನೀಡುವುದು (3) 'ಆಸ್ತ' ಒಲೆಗಳನ್ನು ಒದಗಿಸುವುದು ಮೊದಲಾದ ಉದ್ದೇಶಗಳನ್ನು ಹೊಂದಲಾಗಿದೆ.

(4) ಶಾಲಾವನ ಯೋಜನೆ : ಶಾಲೆಗಳಿಗೆ ಸೇರಿದ ನಿರುಪಯುಕ್ತ ಭೂಮಿಯಲ್ಲಿ ಅರಣ್ಯ ಅಭಿವೃದ್ಧಿಪಡಿಸುವ ಉದ್ದೇಶದಿಂದ ಉಪಯುಕ್ತ ಜಾತಿಯ ಗಿಡಮರಗಳನ್ನೇ ಬೆಳೆಸಿ ಶಾಲೆಯ ಆರ್ಥಿಕ ಪ್ರಗತಿಗೆ ಅನುಕೂಲ ಕಲ್ಪಿಸುವುದು ಈ ಯೋಜನೆಯ ಉದ್ದೇಶವಾಗಿದೆ.

(5) ಕೇಂದ್ರ ಪುರಸ್ಕೃತ ಸಸ್ಯಕ್ಷೇತ್ರ ಯೋಜನೆ : ಈ ಯೋಜನೆಯಲ್ಲಿ ಸಾರ್ವಜನಿಕರಿಗೆ ಹಾಗೂ ರೈತರಿಗೆ ತಮ್ಮ ಜಮೀನುಗಳಲ್ಲಿ ಗಿಡಮರಗಳನ್ನು ಬೆಳೆಸಲು ಬೇಕಾಗುವ ಸಸಿಗಳನ್ನು ಬೆಳೆಸಿ ಉಚಿತವಾಗಿ ಹಂಚುವ ಉದ್ದೇಶ ಹೊಂದಲಾಗಿದೆ.

(6) ಕರ್ನಾಟಕ ಅರಣ್ಯ ಅಭಿವೃದ್ಧಿ ಫಂಡ್ ಯೋಜನೆ : ಈ ಯೋಜನೆಯಲ್ಲಿ ಅರಣ್ಯ ಅಭಿವೃದ್ಧಿ ಕಾರ್ಯಕ್ರಮ ಹಮ್ಮಿಕೊಂಡಿದ್ದು, ನೆಡುತೋಪುಗಳನ್ನು ನಿರ್ಮಿಸಲಾಗಿದೆ.

(7) ಪಶ್ಚಿಮಘಟ್ಟ ಯೋಜನೆ : ಈ ಯೋಜನೆ ಅನ್ವಯ ವೀರಾಪೂರ ವಾಚರ ಶೆಡ್ಡಿನಲ್ಲಿ ನೆಡುತೋಪು ಬೆಳೆಸಲಾಗಿದೆ.

(8) ರಸ್ತೆ ಬದಿ ನೆಡುತೋಪು ಯೋಜನೆ : ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಗಳಲ್ಲಿ ರಸ್ತೆ ಬದಿಗಳಲ್ಲಿ ನೆಡುತೋಪು ಬೆಳೆಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

(9) ಡಿ.ಪಿ.ಎ.ಪಿ. ಯೋಜನೆ : ಡ್ರಾಟ್ ಪ್ರೋನ್ ಏರಿಯಾ ಅಥವಾ ಬರಸಂಭವ ಪ್ರದೇಶ ಯೋಜನೆಯಂತೆ ಬರಗಾಲ ಪೀಡಿತ ಪ್ರದೇಶದ ಜನರಿಗೆ ಉದ್ಯೋಗ ಕಲ್ಪಿಸುವ ಹಾಗೂ ನೆಡುತೋಪು ನಿರ್ಮಾಣ ಮಾಡುವ ಉದ್ದೇಶವಿದ್ದು ಮುಖ್ಯವಾಗಿ ಉರುವಲು ಹಾಗೂ ಮೇವು ಕೊಡುವ ಸಸ್ಯಗಳನ್ನು ಬೆಳೆಸಲಾಗುತ್ತಿದೆ.

(10) ಡಿ.ಡಿ.ಎಫ್. ಯೋಜನೆ : ಈ ಯೋಜನೆಯಲ್ಲಿ ಹಾಳಾದ ಅರಣ್ಯ ಪ್ರದೇಶದಲ್ಲಿ ಅರಣ್ಯ ಅಭಿವೃದ್ಧಿ ಕಾರ್ಯಕ್ರಮದನ್ವಯ ವಿಶೇಷವಾಗಿ ಉರುವಲು ಹಾಗೂ ಮೇವು ಬೆಳೆಸಲಾಗುತ್ತಿದೆ.

**ಸಾಮಾಜಿಕ ಅರಣ್ಯ :** ಧಾರವಾಡ ಜಿಲ್ಲೆಯಲ್ಲಿ ಒಟ್ಟು ಭೌಗೋಳಿಕ ವಿಸ್ತೀರ್ಣ 13,78,200 ಹೆ. ಇದ್ದು ಇದರಲ್ಲಿ 1,15,181 ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಉರುವಲು ಕಟ್ಟಿಗೆ, ಮರಮಟ್ಟುಗಳ ಒಕ್ಕಲುತನದ ಉಪಕರಣಗಳು ಮುಂತಾದವುಗಳ ಕೊರತೆ ಹೆಚ್ಚುತ್ತಲಿದ್ದು ಅರಣ್ಯದ ಮೇಲಿನ ಈ ಒತ್ತಡದಿಂದ ಅದರ ವಿಸ್ತೀರ್ಣ ಕಡಿಮೆ ಆಗುತ್ತಿದೆ. ಈ ಸಮಸ್ಯೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು, 1983 ರಿಂದ ಸಾಮಾಜಿಕ ಅರಣ್ಯ ಯೋಜನೆಯನ್ನು ಕಾರ್ಯಗತ ಮಾಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ 1987-88 ರಲ್ಲಿ 77.22 ಲಕ್ಷ ಸಸಿಗಳನ್ನು 3,695.60 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಸಲಾಗಿದ್ದು, ನಂತರದ ವರ್ಷಗಳಲ್ಲಿ ಈ ಸಂಖ್ಯೆಗಳನ್ನು ಇಲ್ಲಿ ಕೊಡಲಾಗಿದೆ. 1988-89: 157.45 ಲಕ್ಷ ಗಿಡಗಳು; 6,146.90 ಹೆಕ್ಟೇರ್‌ನಲ್ಲಿ; 1989-90: 89.48 ಲಕ್ಷ ಗಿಡಗಳು, 2,524.00 ಹೆಕ್ಟೇರ್‌ನಲ್ಲಿ; ಹಾಗೂ 1990-91 : 31.67 ಲಕ್ಷ ಗಿಡಗಳು, 1,895-00 ಹೆಕ್ಟೇರ್‌ನಲ್ಲಿ. 1960-61 ರಿಂದ 1991-92 ರ ಅವಧಿಯಲ್ಲಿ ಅರಣ್ಯ ಪ್ರದೇಶದಲ್ಲಿ 0.37 (ಶೇ.) ಹೆಚ್ಚಾಗಿದೆ. ಆದರೆ ಇದು ಅರಣ್ಯ ಇಲಾಖೆಯ ವ್ಯಾಪ್ತಿಗೊಳಪಟ್ಟ ಪ್ರದೇಶವಾಗಿದ್ದು ಅರಣ್ಯವಾಗಿರುವ ಪ್ರದೇಶ ಶೇ.5.1 ಎಂದು ಸರಕಾರೇತರ ತಜ್ಞರ ಅಭಿಪ್ರಾಯ. (ಡಾ|| ಸಲ್ದಾನ್ಹಾ ಒದಗಿಸಿದ ಮಾಹಿತಿ). ಸಾಗುವಳಿ ದೊರಕದ ಪ್ರದೇಶದಲ್ಲಿ ವ್ಯವಸಾಯವನ್ನು ಬಿಟ್ಟು ಇತರ ಉದ್ದೇಶಗಳಿಗೆ ಉಪಯೋಗಿಸಿರುವ ಪ್ರದೇಶದಲ್ಲಿ ಶೇ.4.47 ಹೆಚ್ಚಾಗಿದೆ. ಹಾಗೆಯೇ ಬಂಜರು ಮತ್ತು ವ್ಯವಸಾಯ ಮಾಡಲು ಸಾಧ್ಯವಲ್ಲದ ಪ್ರದೇಶದಲ್ಲಿ ಶೇ.2.34 ಕಡಿಮೆಯಾಗಿದೆ. ಇದರಿಂದ ಬಂಜರು

ಭೂಮಿಗಳನ್ನು ಉಪಯೋಗಿಸುವ ದಿಸೆಯಲ್ಲಿ, ಪ್ರಗತಿ ಸಾಧಿಸಿರುವುದನ್ನು ನೋಡಬಹುದು. ಹಾಗೆಯೇ ಒಟ್ಟು ಬಿತ್ತನೆಯಾಗಿರುವ ಪ್ರದೇಶದಲ್ಲಿ ಕಳೆದ ದಶಕದಲ್ಲಿ 57,686 ಹೆ.ನಷ್ಟು ಕಡಿಮೆಯಾಗಿದೆ.

## ಕ್ಷಾಮ ಮತ್ತು ಮಹಾಪೂರ

ಜಿಲ್ಲೆಯಲ್ಲಿ ದಾಖಲೆಯಾದ ಅತ್ಯಂತ ಪೂರ್ವದ ಕ್ಷಾಮವೆಂದರೆ, ಕ್ರಿ.ಶ.1396 ರಲ್ಲಿನ 'ದುರ್ಗಾದೇವಿ ಕ್ಷಾಮ': ಇದು 12 ವರ್ಷಗಳ ಕಾಲ ಇದ್ದಿತೆಂದು ತಿಳಿದುಬಂದಿದೆ. ಕಾಲಾನುಸಾರ ಮಳೆ ಬರದಿದ್ದುದೇ ಇದಕ್ಕೆ ಕಾರಣ. ಕ್ರಿ.ಶ. 1423 ರಲ್ಲಿಯೂ, ಅತ್ಯಂತ ಭೀಕರ ಕ್ಷಾಮವುಂಟಾಗಿತ್ತೆಂದೂ, ಅಸಂಖ್ಯಾತ ಜಾನುವಾರುಗಳು ನೀರಿಲ್ಲದೆ ಸತ್ತವೆಂದು ವರದಿಯಾಗಿದೆ. ಅಹಮದ್ ಶಾಬಹಮನಿಯು ತನ್ನ ಸೈನ್ಯದ ಸಿಬ್ಬಂದಿಗೆ, ವೇತನವನ್ನು ಹೆಚ್ಚಿಸಿ, ಬಡವರಿಗಾಗಿ ಸಾರ್ವಜನಿಕ ಅಂಗಡಿಗಳನ್ನು ತೆರೆದನೆಂದೂ ತಿಳಿದುಬಂದಿದೆ. ಕ್ರಿ.ಶ.1471-73 ರಲ್ಲಿಯೂ ಕ್ಷಾಮವುಂಟಾಗಿರುವುದು ವರದಿಯಾಗಿದೆ. ಕ್ರಿ.ಶ.1791 ರಲ್ಲಿ ಪರಶುರಾಮ ಭಾವು ಪಟವರ್ಧನನ ನೇತೃತ್ವದಲ್ಲಿ ಮರಾಠರ ಪಡೆಯು ಮೈಸೂರಿನಿಂದ ಮರಳುವಾಗ ಧಾರವಾಡದ ಬಳಿ ಕ್ಷಾಮದಿಂದ ಆಹಾರಕ್ಕಾಗಿ ಪರಿತಪಿಸಿತು. 1791-92 ರಲ್ಲಿ ಭೀಕರ ಕ್ಷಾಮದಿಂದ, ಹುಬ್ಬಳ್ಳಿ, ಡಂಬಳ, ಕಲಘಟಗಿಗಳಲ್ಲಿ ಜನಗಳು ಎಲೆ ಮತ್ತು ಬೇರುಗಳನ್ನು ತಿನ್ನುವ ಪರಿಸ್ಥಿತಿ ಉಂಟಾಗಿದ್ದು ಹೆಂಗಸರನ್ನೂ ಮಕ್ಕಳನ್ನೂ ಮಾರಿದರು ಎಂದು ಹೇಳಲಾಗಿದೆ. ಡಂಬಳದಲ್ಲಿ 12 ವರ್ಷಗಳ ಕಾಲ ಮಳೆ ಇಲ್ಲದೆ, ವ್ಯವಸಾಯ ಕಾರ್ಯವೇ ಇರಲಿಲ್ಲ, ಈ ಕ್ಷಾಮವನ್ನು 'ಡವಗಿ' ಬರ (ತಲೆ ಬುರುಡೆಗಳ ಬರ) ಎಂದು ಕರೆದಿದ್ದಾರೆ. ಆಗಿನ ಪೇಶ್ವೆ ಸರ್ಕಾರವು ಧನಿಕರ ಕೆಲವು ಕಣಜಗಳನ್ನು ವಶಕ್ಕೆ ತೆಗೆದುಕೊಳ್ಳುವುದನ್ನು ಬಿಟ್ಟು ಬೇರೆ ಯಾವ ರಚನಾತ್ಮಕ ಕಾರ್ಯವನ್ನು ಮಾಡಿಲ್ಲವೆಂದು ತಿಳಿದುಬಂದಿದೆ. ಆಗ ಕಾಳುಗಳು ಒಂದು ರೂಪಾಯಿಗೆ 2 1/2 ಪೌಂ (1 ಕೆಜಿ)ಯಿಂದ 10 ಪೌಂ (4 ಕೆಜಿ) ಇದ್ದಿತು. 1802-03 ರಲ್ಲಿ ಪಿಂಡಾರಿಗಳ ಗಲಭೆಯಿಂದ ಕ್ಷಾಮವುಂಟಾಗಿದ್ದರೂ ಪರಿಸ್ಥಿತಿ ಹಿಂದಿನಂತೆ ಗಂಭೀರವಾಗಿರಲಿಲ್ಲ. ಜನರು ಮೈಸೂರು ಸಂಸ್ಥಾನದ ಕಡೆ ವಲಸೆಹೋದ ವರದಿಗಳುಂಟು. ಪಂಥರಪುರ ಹಾಗೂ ಬಿಜಾಪುರಗಳಿಂದ ಜನಗಳು ವಲಸೆಬಂದ ಕಾರಣ ಈ ಜಿಲ್ಲೆಯಲ್ಲಿ ಹೆಚ್ಚಿನ ಕ್ಷಾಮವುಂಟಾಯಿತು. ಹೀಗೆ ವಲಸೆ ಬಂದವರ ಸಂಖ್ಯೆ ಹೆಚ್ಚಾಗಿದ್ದರಿಂದಲೂ, ಕ್ಷಾಮವು ಹೆಚ್ಚು ಹರಡಿದುದರಿಂದಲೂ, ಈ ಬರವನ್ನು 'ಬೇನೆಬರ' ಎಂದು ವರ್ಣಿಸಿದ್ದಾರೆ. ಕಾಳುಗಳು ರೂಪಾಯಿಗೆ 17 1/2 ಯಿಂದ 20 ಪೌಂ. ಅಂದರೆ (8 ರಿಂದ 9 ಕೆ.ಜಿ) ಇದ್ದು, ಆಗಿನ ಕಾಲದಲ್ಲಿ ಇದು ಅತಿ ಹೆಚ್ಚಿನ ಬೆಲೆ ಎಂದು ಪರಿಗಣಿಸಲಾಗಿದೆ. ಆಗ ಹುಬ್ಬಳ್ಳಿಯು ಚಿಂತಾಮಣಿ ರಾವ್ ಪಟವರ್ಧನ್‌ರ ವಶದಲ್ಲಿದ್ದು ಸರಕಾರವು ಬಡವರಿಗೆ ಸಹಾಯ ಮಾಡಿತು. ಕ್ರಿ.ಶ. 1814 ರಲ್ಲಿನ ಬರಕ್ಕೆ 'ಬೇಸಿಗೆ ಬರ' ಎಂದು ವಿವರಿಸಲಾಗಿದೆ. ಇದು ಡಂಬಳದಲ್ಲಿ ಅತಿ ಹೆಚ್ಚಾಗಿತ್ತೆಂದು ತಿಳಿದು ಬಂದಿದೆ. ಈ ಕ್ಷಾಮವು 2 ತಿಂಗಳು ಇದ್ದಿದ್ದು, ಕಾಳುಗಳ ಬೆಲೆ ರೂಪಾಯಿಗೆ 24 ಪೌಂ (10 ಕೆಜಿ) ಇದ್ದಿತು. 1832 ರಲ್ಲಿ ಮಳೆಯು ಇಲ್ಲದಿದ್ದುದರಿಂದಲೂ ಕೃಷ್ಣಾ ನದಿಯ ಉತ್ತರದಿಂದ ಜನರು ವಲಸೆ ಬಂದುದರಿಂದಲೂ, ಪುನಃ ಡಂಬಳದಲ್ಲಿ ಕ್ಷಾಮ ಉಂಟಾಗಿತ್ತು. ಕಾಳುಗಳ ಬೆಲೆಯು ರೂಪಾಯಿಗೆ 24 1/2 ಪೌಂ.ನಿಂದ 31 1/2 ಪೌಂಗಳಷ್ಟು ಇದ್ದಿತು. ಕೆಲವು ಅತಿ ಬಡವರು ಸೊಪ್ಪುಸದೆ ತಿಂದು ಜೀವಿಸುತ್ತಿದ್ದರೆಂದು ಹೇಳಲಾಗಿದೆ. ಆಗ ಕೆಲವು ಧನಿಕರು ಸಹಾಯ ಮಾಡಿದರೆಂದೂ ಮತ್ತು ಸರ್ಕಾರವು ಎಲ್ಲಾ ಕಾಳುಗಳನ್ನು ಮಾರುಕಟ್ಟೆಗೆ ಸುಲಭ ದರದಲ್ಲಿ ಮಾರಲು ಏರ್ಪಾಡು ಮಾಡಿತೆಂದು ಹೇಳಲಾಗಿದೆ. 1866 ರಲ್ಲಿ ನವಲಗುಂದ, ರೋಣ ಮತ್ತು ಡಂಬಳದಲ್ಲಿ ಕ್ಷಾಮವು ಹೆಚ್ಚಾಗಿತ್ತು. ಆಗಿನ ಕ್ಷಾಮಕ್ಕೆ 3-4 ವರ್ಷಗಳು ಬೆಳೆಯಾಗದೇ ಇರುವುದು ಕಾರಣವೆಂದೂ ಹೇಳಲಾಗಿದೆ. ಕೆಲವರು ಬಿಕ್ಷುಕ ವೃತ್ತಿಗೆ ಇಳಿಯಬೇಕಾಗಿದ್ದು, ಮತ್ತೆ ಕೆಲವರು ಬೇರೆ ಸ್ಥಳಗಳಿಗೆ ವಲಸೆ ಹೋದರು. ಈ ಮಧ್ಯ ಬೆಳಗಾವಿ, ಬಿಜಾಪುರ ಮತ್ತು ಬಳ್ಳಾರಿಗಳಿಂದ ಜನ ವಲಸೆ ಬಂದರು. ತೊಂದರೆಗೊಳಪಟ್ಟವರಿಗೆ ಸಹಾಯ ಮಾಡಲು, ಧಾರವಾಡ ನವಲಗುಂದ ಮತ್ತು ಗದಗ ವಿಭಾಗಗಳಲ್ಲಿ ಶರೀರ ಶ್ರಮದ ಕಾಮಗಾರಿಗಳನ್ನು ಕೈಗೊಳ್ಳಲಾಯಿತು. ಸರ್ಕಾರದ ಸ್ಥಳೀಯ ನಿಧಿಯಿಂದ ರೂ.40,000 ಹಾಗೂ ಇಂಪೀರಿಯಲ್ ನಿಧಿಯಿಂದ ರೂ.3,500 ಗಳನ್ನು ವಿಶೇಷ ಬರ ಪರಿಹಾರ ಧನವನ್ನಾಗಿ ಒದಗಿಸಿದ್ದರು. ಈ ಸಮಯದಲ್ಲಿ ಬರ ಪರಿಹಾರಾರ್ಥವಾಗಿ, ತೇಗೂರಿನಿಂದ ಹರಿಹರಕ್ಕೆ ರಸ್ತೆಗಳನ್ನು ಮಾಡಲು ಒಂದು ವಿಶೇಷ ನಿಧಿಯನ್ನು ಕೊಡಲಾಯಿತು. ಮತ್ತು ರೂ.16,000ಮುಂಗಡವನ್ನು ದೊಡ್ಡ ನೀರಿನ ಜಲಾಶಯ ವೃದ್ಧಿಸಲು ಒದಗಿಸಲಾಯಿತು. ಧಾರವಾಡ, ಹುಬ್ಬಳ್ಳಿ, ನವಲಗುಂದ, ಅಣ್ಣಿಗೇರಿ, ಬಸಾಪುರ, ಭದ್ರಾಪುರ, ಗದಗ, ಡಂಬಳ, ಕರಜಗಿ, ಹಾವೇರಿ, ದೇವಿಹೊಸೂರು ಮತ್ತು ರೋಣಗಳಲ್ಲಿ ವರ್ಷದ ಕೊನೆಯಲ್ಲಿ ಮಳೆ ಬಂದು ಜೋಳದ ಬೆಲೆಯು ರೂಪಾಯಿಗೆ 21 ಪೌಂ. ಇದ್ದುದು ರೂಪಾಯಿಗೆ 73 ಪೌಂ ಆಗಿ, ಬೆಲೆ ಇಳಿದಂತಾಯಿತು. ಮತ್ತು ಅಕ್ಕಿ ಬೆಲೆ ರೂ.ಗೆ 21 ಪೌಂಡಿನಿಂದ 39 ಪೌಂಡಿಗೆ ಇಳಿಯಿತು.

1876 ರಲ್ಲಿ ಅಕಾಲ ಮಳೆಯಿಂದಾಗಿ ಜಿಲ್ಲೆಯ 2/3 ಭಾಗದಷ್ಟು ಪ್ರದೇಶ ಅತಿವೃಷ್ಟಿಗೆ ಒಳಗಾಯಿತು. ಸರಾಸರಿ 31 ಇಂಚು ಮಳೆ ಬಿದ್ದು ಬೆಳೆ ಹಾಳಾಯಿತು. 1877-78 ರಲ್ಲಿ ಮಳೆ ಕೇವಲ 16 ಇಂಚು ಆಗಿದ್ದಿತು. ಜಿಲ್ಲೆಯ ಬ್ರಿಟೀಷ್ ಪ್ರದೇಶದಲ್ಲೇ 1877-88 ರಲ್ಲಿ 50,000 ಕ್ಕೂ ಮೇಲ್ಪಟ್ಟು ಜನ ಉಪವಾಸದಿಂದ ಸತ್ತರು. ಉತ್ತರ ಮತ್ತು ಪೂರ್ವ ಭಾಗದಲ್ಲಿ ಹೆಚ್ಚು ಹಾನಿಯಾಯಿತು. ಜೋಳದ ಬೆಲೆಯು ರೂಪಾಯಿಗೆ 43 ಪೌಂಡಿನಿಂದ 17 ಪೌಂಡಿಗೆ ಹೆಚ್ಚಾಯಿತು. 1877 ರ ಬೇಸಿಗೆಯಲ್ಲಿ ಬರವು ಹೆಚ್ಚಾಯಿತು. ನೇಕಾರರ ಉತ್ಪನ್ನಗಳಿಗೆ ಗ್ರಾಹಕರಿಲ್ಲದೆ ನೇಯ್ಗೆ ಕೈಗಾರಿಕೆ ತೀರ ಹಿಂಜರಿತ ಕಂಡಿತು. 1891-92 ರಲ್ಲಿ ಈಶಾನ್ಯ ಮಾರುತಗಳಿಂದ ಮಳೆ ಬರದಿದ್ದ ಕಾರಣ ಧಾರವಾಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಕ್ಷಾಮ ಉಂಟಾಯಿತು. ತಾತ್ಕಾಲಿಕ ಸಾಲಗಳನ್ನು ಆ ಕಾಲದಲ್ಲಿ ರೈತರಿಗೆ ಕೊಡಲಾಯಿತು.

ಪುನಃ 1896-97 ರಲ್ಲಿ ಕ್ಷಾಮವುಂಟಾಯಿತು. ಜುಲೈ ತಿಂಗಳಲ್ಲಿ ಅತಿ ಹೆಚ್ಚಿನ ಮಳೆಯಿಂದಾಗಿ ಖರೀಫ ಬೆಳೆಗಳಿ ಹಾನಿಯಾದವು. ಈ ಸಮಯದಲ್ಲಿ ರಸ್ತೆ ಕಾರ್ಯ, ರೈಲ್ವೆ ಕಾರ್ಯಗಳನ್ನು ಕೈಗೊಳ್ಳಲಾಯಿತು. 1897 ರ ಡಿಸೆಂಬರ್ ಹೊತ್ತಿಗೆ ಎಲ್ಲಾ ಪರಿಹಾರ ಕಾರ್ಯಗಳನ್ನು ನಿಲ್ಲಿಸಲಾಯಿತು. 1900-01, 1901-02, ಹಾಗೂ 1902-03 ರಲ್ಲಿ ಧಾರವಾಡ ಜಿಲ್ಲೆಯಲ್ಲಿ ಸ್ವಲ್ಪ ಮಟ್ಟಿಗೆ ಕ್ಷಾಮವಿತ್ತೆಂದು ತಿಳಿಯಲಾಗಿದೆ. 1920-21 ರಲ್ಲಿಯೂ ಕರ್ನಾಟಕದಲ್ಲಿ ಬರ ಉಂಟಾಗಿ ಧಾರವಾಡ ಜಿಲ್ಲೆಯಲ್ಲಿಯೂ ಇದ್ದಿತು. 1934-35 ರಲ್ಲಿ ಬೆಳೆಯಾಗದಿದ್ದ ಕಾರಣ ಮುಂಡರಗಿ ಪೇಟೆಯ 45 ಗ್ರಾಮಗಳು, ಗದಗ ತಾಲೂಕಿನ 3 ಗ್ರಾಮಗಳು, ನವಲಗುಂದ ತಾಲೂಕಿನ 13 ಗ್ರಾಮಗಳು, ನರಗುಂದ ಪೇಟೆಯ 19 ಗ್ರಾಮಗಳು, ಹೀಗೆ ಒಟ್ಟು 3,07,764 ಎಕರೆ ಪ್ರದೇಶದಲ್ಲಿ ಸುಮಾರು 62,000 ಜನಸಂಖ್ಯೆ, ಕ್ಷಾಮ ಪೀಡಿತವೆಂದು ಘೋಷಿಸಲಾಗಿತ್ತು. 1942-43 ರಲ್ಲಿ ಮಳೆ ಇಲ್ಲದ ಕಾರಣ, ನವಲಗುಂದದ 57 ಗ್ರಾಮಗಳು, ರೋಣ ತಾಲೂಕಿನ 86 ಗ್ರಾಮಗಳು, ಗದಗ ತಾಲೂಕಿನ 22 ಗ್ರಾಮಗಳು, ಹುಬ್ಬಳ್ಳಿ ತಾಲೂಕಿನ 21 ಗ್ರಾಮಗಳು ಮತ್ತು ಮುಂಡರಗಿ ತಾಲೂಕಿನ 13 ಗ್ರಾಮಗಳು, ಹೀಗೆ ಒಟ್ಟು 8,85,385 ಎಕರೆ ಪ್ರದೇಶದಲ್ಲಿನ ಸುಮಾರು 2,55,000 ಜನಸಂಖ್ಯೆ ಕ್ಷಾಮಕ್ಕೀಡಾಗಿದ್ದರು. ಪರಿಹಾರ ಕಾರ್ಯದಲ್ಲಿ ಧಾರವಾಡ ಜಿಲ್ಲೆಯಲ್ಲಿ ಮೇ 1943 ರಲ್ಲಿ 4,200 ಜನರಿಗೆ ತಾತ್ಕಾಲಿಕ ಉದ್ಯೋಗ ಕೊಡಲಾಯಿತು. ಮೇವನ್ನು ತರಿಸಿ, ರಿಯಾಯಿತಿ ದರದಲ್ಲಿ ಕೊಡಲಾಯಿತು. ಸರ್ಕಾರೇತರ ಸಮಿತಿಗಳು ವಂತಿಗೆಗಳನ್ನು ಪಡೆದು, ಬರಪೀಡಿತ ಪ್ರದೇಶಗಳಲ್ಲಿ ಆಹಾರ, ಬಟ್ಟೆಗಳನ್ನು ಕೊಟ್ಟು ದನಕರುಗಳ ಗೋಮಾಳಗಳನ್ನು ಸ್ಥಾಪಿಸಿದವು. 1941-43 ರಲ್ಲಿ ತೀವ್ರವಾಗಿ ಬರಪೀಡಿತವಾಗಿದ್ದ ಈ ಜಿಲ್ಲೆಯಲ್ಲಿ ಎರಡು ವರ್ಷಗಳ ನಂತರ, 1945 ರಲ್ಲಿ ಹೆಚ್ಚಿನ ಮಳೆಯ ಕಾರಣದಿಂದಾಗಿ ಹಿಂಗಾರು ಮತ್ತು ಮುಂಗಾರು ಬೆಳೆಗಳಿಗೆ ಹಾನಿಯಾಯಿತು. ಧಾರವಾಡ ತಾಲೂಕಿನ 33 ಗ್ರಾಮಗಳು, ಹುಬ್ಬಳ್ಳಿಯ 15 ಗ್ರಾಮಗಳು, ಹಾವೇರಿಯ 57 ಗ್ರಾಮಗಳು, ನವಲಗುಂದದ 57 ಗ್ರಾಮಗಳು, ರಾಣೆಬೆನ್ನೂರಿನ 67 ಗ್ರಾಮಗಳು, ರೋಣದ 86 ಗ್ರಾಮಗಳು, ನರಗುಂದದ 39 ಗ್ರಾಮಗಳು, ಒಟ್ಟು 10,89,905 ಎಕರೆಯಲ್ಲಿನ ಸುಮಾರು 4 ಲಕ್ಷ ಜನ ಸಂಖ್ಯೆ ಕ್ಷಾಮಪೀಡಿತವಾಗಿತ್ತು. ಪರಿಹಾರ ಕಾರ್ಯಕ್ಕಾಗಿ, ನೇಯ್ಗೆ ಕೇಂದ್ರಗಳನ್ನು ಅಖಿಲ ಭಾರತ ನೇಯ್ಗೆಯವರ ಸಂಘ ಕರ್ನಾಟಕ ಶಾಖೆಯ ವತಿಯಿಂದ ಸ್ಥಾಪಿಸಲಾಯಿತು. ಬಾಂಬೆ 'ಹುಮನೇಟೇರಿಯನ್ ಲೀಗ್'ನ ವತಿಯಿಂದ ಗೋಸಂರಕ್ಷಣಾ ಕೇಂದ್ರಗಳನ್ನು, ಧಾರವಾಡ ಜಿಲ್ಲೆ ಬರಪರಿಹಾರ ಸಮಿತಿಯಿಂದ ಉಚಿತ ಆಹಾರ, ವಿಟಮಿನ್ ಮಾತ್ರೆಗಳು, ತರಕಾರಿಗಳು, ಹಾಲು, ಕಾಳುಗಳು, ಮೊಟ್ಟೆ ಮೊದಲಾದವುಗಳನ್ನು ನೀಡಲಾಯಿತು.

1949 ರಲ್ಲಿ ನವಲಗುಂದದ 39 ಗ್ರಾಮಗಳು, ನರಗುಂದ ಪೇಟೆಯ 31 ಗ್ರಾಮಗಳು, ಮಳೆ ಇಲ್ಲದ ಕಾರಣ ಕ್ಷಾಮ ಪೀಡಿತವಾಗಿದ್ದವು. ಸುಮಾರು 2,30,000 ಎಕರೆ ಪ್ರದೇಶದಲ್ಲಿನ 62,875 ಜನಸಂಖ್ಯೆ ಇದರಿಂದ ಪೀಡಿತರಾಗಿದ್ದರು. ಮುಂಡರಗಿ ಸಾಮಾನ್ಯವಾಗಿ ಕಡಿಮೆ ಮಳೆಯ ಬರ ಸಂಭವ ತಾಲೂಕೆಂದು ಪರಿಗಣಿತವಾಗಿದೆ.

1982 ರಿಂದ 1985 ರ ವರೆಗಿನ ವರ್ಷಗಳಲ್ಲಿ ತೀವ್ರ ಬರಗಾಲ ಪರಿಸ್ಥಿತಿಯ ಮೇರೆ, ಧಾರವಾಡ ಜಿಲ್ಲೆಯಲ್ಲಿ ವರ್ಗೀಕರಿಸಲಾದ ತಾಲೂಕುಗಳ ಸಂಖ್ಯೆ.

| | ಮುಂಗಾರು | | | | ಹಿಂಗಾರು | | | |
|---|---|---|---|---|---|---|---|---|
| | 1982 | 1983 | 1984 | 1985 | 1982 | 1983 | 1984 | 1985 |
| | (ತಾಲೂಕುಗಳ ಸಂಖ್ಯೆ) | | | | (ತಾಲೂಕುಗಳ ಸಂಖ್ಯೆ) | | | |
| ತೀವ್ರ ಬರಗಾಲ | - | - | - | 3 | 2 | 6 | 2 | 11 |
| ಸಾಧಾರಣ ಬರಗಾಲ | 1 | 1 | 3 | 9 | 1 | 8 | 7 | 3 |
| ಕಡಿಮೆ ಬರಗಾಲ | 4 | 2 | 3 | 2 | 3 | 2 | 4 | - |
| ಬರಪೀಡಿತ ತಾಲೂಕುಗಳ ಸಂಖ್ಯೆ | 5 | 3 | 6 | 14 | 6 | 16 | 13 | 14 |

(ಆಧಾರ - ಬರದ ವಿರುದ್ಧ ಕರ್ನಾಟಕದ ಸಮರ 1985-86 ಅನುಬಂಧ೩)

**ಅತಿವೃಷ್ಟಿ :** 1988-89 ರಲ್ಲಿ ಉಂಟಾದ ವಿಪರೀತ ಮಳೆಯಿಂದ ಜಿಲ್ಲೆಯಲ್ಲಿ ತೀವ್ರ ಹಾನಿಯಾಯಿತು. ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 700.8 ಮಿ.ಮೀ. ಏಪ್ರಿಲ್ 89 ರಿಂದ ಜುಲೈ ವರೆಗೆ 254 ಮಿ.ಮೀ. ಮಳೆ ಆಗಿದ್ದಿತು. ಜೂನ್ ಮತ್ತು ಜುಲೈನಲ್ಲಿ ಮಾತ್ರ 202 ಮಿ.ಮೀ. ಮಳೆ ಆಗಿದ್ದರಿಂದ ಪ್ರವಾಹ (ಮಹಾಪೂರ) ಉಂಟಾಯಿತು. ಜುಲೈ 6 ರಂದು ಸಾಧಾರಣ ಮಳೆಯ ಶೇ.127 ರಿಂದ 251 ರಷ್ಟು ಮಳೆಯು ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಬಿದ್ದಿತು. ಈ ಪ್ರವಾಹದಲ್ಲಿ 22 ಗ್ರಾಮಗಳು ಹಾನಿಗೊಳಪಟ್ಟವು. 141 ಮನೆಗಳು ನಾಶವಾಗಿ, ಸುಮಾರು 1.36 ಲಕ್ಷ ರೂ. ನಷ್ಟವಾಯಿತು. ಸುಮಾರು 1 ಲಕ್ಷ ರೂ. ಮೌಲ್ಯದ 189 ದನಕರುಗಳು ನಾಶವಾದವು ಮತ್ತು 500 ಎಕರೆಗಿಂತಲೂ ಹೆಚ್ಚು ಬೆಳೆಯುವ ಜಮೀನು ಹಾನಿಗೊಳಪಟ್ಟು ಸುಮಾರು 5.05 ಲಕ್ಷ ರೂ ನಷ್ಟವಾಗಿದ್ದಿತು. 1,235 ಎಕರೆ ಪ್ರದೇಶವು ಭೂ ಕುಸಿತದಿಂದ ಹಾನಿಗೊಳಪಟ್ಟು, 6.36 ಲಕ್ಷ ರೂ ನಷ್ಟ ಉಂಟಾಯಿತು. ಸಾರ್ವಜನಿಕರ ಆಸ್ತಿ ಪಾಸ್ತಿಗಳಾದ, ರಸ್ತೆ, ಭಾವಿ, ಕೆರೆ, ವಿದ್ಯುತ್ ಪಂಪು, ಮೊದಲಾದವುಗಳಿಗೆ ಆದ ನಷ್ಟ ಸುಮಾರು 3.10 ಲಕ್ಷ ರೂ. ಒಟ್ಟು ನಷ್ಟವನ್ನು ರೂ.15.97 ಲಕ್ಷ ರೂ. ಎಂದು ಅಂದಾಜು ಮಾಡಲಾಗಿತ್ತು. ಈ ಜಿಲ್ಲೆಯಲ್ಲಿ ನವೆಂಬರ್‌ನಲ್ಲಿ ಸಾಧಾರಣ ಮಳೆಯ ಪ್ರಮಾಣ 39.2 ಮಿ.ಮೀ, ಆದರೆ 1992 ನವೆಂಬರ್‌ನಲ್ಲಿ ಬಿದ್ದ ಮಳೆ 242 ಮಿ.ಮೀ. ಆಗಿದ್ದು ಇದು ಸುಮಾರು 6 ಪಟ್ಟು ಹೆಚ್ಚಾಗಿತ್ತು. ತಾಲೂಕುಗಳಲ್ಲಿನ ಮಳೆಯ ವಿವರ ಹೀಗಿದೆ. ಬ್ಯಾಡಗಿ 417 ಮಿ.ಮೀ, ರಾಣೆಬೆನ್ನೂರು 398 ಮಿ.ಮೀ., ಹಾವೇರಿ 324 ಮಿ.ಮೀ., ಶಿರಹಟ್ಟಿ 315 ಮಿ.ಮೀ., ಹಿರೇಕೆರೂರು 267 ಮಿ.ಮೀ., ಸವಣೂರು 259 ಮಿ.ಮೀ., ಮುಂಡರಗಿ 250 ಮಿ.ಮೀ., ಶಿಗ್ಗಾಂವಿ 245 ಮಿ.ಮೀ., ಹುಬ್ಬಳ್ಳಿ 242 ಮಿ.ಮೀ., ಹಾನಗಲ್ 229 ಮಿ.ಮೀ., ಗದಗ 196 ಮಿ.ಮೀ, ಕಲಘಟಗಿ 192 ಮಿ.ಮೀ., ಹಾಗೂ ರೋಣ 152 ಮಿ.ಮೀ. ಇದರಿಂದಾಗಿ 17 ತಾಲೂಕಿನ 1157 ಗ್ರಾಮಗಳಲ್ಲಿನ 16.75 ಲಕ್ಷ ಜನರಿಗೆ ತೀವ್ರವಾದ ಹಾನಿಯಾಗಿತ್ತು; ಮತ್ತು 6,898 ಮನೆಗಳು ಸಂಪೂರ್ಣವಾಗಿ ನಾಶವಾದುದಲ್ಲದೆ, 58,256 ಮನೆಗಳು ಭಾಗಶಃ ನಾಶವಾದವು. ಒಟ್ಟು ನಷ್ಟವನ್ನು ರೂ.6.26 ಕೋಟಿ ಎಂದು ಅಂದಾಜು ಮಾಡಲಾಗಿದೆ.

ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳು ತುಂಗಭದ್ರಾ ನದಿಗಳ ಜಲಾನಯನ ಪ್ರದೇಶದಲ್ಲಿವೆ. ಈ ಜಿಲ್ಲೆಗಳಲ್ಲೂ ಹೆಚ್ಚು ಮಳೆ ಬಿದ್ದಾಗ ಈ ನದಿ ಮತ್ತು ತುಂಗಭದ್ರಾ ನದಿಯ ಪ್ರವಾಹದಿಂದಾಗಿ, ಮುಂಡರಗಿಯ 4 ಗ್ರಾಮಗಳು, ರಾಣೆಬೆನ್ನೂರಿನ 3 ಗ್ರಾಮಗಳು ಮತ್ತು ಹಾವೇರಿಯ 9 ಗ್ರಾಮ ಜಲಾವೃತವಾದವು. ರಾಣೆಬೆನ್ನೂರಿನ ಚಂದಾಪುರ ಗ್ರಾಮವು ಸಂಪೂರ್ಣವಾಗಿ ಜಲಾವೃತವಾಗಿದ್ದಿತು. ಜಿಲ್ಲೆಯಲ್ಲಿ 18 ಜನ ಪ್ರಾಣ ಕಳೆದುಕೊಂಡರೆ 16,788 ಜಾನುವಾರುಗಳು ನಾಶವಾದವು. ಸುಮಾರು 0.57 ಲಕ್ಷ ಹೆಕ್ಟೇರಿನಷ್ಟು ಪ್ರದೇಶದಲ್ಲಿ ಬೆಳೆದುನಿಂತ ಕಬ್ಬು, ಹತ್ತಿ, ಗೋದಿ, ಸೂರ್ಯಕಾಂತಿ, ಕಡಲೆ ಬೆಳೆಗಳು ನಾಶವಾದವು. ನಾಶವಾದ ಬೆಳೆಯ ಅಂದಾಜು ಬೆಲೆ ರೂ.16.03 ಕೋಟಿ. ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಉಂಟಾದ ನಷ್ಟ ಸುಮಾರು 11 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ.

## ಕೆಲಸಗಾರರು

ವರ್ಷದಲ್ಲಿ 183 ದಿನಕ್ಕೂ ಹೆಚ್ಚಿನ ದಿನ ಉದ್ಯೋಗ ಹೊಂದಿರುವವರು ಕೆಲಸಗಾರರು. ಒಂದು ಜಿಲ್ಲೆಯಲ್ಲಿನ ಕೆಲಸಗಾರರ ಸಂಖ್ಯೆಯು, ಜಿಲ್ಲೆಯಲ್ಲಿನ ಬಳಕೆ ವಸ್ತುಗಳ ಉತ್ಪನ್ನದ ಮೇಲೆ ಪರಿಣಾಮ ಬೀರುವುದರಿಂದ, ಕೆಲಸಗಾರರ ಸಂಖ್ಯೆಯು, ಮತ್ತು ಕೆಲಸಗಾರರ ಬಗ್ಗೆ ವಿವರಣೆಗಳ ಅಧ್ಯಯನ ಅತ್ಯವಶ್ಯ. 1951 ರಲ್ಲಿ 15,75,386 ಜನಸಂಖ್ಯೆಯಲ್ಲಿ 4,63,007 ಜನ ಸ್ವಂತ ಉದ್ಯೋಗ ಮಾಡುತ್ತಿದ್ದವರಾಗಿದ್ದು 2,26,308 ಜನ ದುಡಿಯುವವರಿಗೆ ನೆರವಾಗುವ ಅವಲಂಬಿತರಾಗಿದ್ದು 8,85,981 ಜನ ದುಡಿಯದೇ ಇರುವ ಅವಲಂಬಿತರಾಗಿದ್ದರು. ಕೃಷಿ ಆಧಾರಿತ ಕೆಲಸಗಾರರು 10,38,312, ಸ್ವಂತ ಭೂಮಿ ಕೃಷಿ ಮಾಡುವವರು 6,05,698, ಇತರರ ಭೂಮಿ ಕೃಷಿ ಮಾಡುವ ಕೃಷಿ ಕಾರ್ಮಿಕರು 2;85,227, ಕೃಷಿ ಕೆಲಸ ಮಾಡದಿರುವ ಭೂಮಾಲಿಕರು 55,081 ಮತ್ತು ಕೃಷಿಯೇತರ ಕೆಲಸಗಾರರು 4,87,074. 1971 ರ ಜನಗಣತಿಯಲ್ಲಿ ಕೆಲಸಗಾರರು ಹಾಗೂ ಕೆಲಸಗಾರರಲ್ಲದವರ ವಿವರಗಳನ್ನೊಳಗೊಂಡ ಪಟ್ಟಿಯನ್ನು ಇಲ್ಲಿ ಕೊಡಲಾಗಿದೆ. (ಕೋಷ್ಟಕ 8.22, ಮುಂದಿನ ಪುಟದಲ್ಲಿ)

1971 ರಲ್ಲಿ ಜಿಲ್ಲೆಯಲ್ಲಿ ಮುಖ್ಯ ಕೆಲಸಗಾರರು ಒಟ್ಟು ಕೆಲಸಗಾರರ ಶೇ.37.98 ಇದ್ದು ರಾಜ್ಯದ ಸರಾಸರಿ ಸಂಖ್ಯೆಗಿಂತಲೂ ಹೆಚ್ಚಿದ್ದಿತು. ಆದರೆ, ಬೇರೆ ಬೇರೆ ತಾಲೂಕುಗಳಲ್ಲಿ ಗ್ರಾಮೀಣ ಮತ್ತು ಪಟ್ಟಣದ ಘಟಕಗಳಲ್ಲಿ ಕೆಲಸಗಾರರ ಸಂಖ್ಯೆಗಳಲ್ಲಿ ಗಮನೀಯ ಬದಲಾವಣೆ ಇದ್ದಿತು. ಹುಬ್ಬಳ್ಳಿ ಪಟ್ಟಣ ಪ್ರದೇಶದಲ್ಲಿ ಮುಖ್ಯ ಕೆಲಸಗಾರರು ಶೇ.27.88 ಇದ್ದರೆ, ಗದಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ 46.21 ಇದ್ದಿತು. ಕಲಘಟಗಿ ತಾಲೂಕಿನ ಕೆಲಸಗಾರರಲ್ಲಿ ಗಂಡಸರ ಸಂಖ್ಯೆಯ ಗರಿಷ್ಠ ಶೇ. 59.43 ಇದ್ದರೆ ಹುಬ್ಬಳ್ಳಿ ಪಟ್ಟಣದ ಕೆಲಸಗಾರರಲ್ಲಿ ಗಂಡಸರ ಸಂಖ್ಯೆ ಶೇ. 45.83 ಇದ್ದಿತು. ಮತ್ತು ಮಹಿಳಾ ಕೆಲಸಗಾರರಲ್ಲಿ ಧಾರವಾಡ ಪಟ್ಟಣ ಪ್ರದೇಶದಲ್ಲಿ ಕನಿಷ್ಠ 7.72 ಇದ್ದು ಗದಗ ತಾಲೂಕು ಗ್ರಾಮೀಣ ಪ್ರದೇಶದಲ್ಲಿ ಗರಿಷ್ಠ 35.76 ಇದ್ದಿತು. ಮುಖ್ಯ ಕೆಲಸಗಾರರ ಸಂಖ್ಯೆಗಳನ್ನು ತಾಲೂಕುವಾರು, ಗಮನಿಸಿದಾಗ ಹುಬ್ಬಳ್ಳಿ ತಾಲೂಕಿನಲ್ಲಿ ಶೇ. 29.79 ಇದ್ದು, ಕುಂದಗೋಳ ತಾಲೂಕಿನಲ್ಲಿ ಶೇ. 44.81 ಇದ್ದಿತು. ಈ ಎರಡೂ ತಾಲೂಕುಗಳು ಅಕ್ಕಪಕ್ಕದಲ್ಲಿದ್ದರೂ, ಈ ರೀತಿಯ ವ್ಯತ್ಯಾಸಕ್ಕೆ ನಗರೀಕರಣ ಹಾಗೂ ಕೈಗಾರೀಕರಣ ಕಾರಣವಾಗಿರಬಹುದು. ಮುಖ್ಯ ಕೆಲಸಗಾರರ ಸಂಖ್ಯೆಯಲ್ಲಿ ಹುಬ್ಬಳ್ಳಿಯೂ ಸೇರಿದಂತೆ, ಬೇರೆ ಎರಡು ತಾಲೂಕುಗಳು (ಹಿರೇಕೆರೂರು 36.97 ಮತ್ತು ಕಲಘಟಗಿ ಶೇ. 37.64) ಸರಾಸರಿ ಪ್ರಮಾಣಕ್ಕಿಂತ ಕಡಿಮೆ ಇದ್ದಿತು. ಮುಂಡರಗಿಯಲ್ಲಿ ಕೆಲಸಗಾರರ ಸಂಖ್ಯೆ 44.09 ನವಲಗುಂದ ಶೇ.42.57 ಗದಗ ಮತ್ತು ರಾಣೆಬೆನ್ನೂರು ತಾಲೂಕುಗಳ ಪಟ್ಟಣಪ್ರದೇಶದಲ್ಲಿ ಕಾರ್ಮಿಕ ಆಧಾರಿತ ಕೈಗಾರಿಕೆಗಳಾದ ಹತ್ತಿ ಶುದ್ಧೀಕರಣ, ಸಂಸ್ಕರಣ ಮತ್ತು ಕೈಮಗ್ಗ ಇವು ಮುಖ್ಯವಾದವುಗಳು. ತಾಲೂಕುಗಳ ಗ್ರಾಮೀಣ ಪ್ರದೇಶಗಳಲ್ಲಿ ಔದ್ಯಮಿಕ ದೃಷ್ಟಿಯಿಂದ ಗದಗ ತಾಲೂಕು ಉನ್ನತಸ್ಥಾನದಲ್ಲಿದ್ದಿತು. ತಾಲೂಕುಗಳನ್ನು ಪ್ರತ್ಯೇಕವಾಗಿ ಪರಿಗಣಿಸಿದಾಗ, ಕುಂದಗೋಳ ತಾಲೂಕು ಮುಖ್ಯ ಕೆಲಸಗಾರರಲ್ಲಿ 2 ನೇ ಸ್ಥಾನ ಹೊಂದಿದೆ. ಪಟ್ಟಣ ಪ್ರದೇಶಗಳಲ್ಲಿ ಮುಖ್ಯ ಕೆಲಸಗಾರರ ಸಂಖ್ಯೆ ಅತಿ ಹೆಚ್ಚು ಇದ್ದಿತು; ಮತ್ತು ಹುಬ್ಬಳ್ಳಿಯಲ್ಲಿ ಕಡಿಮೆ ಇದ್ದಿತು. (ಕುಂದಗೋಳ ಶೇ.42.5, ಹುಬ್ಬಳ್ಳಿ 37.88, ಗದಗ ಮತ್ತು ರಾಣೆಬೆನ್ನೂರು ತಾಲೂಕುಗಳಲ್ಲಿ ಈ ಸಂಖ್ಯೆಯು ಮುಂಡರಗಿ, ಶಿಗ್ಗಾಂವಿ ಮತ್ತು ಬ್ಯಾಡಗಿ ತಾಲೂಕುಗಳಿಗಿಂತಲೂ ಕಡಿಮೆ ಇದ್ದಿತು).

ಪುರುಷ ಕೆಲಸಗಾರರು ಮತ್ತು ಸ್ತ್ರೀ ಕೆಲಸಗಾರರು ಒಟ್ಟು ಕೆಲಸಗಾರರ ಸಂಖ್ಯೆಯ ಶೇ.54.24 ಮತ್ತು 20.84 ಇದ್ದು, ಇದು ರಾಜ್ಯದ ಶೇಕಡಾ ಸಂಖ್ಯೆ 53.90 ಮತ್ತು 18.95 ಕ್ಕಿಂತಲೂ ಹೆಚ್ಚಿದ್ದಿತು. ಪುರುಷ ಮತ್ತು ಸ್ತ್ರೀ ಕೆಲಸಗಾರರ ಪ್ರಮಾಣ 5:2 ಇದ್ದಿತು. ಜಿಲ್ಲೆಯಲ್ಲಿ ಹುಬ್ಬಳ್ಳಿ ತಾಲೂಕನ್ನು ಹೊರತುಪಡಿಸಿ, ಎಲ್ಲಾ ತಾಲೂಕುಗಳಲ್ಲಿಯು ಶೇ.50 ಕ್ಕಿಂತಲೂ ಹೆಚ್ಚು ಮುಖ್ಯ ಕೆಲಸಗಾರರಿದ್ದರು. (ಕಲಘಟಗಿ ಶೇ. 58.82; ಹುಬ್ಬಳ್ಳಿ 47.49).

ಸ್ತ್ರೀ ಕೆಲಸಗಾರರಲ್ಲಿ ಮುಖ್ಯ ಕೆಲಸಗಾರರ ಸಂಖ್ಯೆ ತಾಲೂಕುಗಳಂತೆ ಗಣಿಸಿದಾಗ ಶೇ. 10.52 ಇರುವ ಹುಬ್ಬಳ್ಳಿಯಲ್ಲಿ ಕನಿಷ್ಟ ಮತ್ತು ಶೇ. 31.17 ಇರುವ ಮುಂಡರಗಿಯಲ್ಲಿ ಗರಿಷ್ಟ ಇದ್ದಿತು. ಗ್ರಾಮೀಣ ಪ್ರದೇಶವನ್ನು ಪರಿಗಣಿಸಿದಾಗ ಕೆಲಸಗಾರರ ಸಂಖ್ಯೆಯು ಗದಗ ತಾ॥ ನಲ್ಲಿ ಗರಿಷ್ಟ (ಶೇ. 35.76) ಮತ್ತು ಮುಂಡರಗಿ ತಾ॥ ನಲ್ಲಿ ಕನಿಷ್ಟ (ಶೇ.32.79) ಇದ್ದಿತು. ಜಿಲ್ಲೆಯ ಎಲ್ಲಾ ಗ್ರಾಮೀಣ ಪ್ರದೇಶಗಳಲ್ಲಿಯೂ, ಕೃಷಿಯು ಪ್ರಮುಖ ಆರ್ಥಿಕ ಚಟುವಟಿಕೆ ಆಗಿದೆ. ಆದರೆ, ಬೇಸಾಯದ ವಿಧಾನಗಳು ಬೇರೆ ಆಗಿರುವುದರಿಂದ,

ಸ್ತ್ರೀ ಕೆಲಸಗಾರರ ಚಟುವಟಿಕೆಯು ವ್ಯತ್ಯಾಸವಾಗಿದೆ. ಪೂರ್ವ ಮತ್ತು ಮಧ್ಯ ಭಾಗಗಳಲ್ಲಿ ಹೆಚ್ಚು ಸ್ತ್ರೀ ಕೆಲಸಗಾರರು, ಕೆಲಸಗಾರರೆಂದು ಗುರುತಿಸಿಕೊಂಡಿದ್ದಾರೆ. ಕೆಲವು ಜಾತಿಗಳಲ್ಲಿ ಸ್ತ್ರೀಯರೇ ದುಡಿಮೆಗಾರರಾಗಿರುವುದು ಕಂಡುಬಂದಿದೆ.

**ಸೀಮಾಂತ ಕೆಲಸಗಾರರು :** ಸೀಮಾಂತ ಅಥವಾ ಮಾರ್ಜಿನಲ್ ಕೆಲಸಗಾರರು (ವರ್ಷದಲ್ಲಿ ಆರು ತಿಂಗಳಿಗೂ ಕಡಿಮೆ ಕೆಲಸ ಹೊಂದಿರುವವರು) ಕೆಲಸಗಾರರ ಒಟ್ಟು ಜನ ಸಂಖ್ಯೆಯ ಶೇ. 3.74 ಇದ್ದರು (ರಾಜ್ಯದ ಸಂಖ್ಯೆ ಶೇ. 3.48). ಸ್ತ್ರೀ ಕೆಲಸಗಾರರು ಈ ಘಟಕದಲ್ಲಿ ಹೆಚ್ಚಿದ್ದರು. ಈ ವರ್ಗದ ಪ್ರತೀ ಇಬ್ಬರು ಪುರುಷ ಕೆಲಸಗಾರರಿಗೆ 15 ಸ್ತ್ರೀ ಕೆಲಸಗಾರರಿದ್ದುದು ಕಂಡುಬಂದಿದೆ. ಜಿಲ್ಲೆಯ 9 ತಾಲೂಕುಗಳಲ್ಲಿ, ಮಹಿಳಾ ಕೆಲಸಗಾರರ ಸಂಖ್ಯೆ ಜಿಲ್ಲೆಯ ಸರಾಸರಿ ಸಂಖ್ಯೆಗಿಂತಲೂ ಕಡಿಮೆ ಇದ್ದಿತು.

**ಕೆಲಸಗಾರರಲ್ಲದವರು :** ವರ್ಷದ ಯಾವುದೇ ಕಾಲದಲ್ಲಿ ಯಾವ ಆರ್ಥಿಕ ಚಟುವಟಿಕೆಗೆ ಸಂಬಂಧಪಟ್ಟ ಕೆಲಸ ಮಾಡದಿರುವವರನ್ನು ಕೆಲಸಗಾರರಲ್ಲದವರೆಂದು ಪರಿಗಣಿಸಲಾಗಿದೆ. ಇವರ ಸಂಖ್ಯೆ ಜಿಲ್ಲೆಯಲ್ಲಿ ಶೇ.52.28 ಇದ್ದಿತು. ಮತ್ತು ಗ್ರಾಮೀಣ ಪ್ರದೇಶದಲ್ಲಿ ಇವರ ಸಂಖ್ಯೆ ಹೆಚ್ಚಿದ್ದಿತು. ಒಟ್ಟು ಜನಸಂಖ್ಯೆಯಲ್ಲಿ ಗಂಡಸರಲ್ಲಿ ಶೇ. 44.90 ಮತ್ತು ಹೆಂಗಸರಲ್ಲಿ ಶೇ. 72.37 ಜನರು ಈ ಗುಂಪಿಗೆ ಸೇರಿದವರಾಗಿದ್ದರು.

**ಕೋಷ್ಟಕ 8.22 : ಧಾರವಾಡ ಜಿಲ್ಲೆಯಲ್ಲಿ ಕೆಲಸಗಾರರು ಮತ್ತು ಕೆಲಸಗಾರರಲ್ಲದವರ ಶೇಕಡಾ (ಒಟ್ಟು ಜನ ಸಂಖ್ಯೆ) 1981 ರಲ್ಲಿದ್ದಂತೆ.**

| ತಾಲೂಕು | | ಕೆಲಸಗಾರರು (ಒಟ್ಟು ಜನಸಂಖ್ಯೆಯ ಶೇಕಡಾ) | | | ಕೆಲಸಗಾರರಲ್ಲದವರು | | |
|---|---|---|---|---|---|---|---|
| | | ಗಂ. | ಹೆಂ. | ಒಟ್ಟು | ಗಂ. | ಹೆಂ. | ಒಟ್ಟು |
| ಬ್ಯಾಡಗಿ | ಒಟ್ಟು | 57.51 | 25.18 | 41.83 | 42.49 | 74.82 | 58.17 |
| | ಗ್ರಾ | 58.92 | 26.54 | 43.23 | 41.08 | 73.46 | 56.77 |
| | ಪ | 51.55 | 19.47 | 35.92 | 48.45 | 80.53 | 64.08 |
| ಧಾರವಾಡ | ಒಟ್ಟು | 58.10 | 28.03 | 43.37 | 41.90 | 71.97 | 56.63 |
| | ಗ್ರಾ | 58.49 | 29.30 | 44.18 | 41.51 | 70.70 | 55.82 |
| | ಪ | 53.72 | 13.51 | 34.25 | 46.28 | 86.29 | 65.75 |
| ಗದಗ | ಒಟ್ಟು | 53.61 | 31.17 | 42.60 | 46.39 | 68.83 | 57.40 |
| | ಗ್ರಾ | 57.58 | 45.66 | 51.67 | 42.42 | 54.34 | 48.33 |
| | ಪ | 49.99 | 17.43 | 34.18 | 50.01 | 82.57 | 65.82 |
| ಹಾನಗಲ್ | ಒಟ್ಟು | 58.65 | 22.63 | 41.29 | 41.35 | 77.37 | 58.71 |
| | ಗ್ರಾ | 59.07 | 23.93 | 42.15 | 40.93 | 76.07 | 57.85 |
| | ಪ | 54.84 | 11.14 | 33.51 | 45.16 | 88.86 | 66.49 |
| ಹಾವೇರಿ | ಒಟ್ಟು | 57.73 | 32.42 | 45.45 | 42.27 | 67.58 | 54.55 |
| | ಗ್ರಾ | 59.90 | 37.76 | 49.16 | 40.10 | 62.24 | 50.87 |
| | ಪ | 49.15 | 10.86 | 30.74 | 50.85 | 89.14 | 69.26 |
| ಹಿರೇಕೆರೂರು | ಒಟ್ಟು | 57.82 | 25.49 | 42.18 | 42.18 | 74.51 | 57.82 |
| | ಗ್ರಾ | 58.24 | 26.24 | 42.74 | 41.76 | 73.76 | 57.26 |
| | ಪ | 51.61 | 14.20 | 33.81 | 48.39 | 85.80 | 66.19 |

| ತಾಲೂಕು | | ಕೆಲಸಗಾರರು | | | ಕೆಲಸಗಾರರಲ್ಲದವರು | | |
|---|---|---|---|---|---|---|---|
| | | (ಒಟ್ಟು ಜನಸಂಖ್ಯೆಯ ಶೇಕಡಾ) | | | | | |
| | | ಗಂ. | ಹೆಂ. | ಒಟ್ಟು | ಗಂ. | ಹೆಂ. | ಒಟ್ಟು |
| ಹುಬ್ಬಳ್ಳಿ | ಒಟ್ಟು | 47.99 | 11.82 | 30.67 | 52.01 | 68.18 | 69.33 |
| | ಗ್ರಾ | 57.43 | 27.53 | 42.82 | 42.57 | 72.47 | 57.18 |
| | ಪ | 46.29 | 8.86 | 28.44 | 53.71 | 91.14 | 21.56 |
| ಕಲಘಟಗಿ | ಒಟ್ಟು | 59.49 | 28.76 | 44.59 | 40.51 | 71.24 | 55.41 |
| | ಗ್ರಾ | 60.11 | 30.91 | 45.98 | 39.89 | 69.09 | 54.02 |
| | ಪ | 54.49 | 11.86 | 33.48 | 45.51 | 88.14 | 66.52 |
| ಕುಂದಗೋಳ | ಒಟ್ಟು | 58.72 | 39.50 | 49.31 | 41.28 | 60.50 | 50.69 |
| | ಗ್ರಾ | 59.00 | 40.67 | 50.02 | 41.00 | 59.33 | 49.98 |
| | ಪ | 56.50 | 30.31 | 43.69 | 43.50 | 69.69 | 56.31 |
| ಮುಂಡರಗಿ | ಒಟ್ಟು | 57.09 | 36.91 | 47.15 | 42.91 | 63.09 | 52.85 |
| | ಗ್ರಾ | 57.92 | 38.61 | 48.40 | 42.08 | 61.39 | 51.60 |
| | ಪ | 52.61 | 27.60 | 40.35 | 47.39 | 72.40 | 59.65 |
| ನರಗುಂದ | ಒಟ್ಟು | 57.89 | 37.53 | 47.72 | 42.11 | 62.47 | 52.28 |
| | ಗ್ರಾ | 59.09 | 43.56 | 51.28 | 40.91 | 56.44 | 48.72 |
| | ಪ | 55.64 | 25.80 | 40.91 | 44.36 | 74.20 | 59.09 |
| ನವಲಗುಂದ | ಒಟ್ಟು | 57.56 | 38.98 | 48.36 | 42.44 | 61.12 | 51.64 |
| | ಗ್ರಾ | 59.11 | 43.25 | 51.22 | 40.89 | 56.75 | 48.78 |
| | ಪ | 52.95 | 25.87 | 39.72 | 67.05 | 74.13 | 60.28 |
| ರಾಣೆಬೆನ್ನೂರು | ಒಟ್ಟು | 56.43 | 32.57 | 44.90 | 43.57 | 67.43 | 55.10 |
| | ಗ್ರಾ | 58.64 | 37.53 | 48.43 | 41.36 | 62.47 | 51.57 |
| | ಪ | 50.32 | 18.84 | 35.13 | 49.68 | 81.16 | 64.87 |
| ರೋಣ | ಒಟ್ಟು | 55.84 | 40.31 | 48.00 | 44.16 | 59.69 | 52.00 |
| | ಗ್ರಾ | 56.87 | 43.14 | 49.88 | 43.13 | 56.86 | 50.12 |
| | ಪ | 53.03 | 32.08 | 42.71 | 46.97 | 67.92 | 57.92 |
| ಸವಣೂರು | ಒಟ್ಟು | 56.47 | 30.29 | 43.80 | 43.53 | 69.71 | 56.20 |
| | ಗ್ರಾ | 57.19 | 35.76 | 46.82 | 42.81 | 64.24 | 53.18 |
| | ಪ | 54.16 | 12.97 | 34.20 | 45.84 | 87.03 | 65.80 |
| ಶಿಗ್ಗಾಂವಿ | ಒಟ್ಟು | 57.67 | 27.06 | 42.86 | 42.33 | 72.94 | 57.14 |
| | ಗ್ರಾ | 57.97 | 28.07 | 43.50 | 42.03 | 71.93 | 56.50 |
| | ಪ | 55.54 | 19.87 | 38.29 | 44.46 | 80.13 | 61.71 |
| ಶಿರಹಟ್ಟಿ | ಒಟ್ಟು | 56.22 | 32.57 | 44.63 | 43.78 | 67.43 | 55.37 |
| | ಗ್ರಾ | 57.71 | 35.50 | 46.80 | 42.29 | 64.50 | 53.20 |

| ತಾಲೂಕು | | ಕೆಲಸಗಾರರು | | | ಕೆಲಸಗಾರರಲ್ಲದವರು | | |
|---|---|---|---|---|---|---|---|
| | | (ಒಟ್ಟು ಜನಸಂಖ್ಯೆಯ ಶೇಕಡಾ) | | | | | |
| | | ಗಂ. | ಹೆಂ. | ಒಟ್ಟು | ಗಂ. | ಹೆಂ. | ಒಟ್ಟು |
| | ಪ | 51.39 | 24.87 | 39.01 | 67.61 | 75.13 | 60.99 |
| ಒಟ್ಟು | ಒಟ್ಟು | 55.10 | 27.63 | 41.72 | 44.90 | 72.37 | 58.28 |
| | ಗ್ರಾ | 58.43 | 34.66 | 46.79 | 41.57 | 65.34 | 53.21 |
| | ಪ | 49.06 | 14.50 | 32.41 | 50.94 | 85.50 | 67.50 |

(ಆಧಾರ : ಜನಗಣತಿ 1981)

ಕೋಷ್ಟಕ 8.23 ಮುಂದಿನ ಪುಟದಲ್ಲಿ

**ಕೋಷ್ಟಕ 8.24 : ಧಾರವಾಡ ಜಿಲ್ಲೆಯಲ್ಲಿ ಕೆಲಸಗಾರರು ಮತ್ತು ಕೆಲಸಗಾರರಲ್ಲದವರಲ್ಲಿ ವಲಸೆ ಬಂದವರ ಶೇಕಡಾ (1971 ರ ಜನಗಣತಿಯಂತೆ).**

| | ವಿವರ | ಗಂಡಸರು | ಹೆಂಗಸರು |
|---|---|---|---|
| 1 | ಒಟ್ಟು ಕೆಲಸಗಾರರು | 56.54 | 19.97 |
| 2 | ವ್ಯವಸಾಯಗಾರರು | 13.00 | 2.53 |
| 3 | ಕೃಷಿ ಕೆಲಸಗಾರರು | 14.21 | 14.00 |
| 4 | ಜಾನುವಾರು, ಅರಣ್ಯ ಮೀನುಗಾರಿಕೆ ಸಂಬಂಧಪಟ್ಟ ಕೆಲಸಗಾರರು | 1.42 | 0.12 |
| 5 | ಗಣಿ ಕೆಲಸಗಾರರು | 0.18 | 0.06 |
| 6 | ತಯಾರು ಮಾಡುವಿಕೆ ಸೇವಾ, ದುರಸ್ತಿ ಕೆಲಸಗಳು. | | |
| | ಎ) ಗೃಹ ಕೈಗಾರಿಕೆ | 2.97 | 0.83 |
| | ಬಿ) ಗೃಹ ಕೈಗಾರಿಕೆ ಅಲ್ಲದ್ದು | 3.50 | 0.51 |
| 7 | ನಿರ್ಮಾಣ(ಕಟ್ಟಣೆ) ಕೆಲಸಗಾರರು | 1.04 | 0.13 |
| 8 | ವಾಣಿಜ್ಯ ಮತ್ತು ವ್ಯಾಪಾರ | 7.67 | 0.56 |
| 9 | ಸಾರಿಗೆ ಮತ್ತು ಸಂಪರ್ಕ | 3.76 | 0.17 |
| 10 | ಇತರೆ ಸೇವೆಗಳು | 8.79 | 1.06 |
| 11 | ಕೆಲಸಗಾರರಲ್ಲದವರು | 43.46 | 80.03 |

(ಆಧಾರ : 1971 ಜನಗಣತಿ)

ಕೋಷ್ಟಕ 8.25 ಮುಂದಿನ ಪುಟದಲ್ಲಿ

**ಕೋಷ್ಟಕ 8.23 : ಧಾರವಾಡ ಜಿಲ್ಲೆಯಲ್ಲಿ 1961-1981 ರ ಜನಗಣತಿ ಪ್ರಕಾರ ಕೆಲಸಗಾರರ, ಕೆಲಸಗಾರರಲ್ಲದ್ದವರ ಸಂಖ್ಯೆಯನ್ನು ತೋರಿಸುವ ಪಟ್ಟಿ.**

| | | 1961 | | | 1971 | | | 1981 | | |
|---|---|---|---|---|---|---|---|---|---|---|
| | | ಗಂ | ಹೆಂ | ಮೊ | ಗಂ | ಹೆಂ | ಮೊ | ಗಂ | ಹೆಂ | ಮೊ |
| ಒಟ್ಟು ಕೆಲಸಗಾರರು | ಗ್ರಾ | 3,17,688 | 98,640 | 4,16,328 | 4,63,519 | 1,44,320 | 6,07,479 | 5,59,018 | 2,38,194 | 7,97,212 |
| | ಪ | 1,56,509 | 77,666 | 2,34,175 | 1,86,849 | 37,150 | 2,23,999 | 2,60,878 | 60,576 | 3,21,454 |
| | ಮೊ | 4,74,197 | 1,76,306 | 6,50,503 | 6,50,008 | 1,81,470 | 8,31,478 | 8,19,896 | 2,98,770 | 11,18,666 |
| ಕೆಲಸಗಾರರಲ್ಲದವರು | ಗ್ರಾ | 4,80,562 | 3,02,890 | 7,83,452 | 3,53,878 | 6,42,883 | 9,96,761 | 4,04,636 | 6,10,149 | 10,14,785 |
| | ಪ | 2,09,617 | 1,32,827 | 3,42,444 | 1,99,708 | 3,14,266 | 5,13,974 | 2,74,182 | 4,27,554 | 7,01,736 |
| | ಮೊ | 6,90,179 | 4,35,717 | 11,25,896 | 5,53,586 | 9,57,149 | 15,10,735 | 6,78,818 | 10,37,703 | 17,16,521 |
| ಜನಸಂಖ್ಯೆ | ಗ್ರಾ | 7,26,688 | 6,99,050 | 14,25,738 | 8,17,037 | 7,87,203 | 16,04,240 | 9,73,470 | 9,33,759 | 19,07,229 |
| | ಪ | 2,73,116 | 2,51,508 | 5,24,624 | 3,86,557 | 3,51,416 | 7,37,973 | 5,38,218 | 5,00,040 | 10,38,258 |
| | ಮೊ | 9,99,804 | 9,50,558 | 19,50,362 | 12,03,594 | 11,38,619 | 23,42,213 | 15,11,688 | 14,33,799 | 29,45,487 |

(ಆಧಾರ - ಜನಗಣತಿ ವರದಿ 1961, 71, 81).

**ಕೋಷ್ಟಕ 8.25 : ಧಾರವಾಡ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ (ಹುಬ್ಬಳ್ಳಿ)ಯಲ್ಲಿ 1980-81 ರಿಂದ 1991-92 ರವರೆಗೆ ನೋಂದಣಿ ಮಾಡಿಸಿದವರ ಮತ್ತು ಉದ್ಯೋಗ ದೊರಕಿದವರ ವಿವರ.**

| | 1980-81 | 81-82 | 82-83 | 83-84 | 84-85 | 85-86 | 86-87 | 87-88 | 88-89 | 89-90 | 90-91 | 91-92 |
|---|---|---|---|---|---|---|---|---|---|---|---|---|
| ನೋಂದಣಿಯಾ | | | | | | | | | | | | |
| ದವರ ಸಂಖ್ಯೆ. ಒಟ್ಟು | 15,915 | 13,969 | 13,596 | 16,909 | 14,619 | 15,750 | 12,118 | 14,874 | 17,994 | 28,145 | 28,477 | 23,943 |
| ಗಂ | 13,439 | 11,649 | 11,245 | 13,934 | 11,980 | 13,537 | 10,290 | 12,877 | 15,355 | 24,339 | 22,350 | 19,103 |
| ಹೆಂ | 2,486 | 2,220 | 2,351 | 2,975 | 2,639 | 2,213 | 1,828 | 1,997 | 2,639 | 3,806 | 6,127 | 4,840 |
| ಸೂಚಿಸಿದ ಉದ್ಯೋಗಗಳು | | | | | | | | | | | | |
| ಕೇಂದ್ರ ಸರ್ಕಾರ | 194 | 152 | 240 | 286 | 113 | 155 | 83 | 96 | 116 | 128 | 327 | 234 |
| ರಾಜ್ಯ ಸರ್ಕಾರ | 476 | 463 | 577 | 715 | 1,430 | 339 | 489 | 277 | 129 | 173 | 131 | 258 |
| ಕೇಂದ್ರ ಸರ್ಕಾರ ಸ್ವಾಮ್ಯ | 117 | 195 | 94 | 166 | 199 | 420 | 156 | 81 | 100 | 82 | 87 | 163 |
| ರಾಜ್ಯ ಸರ್ಕಾರ ಸ್ವಾಮ್ಯ | 97 | 69 | 64 | 33 | 345 | 187 | 512 | 50 | 273 | 302 | 28 | 316 |
| ಖಾಸಗಿ | 338 | 240 | 192 | 211 | 633 | 289 | 405 | 313 | 402 | 289 | 192 | 133 |
| ಸ್ಥಳೀಯ ಸಂಸ್ಥೆ | 34 | 234 | 103 | 209 | 81 | 108 | 5100 | 47 | 41 | 9 | 6 | 36 |
| ಮೊತ್ತ | 1,563 | 1,353 | 1,270 | 1,620 | 2,801 | 1,492 | 1,745 | 864 | 1,066 | 1579 | 771 | 1,160 |
| ದೊರಕಿಸಿಕೊಟ್ಟ ಉದ್ಯೋಗಗಳು | | | | | | | | | | | | |
| ಕೇಂದ್ರ ಸರ್ಕಾರ | 75 | 217 | 95 | 151 | 67 | 84 | 28 | 49 | 85 | 93 | 68 | 38 |
| ರಾಜ್ಯ ಸರ್ಕಾರ | 405 | 274 | 349 | 311 | 438 | 471 | 213 | 216 | 93 | 148 | 27 | 164 |
| ಕೇಂದ್ರ ಸರ್ಕಾರ ಸ್ವಾಮ್ಯ | 92 | 110 | 28 | 156 | 254 | 377 | 141 | 86 | 103 | 90 | 65 | 162 |
| ರಾಜ್ಯ ಸರ್ಕಾರ ಸ್ವಾಮ್ಯ | 25 | 62 | 11 | 23 | 25 | 58 | 57 | 31 | 98 | 501 | 7 | 9 |
| ಖಾಸಗಿ | 110 | 61 | 40 | 36 | 22 | 37 | 12 | 58 | 6 | 5 | 4 | 5 |
| ಸ್ಥಳೀಯ ಸಂಸ್ಥೆ | 77 | 324 | 44 | 61 | 36 | 15 | 17 | 19 | 29 | 84 | 26 | 8 |
| ಮೊತ್ತ | 784 | 1.102 | 641 | 738 | 842 | 1042 | 468 | 459 | 414 | 876 | 197 | 392 |
| ಉಳಿದಿದ್ದ ಉದ್ಯೋಗಗಳು | 1,052 | 494 | 760 | - | - | - | - | 1,099 | 946 | 1,043 | 1,316 | 1,655 |
| ನೋಂದಣಿಪುಸ್ತಕದಲ್ಲಿನ ಸಂಖ್ಯೆ | 32,842 | 36,580 | 38,668 | 41,720 | 46,225 | 61,285 | 66,978 | 61,321 | 69,910 | 81,956 | 96,760 | 96,760 |

ಆಧಾರ : ಉದ್ಯೋಗ ವಿನಿಮಯಕೇಂದ್ರ ಹುಬ್ಬಳ್ಳಿ

## ಉದ್ಯೋಗಾವಕಾಶ ಮತ್ತು ಸ್ಥಾನಗಳಿಕೆ

ಉದ್ಯೋಗಾಸಕ್ತ ಜನಶಕ್ತಿ ಮತ್ತು ಉದ್ಯೋಗ ಅವಕಾಶ ಮಧ್ಯೆ ಅನ್ಯೋನ್ಯ ಸಂಬಂಧವನ್ನು ಕಲ್ಪಿಸಿ ಕೊಡಲು ಉದ್ಯೋಗ ವಿನಿಮಯ ಕೇಂದ್ರಗಳಿವೆ. ಉದ್ಯೋಗಾರ್ಥಿಗಳಿಗೆ ಸೂಕ್ತ ಉದ್ಯೋಗವನ್ನು ಪಡೆಯಲು ಅದು ನೆರವಾಗುವುದು. ಹಾಗೂ ನಿಯೋಜಕರಿಗೆ ಅರ್ಹ ಕೆಲಸಗಾರರನ್ನು ದೊರಕಿಸಿಕೊಡುವುದು. ಸೂಕ್ತ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಲು ಉದ್ಯೋಗಾರ್ಥಿಗೆ ವೃತ್ತಿ ಮಾರ್ಗದರ್ಶಕ ನೀಡುವುದು ಹಾಗೂ ಯೋಜನೆಗಳನ್ನು ರೂಪಿಸುವವರಿಗೆ ಹಾಗೂ ವಿದ್ಯಾರ್ಥಿಗಳು ಮತ್ತು ಶಿಕ್ಷಣ ಸಂಸ್ಥೆಗಳ ಆಡಳಿತ ವರ್ಗದವರ ಪ್ರಯೋಜನಕ್ಕಾಗಿ ಉದ್ಯೋಗ ಮಾರುಕಟ್ಟೆ ಮಾಹಿತಿ ಹಾಗೂ ವೃತ್ತಿಗಳ ಮಾಹಿತಿಗಳನ್ನು ಸಂಗ್ರಹಿಸುವುದು, ಸಂಕಲಿಸುವುದು ಮತ್ತು ಪ್ರಸಾರ ಮಾಡುವುದು, ಇವುಗಳು ಕೂಡ ಕೇಂದ್ರದ ಕೆಲಸಗಳು. 1980-81 ರಿಂದ 1991-92 ರವರೆಗೆ ಈ ಕೇಂದ್ರಗಳಲ್ಲಿ ನೋಂದಾಯಿಸಿದವರ ಬಗ್ಗೆ ವಿವರಗಳನ್ನು ಮುಂದಿನ ಪಟ್ಟಿಗಳಲ್ಲಿ ಕೊಡಲಾಗಿದೆ.

**ಕೋಷ್ಟಕ 8.26 : ಧಾರವಾಡ ಜಿಲ್ಲೆಯಲ್ಲಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿರುವ ಅಭ್ಯರ್ಥಿಗಳ ವಿವರ ಮಾರ್ಚ್ 1992 ರಲ್ಲಿದ್ದಂತೆ.**

| ಕ್ರಮ ಸಂಖ್ಯೆ | ವಿಧ | ಒಟ್ಟು ನೋಂದಾಯಿಸಿದ ಅಭ್ಯರ್ಥಿಗಳು | | | ಅವರಲ್ಲಿ ಪರಿಶಿಷ್ಟ ಜಾತಿ | | | ಪರಿಶಿಷ್ಟ ವರ್ಗ | | |
|---|---|---|---|---|---|---|---|---|---|---|
| | | ಗಂ. | ಹೆಂ. | ಮೊತ್ತ | ಗಂ. | ಹೆಂ. | ಮೊತ್ತ | ಗಂ. | ಹೆಂ. | ಮೊತ್ತ |
| 1) | ಪದವೀಧರರು | | | | | | | | | |
| 1 | ಕಲೆ | 1,843 | 775 | 2,618 | 232 | 54 | 286 | 32 | 15 | 47 |
| 2 | ವಾಣಿಜ್ಯ | 1621 | 340 | 1961 | 74 | 10 | 84 | 14 | - | 14 |
| 3 | ವಿಜ್ಞಾನ | 596 | 270 | 866 | 16 | 2 | 18 | 1 | - | 1 |
| 2) | ಡಿಪ್ಲೋಮಾ ಪಡೆದವರು | | | | | | | | | |
| 1 | ಸಿವಿಲ್ | 552 | 9 | 561 | 22 | - | 22 | 6 | - | 6 |
| 2 | ಮೆಕ್ಯಾನಿಕಲ್ | 540 | - | 540 | 21 | - | 21 | 3 | - | 3 |
| 3 | ಎಲೆಕ್ಟ್ರಿಕಲ್ | 392 | - | 392 | 13 | - | 13 | 4 | - | 4 |
| 4 | ಆಟೋಮೊಬೈಲ್ | 193 | - | 193 | 3 | - | 3 | 4 | - | 4 |
| 5 | ಮೆಟಲರ್ಜಿ | 9 | - | 9 | - | - | - | - | - | - |
| 6 | ರೇಡಿಯೋ: ಟೆಲಿ ಕಮ್ಯೂನಿ ಕೇಶನ್ | 102 | 81 | 183 | - | - | - | - | - | - |
| 7 | ಮೈನಿಂಗ್ | 1 | - | 1 | - | - | - | - | - | - |
| 8 | ಇತರೆ | 151 | 50 | 201 | 21 | - | 21 | - | - | - |
| 3) | ಐ.ಟಿ.ಐ. ಪರಿಣತರು | | | | | | | | | |
| 1 | ಫಿಟ್ಟರ್ | 601 | - | 601 | 52 | - | 52 | 5 | - | 5 |
| 2 | ಟರ್ನರ್ | 404 | - | 404 | 33 | - | 33 | 6 | - | 6 |
| 3 | ಎಲೆಕ್ಟ್ರಿಕಲ್ | 419 | - | 419 | 25 | - | 25 | 5 | - | 5 |
| 4 | ಮೆಶಿನಿಸ್ಟ | 71 | - | 71 | 21 | - | 21 | 4 | - | 4 |
| 5 | ವೆಲ್ಡರ್ | 55 | - | 55 | 13 | - | 13 | - | - | - |

| ಕ್ರಮ ಸಂಖ್ಯೆ | ವಿಧ | ಒಟ್ಟು ನೋಂದಾಯಿಸಿದ ಅಭ್ಯರ್ಥಿಗಳು | | | ಅವರಲ್ಲಿ ಪರಿಶಿಷ್ಟ ಜಾತಿ | | | ಪರಿಶಿಷ್ಟ ವರ್ಗ | | |
|---|---|---|---|---|---|---|---|---|---|---|
| | | ಗಂ. | ಹೆಂ. | ಮೊತ್ತ | ಗಂ. | ಹೆಂ. | ಮೊತ್ತ | ಗಂ. | ಹೆಂ. | ಮೊತ್ತ |
| 6 | ಶೀಟಮೆಟಲ ವರ್ಕರ್ | 41 | - | 41 | 3 | - | 3 | - | - | - |
| 7 | ವೈರಮೆನ್ | 56 | - | 56 | 8 | - | 8 | 1 | - | 1 |
| 8 | ಇತರೆ | 621 | - | 621 | 31 | - | 31 | 4 | - | 4 |
| 4) | ಅಪರೆಂಟೀಸ್ ಟ್ರೈನಿಂಗ್ ಪಡೆದವರು | | | | | | | | | |
| 1 | ಫಿಟ್ಟರ್ | 25 | - | 25 | - | - | - | - | - | - |
| 2 | ಟರ್ನರ್ | 19 | - | 19 | - | - | - | - | - | - |
| 3) | ಎಲೆಕ್ಟ್ರಿಸಿಯನ್ | 135 | - | 135 | - | - | - | - | - | - |
| 4) | ಮೆಶಿನಿಸ್ಟ | 39 | - | 39 | - | - | - | - | - | - |
| 5) | ವೆಲ್ಡರ್ | 8 | - | 8 | - | - | - | - | - | - |
| 6) | ಕನ್ನಡ ಬೆರಳಚ್ಚು | 465 | 340 | 805 | 32 | 17 | 49 | 1 | - | 1 |
| 7) | ಇಂಗ್ಲೀಷು ಬೆರಳಚ್ಚು | 390 | 367 | 757 | 18 | 13 | 31 | 1 | - | 1 |
| 8) | ಕನ್ನಡ ಶೀಘ್ರಲಿಪಿಕಾರರು | 52 | 70 | 122 | - | - | - | - | - | - |
| 9) | ಇಂಗ್ಲೀಷ್ ಶೀಘ್ರಲಿಪಿಕಾರರು | 64 | 95 | 159 | - | - | - | - | - | - |
| 5) | ಹತ್ತನೆಯ ಇಯತ್ತೆ ಮತ್ತು ಟಿ.ಸಿ.ಹೆಚ್. | 5,698 | 2,890 | 8,588 | 267 | 770 | 446 | 59 | 21 | 80 |
| 6) | ಹತ್ತನೆಯ ಇಯತ್ತೆ ತೇರ್ಗಡೆಯಾದವರು | 41,065 | 5,174 | 46,239 | 3,418 | 974 | 4,392 | 240 | 51 | 291 |
| 7) | ಹತ್ತನೆಯ ಇಯತ್ತೆ ಮತ್ತು ನರ್ಸರಿ | - | 705 | 705 | - | 71 | 71 | - | 8 | 8 |
| 8) | ಪದವಿ ಪೂರ್ವ ತರಗತಿ ಉತ್ತೀರ್ಣರಾದವರು | 3,929 | 1,105 | 5,034 | 705 | 286 | 991 | 57 | 12 | 69 |
| 9) | ಲಘು ಮೋಟಾರು ವಾಹನ ಚಾಲಕರು | 410 | - | 410 | 45 | - | 45 | 6 | - | 6 |
| 10) | ಭಾರಿ ಮೋಟಾರು ವಾಹನ ಚಾಲಕರು | 3,261 | - | 3,261 | 213 | - | 213 | 18 | - | 18 |
| 11) | ಹತ್ತನೆಯ ಇಯತ್ತೆಗಿಂತ ಕಡಿಮೆ | 7,613 | 1,004 | 8.617 | 1,018 | 930 | 1,111 | 51 | - | 51 |
| 12) | ಅಕ್ಷರಸ್ಥರು | 2,731 | 633 | 3,364 | 733 | 134 | 867 | 26 | - | 26 |
| 13) | ಅನಕ್ಷರಸ್ಥರು | 320 | 251 | 571 | 113 | 51 | 164 | - | - | - |
| 14) | ಇತರೆ | 5,189 | 2,075 | 7,264 | 982 | 407 | 1,389 | 179 | 22 | 291 |
| | ಮೊತ್ತ | 80,420 | 16,340 | 96,760 | 8,192 | 2,304 | 10,496 | 743 | 132 | 875 |

ಆಧಾರ : ಉದ್ಯೋಗವಿನಿಮಯ ಕಛೇರಿ, ಹುಬ್ಬಳ್ಳಿ

## ಕೆಲಸಗಾರರು ಮತ್ತು ವೇತನ

ಧಾರವಾಡ ಜಿಲ್ಲೆಯಲ್ಲಿ 19 ನೇ ಶತಮಾನ ಆದಿಯಲ್ಲಿ ಕೆಲಸಗಾರರನ್ನು ಕೂಲಿಕೊಟ್ಟು ಕರೆಸುವ ವಾಡಿಕೆ ಹೆಚ್ಚು ಇರಲಿಲ್ಲ, ಕಾರಣವೇನೆಂದರೆ, ಪ್ರತಿ ರೈತನೂ ತನ್ನ ಕುಟುಂಬದ ಸದಸ್ಯರೊಡನೆ ಸಾಗುವಳಿ ಮಾಡುತ್ತಿದ್ದನು. ಕೆಲವು ಕಡೆಗಳಲ್ಲಿ ಜೀತಪದ್ಧತಿ ಜಾರಿಯಲ್ಲಿತ್ತು. ಮರಾಠಿಗರ ಪದ್ಧತಿಯಂತೆ, ಧಾನ್ಯವು ತುಟ್ಟಿಯಾಗಿದ್ದಾಗ ಕೂಲಿಯನ್ನು ಹಣದ ರೂಪದಲ್ಲೂ, ಬೆಲೆ ಕಡಿಮೆಯಾದಾಗ ಕಾಳುಗಳ ರೂಪದಲ್ಲೂ ಕೊಡುತ್ತಿದ್ದರು. ಪೇಶ್ವೆಯವರ ಕಾಲದಲ್ಲಿ ಕುಶಲಕರ್ಮಿಗಳಾದ ಬಡಗಿಗಳು, ಇಟ್ಟಿಗೆ ಕೆಲಸದವರು, ಕಮ್ಮಾರರು ದಿನಕ್ಕೆ 3-4 ಆಣೆ, ಸಾಧಾರಣ ಕೂಲಿ ಕೆಲಸಗಾರರು ದಿನಕ್ಕೆ 1 ರಿಂದ 1 1/2 ಆಣೆ ಅಥವಾ 1 1/2 ಯಿಂದ 2 1/2 ಸೇರು ಸಜ್ಜೆಯನ್ನು ಕೂಲಿಯಾಗಿ ಪಡೆಯುತ್ತಿದ್ದರು. 1834-35 ರಲ್ಲಿ ಒಬ್ಬ ಕೂಲಿ ಕೆಲಸಗಾರನು ಮಾಸಿಕ 1 ರೂ ನಿಂದ 1 1/2 ರೂನಲ್ಲಿ ಜೀವನ ನಡೆಸುತ್ತಿದ್ದನು. 1842 ರ ಹೊತ್ತಿಗೆ, ಹೊಲದಲ್ಲಿ ಕೆಲಸ ಮಾಡುವವನಿಗೆ ದಿನಕೂಲಿ ಒಂದು ಆಣೆ ಇದ್ದಿತು. 1850 ರ ಹೊತ್ತಿಗೆ ರೈಲ್ವೆ ಕಾಮಗಾರಿಗಳು ಪ್ರಾರಂಭವಾದಾಗ ವೇತನ ಹೆಚ್ಚಾಯಿತು. 1860 ರ ಹೊತ್ತಿಗೆ ವೇತನಗಳು ಇನ್ನೂ ಹೆಚ್ಚಾಯಿತು. ಅಮೇರಿಕದ ಯಾದವೀ ಯುದ್ಧ ನಂತರ (1865) ಬೆಲೆಗಳು ಕಡಿಮೆಯಾಗತೊಡಗಿದವು. 1870 ರ ಹೊತ್ತಿಗೆ ಒಬ್ಬ ಕೆಲಸಗಾರನು ಸ್ವಲ್ಪ ಉತ್ತಮ ಸ್ಥಿತಿಯಲ್ಲಿದ್ದನು. ನಂತರದ ದಿನಗಳಲ್ಲಿ ಕೆಲಸಗಾರನು ಉತ್ತಮ ಸ್ಥಿತಿಯಲ್ಲಿದ್ದು ಅವರ ಸಂಘಟನೆಗಳೂ ಆದವು. 1875-81 ರವರೆಗೆ ದಿನಕೂಲಿ 3 ಆಣೆಗಿಂತಲೂ ಕಡಿಮೆ ಇದ್ದು, 1884-1895 ರಲ್ಲಿ 4 ಆಣೆಗೆ ಹೆಚ್ಚಾಯಿತು. 1902 ರ ನಂತರ 4 ಆಣೆಯಿಂದ 5 ಆಣೆಗೆ ಹೆಚ್ಚಾಯಿತು.

1908-09 ರ ಹೊತ್ತಿಗೆ ಆಹಾರಧಾನ್ಯಗಳ ಬೆಲೆ ಹೆಚ್ಚಳದಿಂದಲೂ ಪ್ರತೀ ವರ್ಷವೆಂಬಂತೆ ಬರುತ್ತಿದ್ದ ಅಸಂಖ್ಯ ಸಾವುಗಳಿಗೆ ಕಾರಣವಾದ ಪ್ಲೇಗು ಹಾಗೂ ಕೈಗಾರಿಕೆಗಳ ವಿಸ್ತರಣೆಯಿಂದಲೂ ಜನ ವಸತಿ ಹೆಚ್ಚಾದುದರಿಂದ, ಕಾರ್ಮಿಕರು ಸಿಗುವುದು ಕಷ್ಟವಾಗಿ ವೇತನವು ಹೆಚ್ಚಾಯಿತು. ಧಾರವಾಡ ಜಿಲ್ಲೆಯಲ್ಲಿ ಬೆಳಗಾವಿ ಜಿಲ್ಲೆಗಿಂತಲೂ ವೇತನ ಹೆಚ್ಚಿತ್ತು. ವೇತನ ಹೆಚ್ಚಾದರೂ, ಕೆಲಸದಲ್ಲಿ ಅಚ್ಚುಕಟ್ಟು ಕಡಿಮೆಯಾಗಿತ್ತು. ಆಗಿನ ಸಮಯದಲ್ಲಿ ವೇತನವು ಪ್ರತಿದಿನಕ್ಕೆ 12 ಆಣೆಯಿಂದ 1 ರೂ.ವರೆಗೂ ಇದ್ದಿತು. ಹುಬ್ಬಳ್ಳಿಯು ಕಾರ್ಮಿಕರ ವಲಸೆ ಆಕರ್ಷಿಸುವ ಕೇಂದ್ರ ಸ್ಥಾನವಾಗಿತ್ತು.

ಈ ಸಮಯದಲ್ಲಿ, ಕಾರ್ಮಿಕರ ಸಂಖ್ಯೆ ಅಗತ್ಯಕ್ಕಿಂತಲೂ ಕಡಿಮೆಯಾಯಿತು. ಇದಕ್ಕೆ ಕಾರಣವೇನೆಂದರೆ ಕಾರ್ಮಿಕರು ಹೆಚ್ಚಾಗಿ ಕೃಷಿ ಕಾರ್ಮಿಕರಾಗಿ ಕಾರ್ಯ ನಿರ್ವಹಿಸಲು ಉತ್ಸುಕರಾಗಿದ್ದರು. ಇದಲ್ಲದೆ ಮುಂಬಯಿ, ಅಹಮ್ಮದಾಬಾದ್, ಸೊಲ್ಲಾಪುರಗಳಿಂದ ಗಿರಣಿ ಕಾರ್ಮಿಕರಿಗೆ ಬಂದ ಬೇಡಿಕೆ ಪಟ್ಟಣಗಳಲ್ಲಿ ಕೈಗಾರಿಕೆಗಳ ಅಭಿವೃದ್ಧಿ, ಪ್ಲೇಗಿನಿಂದಾಗುವ ಸಾವು ಮೊದಲಾದವುಗಳಿಂದ ಕಾರ್ಮಿಕರ ಸಂಖ್ಯೆ ಇಳಿಮುಖವಾಗುತ್ತಿತ್ತು. 1914-18 ರ ಹೊತ್ತಿಗೆ, ಧಾರವಾಡ ಜಿಲ್ಲೆಯಲ್ಲಿಯೂ ರಾಜ್ಯದಲ್ಲಿಯಂತೆ, ಕಾರ್ಮಿಕರ ಸಂಖ್ಯೆ, ಇಳಿಮುಖವಾಗುತ್ತಿತ್ತು. ಗಿರಣಿಗಳಲ್ಲಿ ಅರಣ್ಯ ಕೈಗಾರಿಕೆಗಳಲ್ಲಿ, ಕಾರ್ಮಿಕರಿಗೆ ಬೇಡಿಕೆ ಇದ್ದಿತು. ಇದೂ ಅಲ್ಲದೆ, ಕಾರ್ಮಿಕರಿಗೆ ದಿನಪೂರ್ತಿ ಕೆಲಸಮಾಡುವ ಧೋರಣೆಯೂ ಕಡಿಮೆಯಾಯಿತು. ಕೃಷಿ ಕಾರ್ಮಿಕರ ವೇತನ ದಿನಕ್ಕೆ 3 1/4 ಆಣೆಯಿಂದ 4, 5 ಮತ್ತು 8 ಆಣೆಯವರೆಗೂ ಏರಿ, ಕುಶಲ ಕೆಲಸಗಾರನಿಗೆ 11 ಆಣೆಯಿಂದ 12 ಆಣೆ 1 1/4 ರೂವರೆಗೂ ಏರಿತು. 1919 ರಲ್ಲಿ ಕಾಣಿಸಿದ ಇನ್‌ಫ್ಲುಯೆಂಜಾ (ಗುದ್ದವ್ವನ ಬೇನೆ) ಕಾರ್ಮಿಕರ ಸಂಖ್ಯೆಯ ಮೇಲೆ ಪರಿಣಾಮ ಬೀರಿತು. 1918-19 ರ ಹೊತ್ತಿಗೆ ಕಾರ್ಮಿಕರ ವೇತನವು ಹೆಚ್ಚುತ್ತಾ ಕಾರ್ಮಿಕರ ಸಂಖ್ಯೆ ಮತ್ತಷ್ಟು ಕಡಿಮೆಯಾಯಿತು.

ಮಹಾಯುದ್ಧದ ನಂತರದ ದಿನಗಳಲ್ಲಿ ಸ್ವತಃ ಕೃಷಿ ಮಾಡುವ ರೈತನು ಹೆಚ್ಚು ಕೃಷಿ ವೇತನವನ್ನು ಕೊಡುವ ಸ್ಥಿತಿಯಲ್ಲಿರಲಿಲ್ಲ. ಬೆಲೆಗಳು ಕಡಿಮೆಯಾಗುತ್ತಿದ್ದರೂ ವೇತನವು ಹೆಚ್ಚುತ್ತಲೇ ಇತ್ತು.

ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ವೇತನವು ಕ್ರಮೇಣ ಹೆಚ್ಚಿತು. ಮತ್ತು ದೃಢಕಾಯನಾದ ಕಾರ್ಮಿಕನು ತನಗೆ ಸರಿಯಾದ ವೇತನವನ್ನು ಕೊಡುವ ಯಜಮಾನನನ್ನು ಹುಡುಕುವ ಮಟ್ಟಕ್ಕೆ ಬಂದನು. ಸಾರ್ವಜನಿಕ ಕಾಮಗಾರಿಗಳು, ಸಾರಿಗೆ, ಅರಣ್ಯದಲ್ಲಿ ಕೂಲಿ, ವಾಣಿಜ್ಯ ಮತ್ತು ಕೈಗಾರಿಕೆಗಳ ವಿಸ್ತರಣೆ ಇವೆಲ್ಲ ಇದಕ್ಕೆ ಕಾರಣ.

**ಕೋಷ್ಟಕ 8.28 : ಧಾರವಾಡ ಜಿಲ್ಲೆಯಲ್ಲಿ ಕೆಲವು ಹುದ್ದೆಗಳ ವೇತನ 1894 ರಿಂದ 1919 ರವರೆಗೆ**

(ಧಾರವಾಡ ನಗರಕ್ಕೆ ಸಂಬಂಧಿಸಿದಂತೆ)

| ವರ್ಷ | ಕಟ್ಟಡ ಕೆಲಸದವ | ಬಡಗಿ | ಕಮ್ಮಾರ | ಕೃಷಿ ಕಾರ್ಮಿಕ | ಕುದುರೆ ಕಾಯುವವನು |
|---|---|---|---|---|---|
| | | ಮಾಸಿಕ ವೇತನ ರೂ.ಗಳಲ್ಲಿ | | | |
| 1894 | 15 | 18 | 12 | 7 | 6 |
| 1897 | 15 | 20 | 20 | 8 | 7 |
| 1900 | 15 | 15-25 | 15-18 | 7 | 8 |
| 1903 | 20 | 20 | 20 | 7 | 8 |
| 1906 | 15 | 15 | 15 | 7 | 8 |
| 1909 | 15 | 15 | 15 | 7 | 8 |
| 1912 | 22.5 | 22.5 | 22.5 | 8.5 | 8 |
| 1915 | 22.5 | 26.25 | 30.0 | 11.25 | 11.25 |
| 1918 | 25 | 25 | 25 | 16 | 14 |
| 1919 | 30 | 30 | 30 | 16 | 16 |

ಆಧಾರ : ಗ್ಯಾಸೆಟಿಯರ್ ಆಫ್ ಬಾಂಬೆ ಪ್ರಸಿಡೆನ್ಸಿ (1928) ಪುಟ.17

ನಂತರದ ವರ್ಷಗಳಲ್ಲಿ ವೇತನವು ಕ್ರಮೇಣ ಹೆಚ್ಚುತ್ತಲ್ಲಿದ್ದು 1950 ರ ಹೊತ್ತಿಗೆ ವೇತನವು ಈ ರೀತಿ ಇದ್ದಿತು. ಪ್ರತಿ ದಿನದ ಸರಾಸರಿ ವೇತನ ಕಟ್ಟಡ ಕೆಲಸದವ ರೂ.2.75, ಬಡಗಿ ರೂ.2.40, ಕಮ್ಮಾರ ರೂ.2-30, ಕೃಷಿ ಕಾರ್ಮಿಕ, ಗಂಡಸು 1-00, ಹೆಂಗಸು 0-75, ಇತರೆ ಕೆಲಸಗಾರರು ಗಂಡಸರು 0-90, ಹೆಂಗಸರು 0-60, 1967 ರಲ್ಲಿ ವೇತನಮಟ್ಟ ಈ ರೀತಿ ಇದ್ದಿತು. ಮರಗೆಲಸಗಾರ ರೂ.3-70, ಕಮ್ಮಾರ 3-75, ಮೋಚಿ 2-80, ಕೃಷಿ ಕೆಲಸಗಾರ ಗಂಡಸು ರೂ.2-40, ಹೆಂಗಸರು ರೂ.1-55, ಮಕ್ಕಳು ರೂ.1-10 ಇತರ ಕೆಲಸಗಾರರು - ಗಂಡಸು ರೂ.2-00, ಹೆಂಗಸು ರೂ.1-30 ಮಕ್ಕಳು 0-90, ಮತ್ತು ಜಾನುವಾರು ಕಾಯುವವರು ಗಂಡಸು .ರೂ.1-70 ಹೆಂಗಸು, 1-25 ಮಕ್ಕಳು, 0-90 ಪೈಸೆ.

**ಕೋಷ್ಟಕ 8.29 : 1-4-1994 ರಿಂದ ಕೆಲವು ದರ್ಜೆಗಳ ಕನಿಷ್ಠ ಮಾಸಿಕ ವೇತನದ ವಿವರ (ಧಾರವಾಡ ಜಿಲ್ಲೆ).**

| | | ಹೊಲ ರೂ.ಪೈ | ಗದ್ದೆ ರೂ.ಪೈ | ತೋಟ ರೂ.ಪೈ |
|---|---|---|---|---|
| 1 | ಕೃಷಿ ಕೆಲಸಗಾರರು | | | |
| | ಅ) ಉಳುಮೆ | 27-15 | 32-75 | 32-75 |
| | ಬಿ) ಭೂಮಿಯನ್ನು ಸಮಕಟ್ಟು ಮಾಡುವಿಕೆ (ಭತ್ತದ ಬೆಳೆಗಾಗಿ) | - | 32-75 | - |
| 2 | ಗೊಬ್ಬರ ಸಾಗಣೆ | 26-00 | 28-70 | 31-30 |

| | | ಹೊಲ ರೂಪಾಯಿ | ಗದ್ದೆ ರೂಪಾಯಿ | ತೋಟ ರೂಪಾಯಿ |
|---|---|---|---|---|
| 3 | ಬಿತ್ತನೆ | | | |
| 4 | ಫಸಲು | | | |
| | (1) ಕೀಳಲು | | | |
| | (2) ಶುದ್ಧಮಾಡಲು | 27-15 | 32-75 | 32-75 |
| | (3) ಬೇರ್ಪಡಿಸಲು | | | |
| 5 | ಬೀಡಿ ಎಲೆ ಕುಯ್ಯುವುದು (ಒಂದು ಪಟ್ಟಿಗೆ) | | 0-88 | |

ಗೃಹ ನೌಕರರು

| | | | | |
|---|---|---|---|---|
| 1) | ಊಟ ಬಟ್ಟೆಯೊಂದಿಗೆ | ರೂ.490 ಮಾಸಿಕ | | |
| 2) | ಊಟ, ಬಟ್ಟೆ ಕೊಡದೆ | ರೂ.628-75 ಮಾಸಿಕ | | |
| 7) | ಅಗರಬತ್ತಿ ಮಾಡುವವರು | | ದಿನವೇತನ | ರೂ. 2-95 |
| 8) | ಕಾರಕೂನರು | | ಮಾಸಿಕ | 335 + 693 = 1028-00 ರೂ. |
| 9) | ಕಸಗುಡಿಸುವವರು | | ” | 243 + 554.50=- 797-50 |
| 10) | ಮರಗೆಲಸ | | | |
| | ಅ) ಕುಶಲಕೆಲಸಗಾರನಲ್ಲದವನು | | ” | 923.00 + 76.50 = 999.50 ರೂ. |
| | ಆ) ಕುಶಲ ಕೆಲಸಗಾಂ | | ” | 1032.00 + 76.50 = 1108.50 ರೂ. |
| | ಇ) ಕಾರಕೂನ | | ” | 923.00 + 76.50 = 999.50 ರೂ. |
| 11) | ಆಸ್ಪತ್ರೆಗಳು | | | |
| | ಕಿರಿಯ ವೈದ್ಯರು | | ಮಾಸಿಕ | 1136 + 624 = 1760-00 ರೂ. |
| | ಆಯುರ್ವೇದ, ಹೋಮಿಯೋಪತಿ ವೈದ್ಯ ಡಿಪ್ಲೋಮೋ | | ” | 947 + 624 = 1571-00 |
| 12) | ಲೆಕ್ಕಿಗ | | ” | 884 + 624 = 1508 ರೂ. |
| 13) | ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗಗಳ (ಹತ್ತಿ) ಕೈಗಾರಿಕೆ | | | |
| | ಎ) ನೇಯ್ಗೆ ಕೈಮಗ್ಗ | | ಪ್ರತಿ | ರೂಪಾಯಿ |
| | (40 ಕೌಂಟ್ಸ್ | | ಮೀಟರಿಗೆ | 4.30 + 2.94 ಭತ್ಯೆ (ದಿನ) |
| | 100-120 ಕೌಂಟ್ಸ್) | | | 7.50 + 2.94 |
| | ಬಿ) ಫರ್‌ನಿಶಿಂಗ್ ಫ್ಯಾಬ್ರಿಕ್ಸ್ | | ” | 3.20 ರಿಂದ 6.40 ರವರೆಗೆ |
| | ಸಿ) ಶರ್ಟಿಂಗ್ | | ” | 2.80 ರಿಂದ 4.00 ರವರೆಗೆ |
| | ಡಿ) ವಿದ್ಯುತ್ ಚಾಲಿತ ಮಗ್ಗ | | ” | 2.30 ರಿಂದ 4.75 ರವರೆಗೆ |
| | ಇ) ಲೆಕ್ಕಿಗ, ಬೆರಳಚ್ಚುಗಾರ, ಗುಮಾಸ್ತ, ಮಾಸಿಕ | | | 1000 ರೂ. |

(ಆಧಾರ - ಕರ್ನಾಟಕ ಕಾರ್ಮಿಕ ಪತ್ರಿಕೆ - ಮೇ 1994)

ಎಲ್ಲಾ ನೌಕರರಿಗೆ ದಿನ ಒಂದಕ್ಕೆ ಅಂಶಕ್ಕೆ 3 ಪೈಸೆಯಂತೆ ಗ್ರಾಹಕ ಬೆಲೆ ಸೂಚ್ಯಂಕದಲ್ಲಿ 1309 ಅಂಶಗಳಿಗೂ ಮೀರದ ಹೆಚ್ಚಳಕ್ಕಾಗಿ ಸಂದಾಯ ಮಾಡಲಾಗುತ್ತಿತ್ತು. ವೇತನವನ್ನು ಗ್ರಾಹಕ ಸೂಚ್ಯಂಕಕ್ಕೆ ಅನುಗುಣವಾಗಿ ನಿಗದಿ ಮಾಡಬೇಕೆಂದಿತ್ತು.

**ಗ್ರಾಹಕ ಬೆಲೆ ಸೂಚ್ಯಂಕ :** ಹುಬ್ಬಳ್ಳಿ ಧಾರವಾಡದಲ್ಲಿ ಸೂಚ್ಯಂಕವನ್ನು 1988 ರಿಂದ, ಇಲಾಖೆಯು ಬಿಡುಗಡೆ ಮಾಡುತ್ತಲಿದೆ. 1991 ರಲ್ಲಿ 215, 1992 ರಲ್ಲಿ 246 ಮತ್ತು 1993 ರಲ್ಲಿ 259 ಇದ್ದಿತು. ಇದೇ ಮಾಹಿತಿಯು ಬೆಂಗಳೂರಿನಲ್ಲಿ ಅನುಕ್ರಮವಾಗಿ 204, 230 ಮತ್ತು 248 ಇದ್ದಿತು. (ತಳಹದಿ ವರ್ಷ 1982-100). ಇದರಿಂದ ಹುಬ್ಬಳ್ಳಿ ಧಾರವಾಡ ಜಿಲ್ಲೆ ಸೂಚ್ಯಂಕವು ಬೆಂಗಳೂರಿಗಿಂತಲೂ ಹೆಚ್ಚಿರುವುದು ಕಂಡುಬರುತ್ತದೆ. 1994 ಏಪ್ರಿಲ್ ತಿಂಗಳಲ್ಲಿ ಕೈಗಾರಿಕಾ ಕೆಲಸಗಾರರ ಸೂಚ್ಯಂಕವು 273 ಇದ್ದು ಹಿಂದಿನ ವರ್ಷಕ್ಕಿಂತ ಶೇ.7.91 ಹೆಚ್ಚಾಗಿದ್ದು ಹಿಂದಿನ 2 ವರ್ಷಗಳಿಗಿಂತ ಶೇ.14.71 ಹೆಚ್ಚಾಗಿದೆ. ಇದೇ ರೀತಿ ನಗರದ ಕುಶಲವಲ್ಲದ ಕೆಲಸಗಾರರಿಗಾಗಿ ಸೂಚ್ಯಂಕ 228 ಇದ್ದುದು 1993 ರಲ್ಲಿ 208 ಹಾಗೂ 1992 ರಲ್ಲಿ 195 ಇದ್ದಿತು. ಒಂದು ವರ್ಷದಲ್ಲಿ ಶೇ. ಹೆಚ್ಚಳ 10.89 ಮತ್ತು 2 ವರ್ಷದಲ್ಲಿ ಶೇಕಡಾ ಹೆಚ್ಚಳ 15.46 ಇದ್ದಿತು.

1981 ರಿಂದ 1993 ರವರೆಗೆ ಗ್ರಾಹಕ ಬೆಲೆ ಸೂಚ್ಯಂಕ (ವೇತನ ನಿಗದಿಪಡಿಸಲು) ಹೀಗಿದ್ದಿತು: 1982-83 - 470, 1983-84 - 516, 1984-85 - 561, 1985-86 - 620, 1986-87 - 650, 1987-88 - 700, 1988-89 - 752, 1989-90 - 848, 1990-91 - 908, 1991-92 - 976, 1992-93 - 1167, 1993-94 - 1309 ಮತ್ತು 1994-95 - 1394

(ಆಧಾರ : ಕರ್ನಾಟಕ ಕಾರ್ಮಿಕ ಪತ್ರಿಕೆ ಮೇ 1994).

## ವಿವಿಧ ಯೋಜನೆಗಳು

**ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ :** ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆ ಗ್ರಾಮಾಂತರ ಪ್ರದೇಶದಲ್ಲಿ ಇರುವ ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳ ಆರ್ಥಿಕ ಉನ್ನತಿ ಸಾಧಿಸಿ ಅವರನ್ನು ಬಡತನ ರೇಖೆಗಿಂತ ಮೇಲೆತ್ತುವುದು ಈ ಯೋಜನೆಯ ಉದ್ದೇಶ. ಅವರಿಗೆ ಸುಧಾರಿತ ಕೃಷಿ ಉಪಕರಣಗಳನ್ನು ಪೂರೈಸುವುದು. ತೋಟಗಾರಿಕೆ, ಹೈನುಗಾರಿಕೆ, ಕುರಿ, ಕೋಳಿ ಮೀನು ರೇಷ್ಮೆ ಸಾಕಣೆ ಮೊದಲಾದ ಉದ್ಯೋಗ ಕೈಕೊಳ್ಳಲು ಸಹಾಯಧನ ಹಾಗೂ ಬ್ಯಾಂಕುಗಳಿಂದ ಸಾಲ ಒದಗಿಸಲಾಗುವುದು. ಅಲ್ಲದೆ ಉದ್ಯೋಗ, ಸೇವೆ ಮತ್ತು ವ್ಯಾಪಾರಗಳಿಗಾಗಿ ಫಲಾನುಭವಿಗಳನ್ನು ಗುರುತಿಸಲಾಗುವುದು. ಇದರಂತೆ ಜಿಲ್ಲೆಯಲ್ಲಿ 1990-91 ರಲ್ಲಿ 6,540 ಫಾಲಾನುಭವಿಗಳಿಗೆ 147.344 ಲಕ್ಷ ರೂ.ಗಳ ಸಹಾಯಧನವನ್ನು ಹಂಚಲಾಗಿದೆ. ಇವರಲ್ಲಿ 2,898 ಫಲಾನುಭವಿಗಳು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರುವರು.

**ಜವಾಹರ ರೋಜಗಾರ ಯೋಜನೆ :** ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಯೋಜನೆ ಮತ್ತು ಗ್ರಾಮೀಣ ಭೂರಹಿತರಿಗೆ ಉದ್ಯೋಗ ಭರವಸೆ ಯೋಜನೆ ಇವೆರಡೂ ಯೋಜನೆಗಳನ್ನು ಒಂದುಗೂಡಿಸಿ ಹೊಸ ಹೆಸರಿನಲ್ಲಿ 'ಜವಾಹರ ರೋಜಗಾರ ಯೋಜನೆ' ಎಂಬ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಏಪ್ರಿಲ್ 1989 ರಿಂದ ಈ ಯೋಜನೆ ಅನುಷ್ಠಾನದಲ್ಲಿ ಬಂದಿದೆ. ಬಡತನದ ರೇಖೆಯ ಕೆಳಗಿರುವ ಕುಟುಂಬಗಳ ಅಭಿವೃದ್ಧಿ ಈ ಯೋಜನೆಯ ಗುರಿ; ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ಕುಟುಂಬಗಳಿಗೆ ಇಲ್ಲಿ ಹೆಚ್ಚಿನ ಆದ್ಯತೆ; ನಿರ್ಮಿಸುವ ಉದ್ಯೋಗ ಅವಕಾಶದಲ್ಲಿ ಶೇಕಡಾ 30 ರಷ್ಟು ಮಹಿಳೆಯರಿಗೆ ಮೀಸಲು; ಈ ಯೋಜನೆಗೆ ತಗಲುವ ವೆಚ್ಚದಲ್ಲಿ ಶೇಕಡಾ 80 ರಷ್ಟನ್ನು ಕೇಂದ್ರ ಸರಕಾರ ಹಾಗೂ ಶೇಕಡಾ 20 ರಷ್ಟನ್ನು ರಾಜ್ಯ ಸರಕಾರಗಳು ಭರಿಸುವುವು.

ಈ ಯೋಜನೆಯಲ್ಲಿ 1990-91 ರಲ್ಲಿ ಒಟ್ಟಾರೆ 5,434 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಹಾಗೂ ಅವುಗಳಲ್ಲಿ 2,933 ಕಾಮಗಾರಿಗಳನ್ನು ಪೂರ್ಣಗೊಳಿಸಲಾಯಿತು. ಇವುಗಳ ಅನುಷ್ಠಾನಕ್ಕಾಗಿ 725.396 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಈ ಯೋಜನೆಯ ಮೂಲಕ 28.839 ಲಕ್ಷ ಮಾನವ ದಿನಗಳ ಉದ್ಯೋಗಾವಕಾಶ ಕಲ್ಪಿಸಲಾಗಿದೆ. ಯೋಜನೆಯ ಕಾರ್ಮಿಕರಿಗೆ 1907 ಮೆ.ಟನ್ ಆಹಾರ ಧಾನ್ಯವನ್ನು ಭಾಗಶಃ ಕೂಲಿಯ ರೂಪದಲ್ಲಿ ವಿತರಿಸಲಾಗಿದೆ.

**ಬರಸಂಭವ ಪ್ರದೇಶ ಅಭಿವೃದ್ಧಿ ಯೋಜನೆ :** ಮೇಲಿಂದ ಮೇಲಕ್ಕೆ ಬರಗಾಲಕ್ಕೆ ತುತ್ತಾಗುವ ಪ್ರದೇಶಗಳನ್ನು ಗುರುತಿಸಿ ಅಂತಹ ಪ್ರದೇಶಗಳಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಕೊಂಡು ಮುಂದೆ ಬರಬಹುದಾದ ಬರಗಾಲದ ಪ್ರಭಾವವನ್ನು ಕಡಿಮೆ ಮಾಡುವುದು ಹಾಗೂ ಅಲ್ಲಿಯ ಜನರು ವೃತ್ತಿನಿರತರಾಗುವಂತೆ ನೋಡಿಕೊಳ್ಳುವುದು ಈ ಯೋಜನೆಯ ಉದ್ದೇಶ. ಈ ಯೋಜನೆಯಲ್ಲಿ ಅರಣ್ಯಾಭಿವೃದ್ಧಿ, ಭೂಸಾರ ಸಂರಕ್ಷಣೆ, ಜಲಸಂರಕ್ಷಣೆ, ಸಣ್ಣ ನೀರಾವರಿ, ವ್ಯವಸಾಯ, ತೋಟಗಾರಿಕೆ, ಪಶುಸಂಗೋಪನೆ ಮೊದಲಾದ ಕಾರ್ಯಕ್ರಮಗಳನ್ನು ಕೈಕೊಳ್ಳಲಾಗುವುದು. ಜಿಲ್ಲೆಯಲ್ಲಿ ನರಗುಂದ, ನವಲಗುಂದ ಹಾಗೂ ಹಾನಗಲ್ ಈ ಮೂರು ತಾಲೂಕುಗಳನ್ನು ಬಿಟ್ಟು ಉಳಿದ 14ತಾಲೂಕುಗಳಲ್ಲಿ ಆಯಾ ತಾಲೂಕಿನಲ್ಲಿ ಆರಿಸಿದ ಜಲಾನಯನ ಪ್ರದೇಶದಲ್ಲಿ ಈ ಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು. ಜಿಲ್ಲೆಯಲ್ಲಿ 1989-90ರಲ್ಲಿ ಅಭಾವ ಸಂಭವ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ 215.487 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಭೂಕಂಪ, ಅತೀವೃಷ್ಟಿ, ಅನಾವೃಷ್ಟಿ ಮುಂತಾದ ನೈಸರ್ಗಿಕ ವಿಪತ್ತಿನ ಪ್ರಕೋಪಕ್ಕೆ ಒಳಗಾದ ಜನರಿಗೆ ಸರ್ಕಾರ ಪರಿಹಾರ ಒದಗಿಸಿಕೊಡುತ್ತಲಿದೆ. 1990 ರಿಂದ 1992 ರ ಅವಧಿಯಲ್ಲಿ 437 ಬರ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಂಡು 7 ಲಕ್ಷ ಮಾನವ ದಿನಗಳ ಕಾರ್ಯಕಲ್ಪಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ 232 ಹೊಸ ಕೊಳವೆ ಭಾವಿಗಳನ್ನು ತೋಡಲಾಗಿದೆ. ಅತೀವೃಷ್ಟಿಯಿಂದ ನೊಂದ 6912 ಕುಟುಂಬಗಳಿಗೆ 34.50 ಲಕ್ಷ ರೂ.ಗಳನ್ನು ಪರಿಹಾರವಾಗಿ ನೀಡಲಾಗಿದೆ.

**ನ್ಯಾಯ ಬೆಲೆ ಅಂಗಡಿಗಳು :** 1990-91 ಮತ್ತು 1992-93 ರಲ್ಲಿ ಇದ್ದ ಪಡಿತರ ಚೀಟಿ ನ್ಯಾಯಬೆಲೆ ಅಂಗಡಿಗಳ ವಿವರ ಅನುಕ್ರಮವಾಗಿ ಹೀಗಿದೆ. ನ್ಯಾಯ ಬೆಲೆ ಅಂಗಡಿ : 1332, 1242; ಗ್ರಾಮೀಣ ಪ್ರದೇಶದಲ್ಲಿದ್ದವು 886, 800; ನಗರ ಪ್ರದೇಶದಲ್ಲಿದ್ದವು 446, 442; ಪಡಿತರ ಚೀಟಿದಾರರು 5,65,000, 7,19,000; ಹಸಿರು ಪಡಿತರ ಚೀಟಿದಾರರು 2,54,000, 3,58,000; ಕೇಸರಿ ಪಡಿತರ ಚೀಟಿದಾರರು 1,44,000, 1,42,000; ಮತ್ತು ಇತರ ಪಡಿತರ ಚೀಟಿದಾರರು 1,67,000 ಹಾಗೂ 2,19,000.

**ಅಂತ್ಯೋದಯ :** ಈ ಯೋಜನೆಯನ್ನು ಜಿಲ್ಲೆಯ 5 ತಾಲೂಕುಗಳಾದ ಬ್ಯಾಡಗಿ, ಹಾನಗಲ್, ರಾಣೆಬೆನ್ನೂರು, ಕಲಘಟಗಿ ಹಾಗೂ ರೋಣಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿ ಆಯ್ಕೆಯಾದ ಕಡುಬಡವರಿಗೆ 1,000 ರೂ. ಹೆಚ್ಚಿನ ಸಹಾಯ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶ. 1990-91 ನೇ ಸಾಲಿನಲ್ಲಿ 500 ಫಲಾನುಭವಿಗಳಿಗೆ 5.00 ಲಕ್ಷ ರೂ. ಸಹಾಯಧನ ಒದಗಿಸಲಾಗಿದೆ.

**ದಶಲಕ್ಷ ಭಾವಿ ಯೋಜನೆ :** ಈ ಯೋಜನೆಯಂತೆ 1990-91 ರಲ್ಲಿ 272 ಭಾವಿಗಳನ್ನು ತೆಗೆಯಲಾಗಿದೆ. ಟ್ರೈಸಂ ಯೋಜನೆಯ ಅಡಿಯಲ್ಲಿ ವಿವಿಧ ಕಸುಬುಗಳನ್ನು 938 ಜನರಿಗೆ ತರಬೇತಿಯನ್ನು ಕೊಡಲಾಗಿದೆ ಹಾಗೂ 299 ಜನರಿಗೆ ಉಪಕರಣ ಖರೀದಿ ಮಾಡಲು ಸಹಾಯಧನ ಕೊಡಲಾಗಿದೆ.

**ಕರ್ನಾಟಕ ಭೂ ಸೇನಾ ನಿಗಮ :** ಕರ್ನಾಟಕ ಭೂ ಸೇನಾ ನಿಗಮ, ಬೆಂಗಳೂರು ಇದು ಗ್ರಾಮೀಣ ಅಭಿವೃದ್ಧಿಗೆ ಮೀಸಲಾದ ಸಂಸ್ಥೆ. ದಿನಾಂಕ 22.9.1981 ರಂದು ಧಾರವಾಡದಲ್ಲಿ ಕಾರ್ಯಾರಂಭ ಮಾಡಿತು. ನಿಗಮವು ನಿರ್ವಹಿಸಿದ ಕಾರ್ಯಗಳಲ್ಲಿ ಮುಖ್ಯವಾದ ಕೆಲವು ಕಾರ್ಯಗಳನ್ನು ಹೀಗಿವೆ : (1) 18 ಎನ್.ಜಿ.ಆರ್.ಜಿ. ಗೋದಾಮುಗಳು (17 ಲಕ್ಷ ರೂ.); (2) ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಕೆಲಸಗಳು (7 ಲಕ್ಷ ರೂ.); (3) ಹಾವೇರಿಯಲ್ಲಿ 3000 ಮೆಟ್ರಿಕ್ ಟನ್ ಸಾಮರ್ಥ್ಯದ ಒಂದು, ರಾಣೆಬೆನ್ನೂರು, ಅಣ್ಣಿಗೇರಿ, ಮತ್ತು ಕುಂದಗೋಳದಲ್ಲಿ ತಲಾ ಒಂದು 1000 ಮೆಟ್ರಿಕ್ ಟನ್ ಸಾಮರ್ಥ್ಯದ ಗೋದಾಮುಗಳನ್ನು ಒಟ್ಟು 23.5 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದೆ; (4) ಡಿಪಿಎಪಿ ಯೋಜನೆಯ 26 ಲಕ್ಷ ರೂ. ಕಾಮಗಾರಿ; (5) ಕೇಂದ್ರೀಯ ರೇಷ್ಮೆ ಸಂಶೋಧನಾ ಕೇಂದ್ರದ 12 ಕಾಮಗಾರಿಗಳು (23.72 ಲಕ್ಷ ರೂ.); (6) ಸಾಮಾಜಿಕ ಅರಣ್ಯ ಇಲಾಖೆಯ ಕಾಮಗಾರಿ (ರೂ.6.66 ಲಕ್ಷ); (7) ಜಿಲ್ಲೆ ಕೈಗಾರಿಕಾ ತರಬೇತಿ ಕೇಂದ್ರದ ಕಾಮಗಾರಿ (7.18 ಲಕ್ಷ ರೂ.); (8) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನರಗುಂದ (7.92 ಲಕ್ಷ ರೂ.); (9) ಕೃಷಿ ಇಲಾಖೆಯ ಆವರಣದಲ್ಲಿ ವಸ್ತು ಸಂಗ್ರಹಾಲಯ ಮತ್ತು ಮಾಹಿತಿ ಕೇಂದ್ರ (6.64 ಲಕ್ಷ ರೂ.); (10) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ (ರೂ.2 ಲಕ್ಷ); (11) ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ವಸತಿ ನಿಲಯಗಳ ನಿರ್ಮಾಣ (66.62 ಲಕ್ಷ ರೂ.); (12) ಎನ್.ಜಿ.ಇ.ಎಫ್. ಕಟ್ಟಡ ನಿರ್ಮಾಣ (102 ಲಕ್ಷ ರೂ.); (13) ಕರ್ನಾಟಕ ಎಣ್ಣೆ ಬೀಜ ನಿಗಮದ 7 ಉಗ್ರಾಣಗಳು (9 ಲಕ್ಷ ರೂ.); (14)

ಮಹಿಳೆಯರ ತರಬೇತಿ ಕೇಂದ್ರ (ರೂ.20 ಲಕ್ಷ); (15) ಎನ್.ಸಿ.ಡಿ.ಸಿ. ಗೋದಾಮು (20 ಲಕ್ಷ ರೂ.); ಮತ್ತು (16) ಡಾ: ಅಂಬೇಡ್ಕರ ಚಾರಿಟಬಲ್ ಟ್ರಸ್ಟ್ ಯೋಜನೆಯಲ್ಲಿ ಕಟ್ಟಡ ನಿರ್ಮಾಣ (ರೂ. 94.85 ಲಕ್ಷ).

## ಅಭಿವೃದ್ಧಿಯ ಸಾಧ್ಯತೆಗಳು

ಜಿಲ್ಲೆಯಲ್ಲಿ ದೊರೆಯುವ ಕೃಷಿ, ಅರಣ್ಯ, ಜಾನುವಾರು ಮತ್ತು ಇತರ ಸಂಪನ್ಮೂಲಗಳನ್ನು ಪರಿಗಣಿಸಿ, ಗ್ರಾಮೀಣ ಹಾಗೂ ಪಟ್ಟಣ ಪ್ರದೇಶದಲ್ಲಿ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಸಾಕಷ್ಟು ಅವಕಾಶಗಳಿವೆ ಎಂದು ತಿಳಿಯಬಹುದು. ಕೈಗಾರಿಕಾ ಇಲಾಖೆಯಿಂದ ನಡೆಸಿದ ಕೆಲವು ಪರಿವೀಕ್ಷಣೆಗಳಿಂದ, ಕೆಲವು ಪ್ರವೃದ್ಧಮಾನಕ್ಕೆ ಬರಬಹುದಾದ ಕೇಂದ್ರಗಳನ್ನು ಗುರುತಿಸಲಾಗಿದೆ. ಇವುಗಳನ್ನು ಗುರುತಿಸುವಾಗ, ಕೈಗಾರಿಕಾ ಅಭಿವೃದ್ಧಿಯನ್ನು ಪಟ್ಟಣ ಪ್ರದೇಶದಿಂದ ಗ್ರಾಮೀಣ ಪ್ರದೇಶಕ್ಕೆ ವರ್ಗಾಯಿಸುವ ದೃಷ್ಟಿಯನ್ನು ಹೆಚ್ಚಾಗಿ ಪರಿಗಣಿಸಲಾಗಿದೆ. ಈ ದಿಸೆಯಲ್ಲಿ ಈ ಕೆಳಗೆ ಕೊಟ್ಟಿರುವ ಕೆಲವು ಕೈಗಾರಿಕೆಗಳ ಸ್ಥಾಪನೆಗೆ ಇರುವ ಸಾಧ್ಯತೆ ಮತ್ತು ಅವಕಾಶಗಳನ್ನು ಅಗತ್ಯಗಳ ಸಂಪನ್ಮೂಲಗಳ ಮತ್ತು ಕೌಶಲ್ಯಗಳ ಉಪಲಬ್ಧತೆಗೆ ಅನುಗುಣವಾಗಿ ಮಾಡಲಾಗಿದೆ.

**ಕೃಷಿ ಆಧಾರಿತ** : ಹತ್ತಿ ಸಂಸ್ಕರಣೆ, ಸುಧಾರಿತ ಬೇಳೆಯಂತ್ರ, ಹಿಟ್ಟು ಬೀಸುವ ಯಂತ್ರ, ಜೋಳದ ಶುದ್ಧೀಕರಣ, ಎಣ್ಣೆ ತೆಗೆಯುವಿಕೆ, ಹೀರಿಕೊಳ್ಳುವ ಹತ್ತಿ, ಮೆಣಸಿನ ಪುಡಿ, ಹಾಲಿನ ಪುಡಿ ತಯಾರಿಕೆ, ರವೆ ಮಾಡುವ ಯಂತ್ರ, ಬೀಜ ಸಂಸ್ಕರಣ, ಬೇಕರಿ ಪದಾರ್ಥಗಳು ಇತ್ಯಾದಿ.

**ಅರಣ್ಯ ಉತ್ಪನ್ನ ಆಧಾರಿತ** : ಮರದ ಫೋಟೋಫ್ರೇಂಗಳು, ಕಿಟಕಿ, ಬಾಗಿಲು ಮುಂತಾದವುಗಳ ತಯಾರಿಕೆ, ಮರದ ಪ್ಯಾಕ್ ಮಾಡುವ ಪೆಟ್ಟಿಗೆಗಳು, ದಪ್ಪ ಹಲಗೆ, ಮರದ ಬಾಬಿನ್ನುಗಳು, ಬಡಗಿಗೆ ಬೇಕಾದ ವಸ್ತುಗಳು, ಕೃಷಿ, ಸಾಧನಗಳು ಇತ್ಯಾದಿ.

**ಬಟ್ಟೆ ಆಧಾರಿತ** : ಕೈಮಗ್ಗ, ಯಂತ್ರದ ಮಗ್ಗ, ಸ್ಪಿನ್ನಿಂಗ್ ಕಾರ್ಖಾನೆಗಳು, ಹತ್ತಿಯ ನೂಲು, ಉಣ್ಣೆ ವಸ್ತುಗಳು ಮತ್ತು ಸಿದ್ಧಪಡಿಸಿದ ವಸ್ತುಗಳನ್ನು ತಯಾರಿಸುವುದು.

**ಖನಿಜ ಆಧಾರಿತ** : ಕಲ್ಲುಪಾಲೀಶ ಮಾಡುವಿಕೆ, ಬಣ್ಣದ ಪೆನ್ಸಿಲ್ಲು ತಯಾರಿಕೆ ಇತ್ಯಾದಿ.

**ಇಂಜಿನಿಯರಿಂಗ್ ಆಧಾರಿತ** : ಸಾಮಾನ್ಯ ಇಂಜಿನೀಯರಿಂಗ್ ವರ್ಕ್ಸ್, ಟ್ರ್ಯಾಕ್ಟರ್ ಮತ್ತು ಇತರ ವಾಹನಗಳ ದುರಸ್ತಿ, ಉಕ್ಕಿನ ಗೃಹ ಬಳಕೆ ವಸ್ತುಗಳು, ಬೋಲ್ಟ್‌ಗಳು, ನಟ್ಟುಗಳು, ಟಿನ್ ಇತ್ಯಾದಿ.

**ಜಾನುವಾರು ಆಧಾರಿತ** : ಚರ್ಮದ ವಸ್ತುಗಳ ತಯಾರಿಕೆ, ಕೈಚೀಲಗಳು, ಚರ್ಮದ ಉಡುಪುಗಳು, ಚರ್ಮ ಶುದ್ಧೀಕರಣ, ಪಶುಗಳ ಮೇವು, ಹಾಲಿನ ಪದಾರ್ಥಗಳು, ಮತ್ತು ಮೂಳೆ ಗೊಬ್ಬರ ಇತ್ಯಾದಿ.

**ಕಟ್ಟಡ ಸಾಮಗ್ರಿ ಆಧಾರಿತ** : ಇಟ್ಟಿಗೆ, ಕಲ್ಲುಗಳ ಒಡೆಯುವಿಕೆ, ಕಿಟಕಿಗಳಿಗೆ ಬೇಕಾದ ವಸ್ತುಗಳು, ನೆಲಕ್ಕೆ ಹಾಸುವ ಚಪ್ಪಡಿ ಇತ್ಯಾದಿ.

**ರಾಸಾಯನಿಕ ಮತ್ತು ಪ್ಲಾಸ್ಟಿಕ್ ಆಧಾರಿತ** : ಸಾಬೂನು, ಸಾಬೂನುಪುಡಿ, ಅಗರ ಬತ್ತಿ, ಬಣ್ಣ (ಪೇಯಿಂಟ್), ಟೈರುಗಳ ರೀಟ್ರೇಡಿಂಗ್, ಮೇಣದ ಬತ್ತಿ, ಮೇಣಲೇಪಿತ ಕಾಗದ, ಮಸಿ, ಹಲ್ಲುಪುಡಿ, ಐಸ್‌ಕ್ಯಾಂಡಿ, ವಿದ್ಯುತ್ ಲೇಪನ, ಮೈಲುತುತ್ತ, ಎರಕ ಹೊಯ್ದ ವಸ್ತುಗಳು, ಪಾಲಿಥೀನ್ ಚೀಲಗಳು, ಪಿ.ವಿ.ಸಿ. ಕೊಳವೆಗಳು ಇತ್ಯಾದಿ.

ವೈಯಕ್ತಿಕ ಉದ್ಯೋಗಗಳಾದಲ್ಲಿ ಬಹು ಪ್ರತಿ ಛಾಯಾಗ್ರಾಹಕ, ಪ್ಲಾಸ್ಟಿಕ್ ಗುಂಡಿ ತಯಾರಿಕೆ, ಮುದ್ರಕ, ರೇಡಿಯೋ ದುರಸ್ತಿ, ದೂರದರ್ಶನ ದುರಸ್ತಿ, ಕಾಗದ ಚೀಲಗಳು, ಆಸ್ಪತ್ರೆ ಉಪ ಕರಣಗಳು, ಬ್ಯಾಟರಿ ಬಲ್ಬುಗಳು, ಮಾದಕ ಪಾನೀಯಗಳು, ಕ್ರೀಡಾವಸ್ತುಗಳು, ಬಣ್ಣ ಹಚ್ಚಿದ ಅಡಿಕೆ ಇತ್ಯಾದಿ.

ಜಿಲ್ಲೆಯಲ್ಲಿ ಕೆಲವು ಪ್ರದೇಶಗಳಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಇರುವ ಅವಕಾಶದ ಕಲ್ಪನೆಯನ್ನು ಇಲ್ಲಿ ಸ್ಥೂಲವಾಗಿ ಕೊಡಲಾಗಿದೆ:

(1) ಧಾರವಾಡ - ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ, ಪ್ಲಾಸ್ಟಿಕ್ ವಸ್ತುಗಳು, ಪೈಂಟ್‌ಗಳು, ಪೇಪರ್ ಚೀಲಗಳು, ದೂರದರ್ಶನ ಯಂತ್ರಗಳು, ವಿದ್ಯುತ್ ರಿಲೇ ಉಪಕರಣಗಳು, ಫಿನೈಲ್, ಜಮಖಾನೆ ಇತ್ಯಾದಿ.

(2) ಅಳ್ನಾವರ - ಸಣ್ಣ ಪ್ರಮಾಣದ ಕೈಗಾರಿಕೆ, ಮರದ ಪ್ಯಾಕಿಂಗ್, ಪೆಟ್ಟಿಗೆಗಳು, ಗೃಹೋಪಕರಣಗಳು, ಮರ ಕೊಯ್ಯುವ ಯಂತ್ರ, ಐಸ್‌ಕ್ಯಾಂಡಿ ಮಾಡುವುದು ಇತ್ಯಾದಿ.

(3) ಹೆಬ್ಬಳ್ಳಿ - ಸಣ್ಣ ಪ್ರಮಾಣದ ಕೈಗಾರಿಕೆ, ಕೃಷಿ ಉಪಕರಣ, ಹತ್ತಿ ಸಂಸ್ಕರಣೆ, ಸಾಮಾನ್ಯ ಇಂಜಿನೀಯರಿಂಗ್, ಚರ್ಮದ ಪಾದರಕ್ಷೆ, ಸಿದ್ಧ ಉಡುಪುಗಳು ಇತ್ಯಾದಿ.

(4) ಉಪ್ಪಿನ ಬೆಟಗೇರಿ - ಸಣ್ಣ ಪ್ರಮಾಣದ ಕೈಗಾರಿಕೆ, ಕೃಷಿ ಸಾಧನಗಳು, ಸಾಬೂನು, ಖಾದಿ ಮಂಡಳಿಯಿಂದ ಖಾದಿ ಬಟ್ಟೆ ನೇಯ್ಗೆ ಇತ್ಯಾದಿ.

(5) ಅಮ್ಮಿನಭಾವಿ - ಸಣ್ಣ ಪ್ರಮಾಣದ ಕೈಗಾರಿಕೆ, ಹತ್ತಿ ಸಂಸ್ಕರಣೆ, ಮುದ್ರಣಾಲಯ, ಚರ್ಮದ ಪಾದರಕ್ಷೆ, ಸಾಬೂನು ಇತ್ಯಾದಿ.

(6) ಗದಗ - ಸಣ್ಣ ಪ್ರಮಾಣದ ಕೈಗಾರಿಕೆ, ಚರ್ಮ ಹದಮಾಡುವಿಕೆ, ಪಾಲಿಯಸ್ಟರ್ ಘಟಕ.

(7) ಬ್ಯಾಡಗಿ - ಸಣ್ಣ ಪ್ರಮಾಣದ ಕೈಗಾರಿಕೆ, ಪಶು ಆಹಾರ, ಸಾಬೂನು.

(8) ಹುಬ್ಬಳ್ಳಿ - ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ, ವಿದ್ಯುತ್ ಆಟೋಮೊಬೈಲ್ ಕೈಗಾರಿಕೆಗಾಗಳಿಗೆ ಬಿಡಿ ಭಾಗಗಳ ತಯಾರಿಕೆ, ಹತ್ತಿ ಬೀಜದ ಎಣ್ಣೆ, ಬ್ಯಾಟರಿ, ಮೊಸೈಕ್ ನೆಲಹಾಸುಗಳು, ಸ್ಕ್ರೀನ್ ಪ್ರಿಂಟಿಂಗ್, ಅಲ್ಯೂಮಿನಿಯಮ್ ಪಾತ್ರೆಗಳು, ಸೌರ ಒಲೆ ಇತ್ಯಾದಿ.

(9) ಬ್ಯಾಹಟ್ಟಿ - ಸಣ್ಣ ಪ್ರಮಾಣದ ಕೈಗಾರಿಕೆ ಮರಕೊಯ್ಯುವ ಯಂತ್ರ, ಹತ್ತಿ ಸಂಸ್ಕರಣೆ, ಬೇಕರಿ, ಸಿದ್ದ ಉಡುಪುಗಳು.

(10) ಬಿ. ಅರಳಿಕಟ್ಟಿ - ಸಿದ್ದಪಡಿಸಿದ ಉಡುಪು, ಹಪ್ಪಳ, ಶಾವಿಗೆ, ಸುಣ್ಣ ಇತ್ಯಾದಿ.

(11) ಹೆಬ್ಸೂರು - ಸಣ್ಣ ಪ್ರಮಾಣದ ಕೈಗಾರಿಕೆ, ಹತ್ತಿ ಸಂಸ್ಕರಣೆ, ಮುದ್ರಣ, ಶೇಂಗಾ ಬೀಜ ಸಂಸ್ಕರಣೆ, ಮುದ್ರಣ, ಇತ್ಯಾದಿ.

(12) ಶೇರೇವಾಡ ಮತ್ತು ಬುಡಿವಾಡ - ಸಣ್ಣ ಪ್ರಮಾಣದ ಕೈಗಾರಿಕೆ, ಹತ್ತಿ ಸಂಸ್ಕರಣೆ, ಮೆಣಸಿನಪುಡಿ ಮತ್ತು ರವೆ ತಯಾರಿಕೆ.

(13) ಮಿಶ್ರಿಕೋಟಿ - ಸಣ್ಣ ಪ್ರಮಾಣದ ಕೈಗಾರಿಕೆ, ಹಲ್ಲುಪುಡಿ, ಚರ್ಮ ಕೈಗಾರಿಕೆ, ಸೀಗೆಪುಡಿ, ಪಶು ಆಹಾರ ಇತ್ಯಾದಿ.

(14) ಕಲಘಟಗಿ - ಸಣ್ಣ ಪ್ರಮಾಣದ ಕೈಗಾರಿಕೆ, ಸೀಗೆಪುಡಿ, ಬೆಂಕಿಪೆಟ್ಟಿಗೆ, ಮರದ ಪೀಠೋಪಕರಣಗಳು, ಬೇಕರಿ ಪದಾರ್ಥಗಳು.

(15) ಹೀರೆಹೊನ್ನಳ್ಳಿ - ಸಣ್ಣ ಪ್ರಮಾಣದ ಕೈಗಾರಿಕೆ, ಕೃಷಿ ಉಪಕರಣ.

(16) ಧುಮ್ಮವಾಡ - ಸಣ್ಣ ಪ್ರಮಾಣದ ಕೈಗಾರಿಕೆ, ಕಲ್ಲು ಒಡೆಯುವುದು, ಇಟ್ಟಿಗೆ, ಇತ್ಯಾದಿ.

(17) ಮೊರಬ - ಸಣ್ಣ ಪ್ರಮಾಣದ ಕೈಗಾರಿಕೆ, ಕೃಷಿ ಉಪಕರಣ, ವಿದ್ಯುತ್ ಗಾಣ, ರವೆ.

(18) ಅಳಗವಾಡಿ - ಸಣ್ಣ ಪ್ರಮಾಣದ ಕೈಗಾರಿಕೆ, ಕೃಷಿ ಸೇವಾ ಕೇಂದ್ರ, ವಿದ್ಯುತ್‌ಗಾಣ.

(19) ನವಲಗುಂದ ಪಟ್ಟಣ - ಸಣ್ಣ ಪ್ರಮಾಣದ ಕೈಗಾರಿಕೆ, ಗೋದಿ ರವೆ, ಕೃಷಿ ಉಪಕರಣ ಇತ್ಯಾದಿ.

(20) ಅಣ್ಣಿಗೇರಿ - ದೊಡ್ಡ ಮಧ್ಯಮ ಪ್ರಮಾಣದ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆ, ಹತ್ತಿನೂಲು, ಹತ್ತಿ ಬೀಜದ ಎಣ್ಣೆ, ಕೃಷಿ ಉಪಕರಣ, ಎಣ್ಣೆಗಿರಣಿ, ಮುದ್ರಣ ಯಂತ್ರ.

## ಕೋಷ್ಟಕ 8.30 : ಧಾರವಾಡ ಜಿಲ್ಲೆಯಲ್ಲಿ 1960-61 ರಿಂದ 1990-91 ರವರೆಗೆ
## (ಅ) ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯ ಪಟ್ಟಿ

| ಕ್ರಸಂ. | ವಿಷಯ | ಘಟಕ | 1960-61 | 70-71 | 80-81 | 90-91 |
|---|---|---|---|---|---|---|
| 1 | ಒಟ್ಟು ಜನಸಂಖ್ಯೆಯಲ್ಲಿ ಕೆಲಸಗಾರರು | ಶೇ. | 42 | 35 | 42 | 39 |
| 2 | ಒಟ್ಟು ಕೆಲಸಗಾರರಲ್ಲಿ ವ್ಯವಸಾಯದಲ್ಲಿ ತೊಡಗಿದವರು | " | 72 | 68 | 67 | 69 |
| 3 | ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಅರಣ್ಯ ಪ್ರದೇಶ | " | 8 | 8 | 8 | 8 |
| 4 | ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಒಟ್ಟು ಬಿತ್ತನೆ ಪ್ರದೇಶ | " | 81 | 81 | 80 | 70 |
| 5 | ಒಟ್ಟು ಬಿತ್ತನೆ ಪ್ರದೇಶದಲ್ಲಿ ನಿವ್ವಳ ಬಿತ್ತನೆ ಪ್ರದೇಶ | " | 96 | 95 | 95 | 84 |
| 6 | ತಲಾ ಬಿತ್ತನೆಯಾದ ಪ್ರದೇಶ | ಹೆಕ್ಟೇರ್ | 0.59 | 0.49 | 0.39 | 0.32 |
| 7 | ವ್ಯವಸಾಯಗಾರರಲ್ಲಿ ತಲಾ ಬಿತ್ತನೆ ಪ್ರದೇಶ | " | 3.1 | 4.6 | 4.3 | 3.9 |
| 8 | ನಿವ್ವಳ ಬಿತ್ತನೆ ಪ್ರದೇಶದಲ್ಲಿ ನಿವ್ವಳ ನೀರಾವರಿಯಾದ ಪ್ರದೇಶ | ಶೇ. | 5.19 | 6 | 8 | 15 |
| 9 | ಒಟ್ಟು ಬಿತ್ತನೆ ಪ್ರದೇಶದಲ್ಲಿ ಒಟ್ಟು ನೀರಾವರಿಯಾದ ಪ್ರದೇಶ | " | 5 | 6 | 9 | 14 |
| 10 | ಒಟ್ಟು ಬಿತ್ತನೆಯಲ್ಲಿ ಅಧಿಕ ಇಳುವರಿ ತಳಿಗಳ ಪ್ರದೇಶ | " | ಲ.ವಿ.* | 0.1 | ಲ.ವಿ. | 16 |
| 11 | ಒಟ್ಟು ಬಿತ್ತನೆಯಲ್ಲಿ ಏಕದಳ ಧಾನ್ಯಗಳ ಪ್ರದೇಶ | " | 47 | 46 | 43 | 39 |
| 12 | ಒಟ್ಟು ಬಿತ್ತನೆಯಲ್ಲಿ ದ್ವಿದಳ ಧಾನ್ಯಗಳ ಪ್ರದೇಶ | " | 10 | 10 | 11 | 15 |
| 13 | ಒಟ್ಟು ಬಿತ್ತನೆಯಲ್ಲಿ ಎಣ್ಣೆಕಾಳುಗಳ ಪ್ರದೇಶ | " | 15.6 | 12.33 | 24.51 | 21.77 |
| 14 | ಒಟ್ಟು ಬಿತ್ತನೆಯಲ್ಲಿ ಹತ್ತಿಯ ಪ್ರದೇಶ | " | 22 | 22 | 22 | 15 |
| 15 | ಒಟು ಬಿತ್ತನೆಯಲ್ಲಿ ಕಬ್ಬಿನ ಪ್ರದೇಶ | " | 0.08 | 0.12 | 0.21 | 0.29 |
| 16 | ರಸಾಯನಿಕ ಗೊಬ್ಬರದ ಬಳಕೆ | ಕಿಜಿ\ಹೆ. | ಲ.ವಿ. | 5.7 | ಲ.ವಿ. | 6 |
| 17 | ಅಕ್ಕಿಯ ಉತ್ಪತ್ತಿ | " | 999 | 1372 | 1887 | 848 |
| 18 | ಜೋಳದ ಉತ್ಪತ್ತಿ | " | 640 | 886 | 1,145 | 620 |
| 19 | ರಾಗಿಯ ಉತ್ಪತ್ತಿ | " | 1,497 | 891 | 877 | 780 |
| 20 | ತೊಗರಿ ಉತ್ಪತ್ತಿ | " | 389 | 591 | 341 | 176 |
| 21 | ನೆಲಗಡಲೆಯ ಉತ್ಪತ್ತಿ ಕಿಜಿ. | ಹೆ. | 391 | 712 | 636 | 519 |

| ಕ್ರ.ಸಂ. | ವಿಷಯ | ಘಟಕ | 1960-61 | 70-71 | 80-81 | 90-91 |
|---|---|---|---|---|---|---|
| 22 | ಹತ್ತಿಯ ಉತ್ಪತ್ತಿ | " | 82 | 68 | 114 | 148 |
| 23 | ತಲಾ ಆದಾಯ ಚಾಲ್ತಿ ಬೆಲೆಗಳಲ್ಲಿ | ರೂ. | ಲವಿ | 572 | 1350 | 3238 |
| 24 | ತಲಾ ಆದಾಯ ಸ್ಥಿರ ಬೆಲೆಗಳಲ್ಲಿ | " | " | 572 | 1350 | 1790 |
| 25 | ವ್ಯವಸಾಯ ವಲಯದಲ್ಲಿ ತಲಾ ವರಮಾನ ಚಾಲ್ತಿ ಬೆಲೆಗಳಲ್ಲಿ | " | " | 273 | 580 | 1121 |
| 26 | ವ್ಯವಸಾಯ ವಲಯದಲ್ಲಿ ತಲಾ ವರಮಾನ ಸ್ಥಿರ ಬೆಲೆಗಳಲ್ಲಿ | " | " | 273 | 580 | 657 |
| 27 | ನಿಯಂತ್ರಿತ ಮಾರುಕಟ್ಟೆಯಲ್ಲಿನ ವ್ಯವಹಾರ ಮೌಲ್ಯ | ಕೋಟಿ ರೂ. | ಲವಿ | ಲವಿ | ಲವಿ | 277 |

(ಆಧಾರ : ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ. ಧಾರವಾಡ ಜಿಲ್ಲಾ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ ಪುಟ 27)

## ಕೋಷ್ಟಕ 8.31 : ಧಾರವಾಡ ಜಿಲ್ಲೆಯಲ್ಲಿನ 1992-93 ರಲ್ಲಿ ಇದ್ದಂತೆ ಕೆಲವು ಮುಖ್ಯ ಮಾಹಿತಿಗಳು. (ತಾಲೂಕುವಾರು)

| ಕ್ರಮ ಸಂಖ್ಯೆ | ವಿವರ | ಬ್ಯಾಡಗಿ | ಧಾರವಾಡ | ಗದಗ | ಹಾನಗಲ್ | ಹಾವೇರಿ | ಹಿರೇಕೆರೂರು | ಹುಬ್ಬಳ್ಳಿ | ಕಲಘಟಗಿ | ಕುಂದಗೋಳ | ಮುಂಡರಗಿ | ನರಗುಂದ | ನವಲಗುಂದ | ರಾಣೆಬೆನ್ನೂರು | ರೋಣ | ಸವಣೂರು | ಶಿಗ್ಗಾವಿ | ಶಿರಹಟ್ಟಿ | ಮೊತ್ತ |
|---|---|---|---|---|---|---|---|---|---|---|---|---|---|---|---|---|---|---|---|
| 1 | ಒಟ್ಟು ಜನಸಂಖ್ಯೆಗೆ ಮುಖ್ಯ ಕೆಲಸಗಾರರ ಶೇಕಡಾ | 39.89 | 39.75 | 38.97 | 37.97 | 39.91 | 36.96 | 16.12 | 37.62 | 44.83 | 44.00 | 40.53 | 52.54 | 40.44 | 41.15 | 40.02 | 38.74 | 41.67 | 37.92 |
| 2 | ಒಟ್ಟು ಜನಸಂಖ್ಯೆಗೆ ಮಾರ್ಜಿನಲ್ ಕೆಲಸಗಾರರ ಶೇಕಡಾ | 6.95 | 3.62 | 3.63 | 3.32 | 5.54 | 5.22 | 13.53 | 6.90 | 4.40 | 3.15 | 7.19 | 5.83 | 4.76 | 6.86 | 13.25 | 4.10 | 2.97 | 3.01 |
| 3 | ಒಟ್ಟು ಜನಸಂಖ್ಯೆಗೆ ಕೆಲಸಗಾರರಲ್ಲದವರ ಶೇಕಡಾ | 53.15 | 56.62 | 57.40 | 58.71 | 54.55 | 57.82 | 70.35 | 55.40 | 50.69 | 52.85 | 52.20 | 51.63 | 55.10 | 51.99 | 46.63 | 57.14 | 14.55 | 58.27 |
| 4 | ಕೆಲಸಗಾರರ ಸಂಖ್ಯೆ | 37,226 | 63,696 | 99,105 | 64,734 | 72,510 | 59,971 | 1,85,613 | 37,440 | 57,105 | 58,518 | 27,761 | 58747 | 87,853 | 79,758 | 41,822 | 47,231 | 58,036 | 1,17,717 |
| 5 | ಕೃಷಿಕರ ಸಂಖ್ಯೆ | 13,801 | 26,747 | 24,307 | 26,690 | 21,479 | 26,834 | 22,715 | 18,292 | 22,118 | 13,967 | 11,271 | 22,099 | 25,389 | 27219 | 12,486 | 17,090 | 17,090 | 3,48,518 |
| 6 | ಕೃಷಿ ಕೆಲಸಗಾರರು | 16,392 | 28,796 | 34,071 | 27,833 | 33,934 | 22,806 | 29,817 | 13,116 | 28,439 | 17,775 | 9,384 | 26,672 | 32,361 | 37,029 | 22,092 | 20,789 | 28,773 | 4,27,169 |
| 7 | ಸಾಗುವಳಿ ಮಾಡಿದ ಜಮೀನು (ಹೆಕ್ಟೇರುಗಳಲ್ಲಿ)(ನಿವ್ವಳ) | 33,010 | 77,660 | 1,00,993 | 51,296 | 65,735 | 59,060 | 63,907 | 41,492 | 60,393 | 62,000 | 38,598 | 1,04,605 | 69,367 | 1,17,652 | 48,631 | 40,059 | 73,005 | 11,08,290 |
| 8 | ಬೀಳು ಜಮೀನು (ಹೆ) | 316 | 5,134 | 1,996 | 5,350 | 1,862 | 2,772 | 1,034 | 1,610 | 1,915 | 3886 | 2,743 | 225 | 1,160 | 2,990 | 61 | 3,000 | 2,246 | 39,393 |
| 9 | ಸಾಗುವಳಿಗೆ ಯೋಗ್ಯವಾದ ಬಂಜರು ಜಮೀನು(ಹೆ) | 1,583 | 10,240 | 1,513 | 4,138 | 3,118 | 2,999 | 732 | 1,494 | 601 | 146 | 58 | 69 | 3,007 | 806 | 895 | 1,835 | 1,015 | 34,629 |
| 10 | ಅರಣ್ಯ (ಹೆ) | 4,889 | 18,554 | 1,749 | 8,474 | 3,849 | 8,876 | 2,033 | 19,526 | - | 17,646 | - | - | 10,614 | 276 | 801 | 9,915 | 12,943 | 11,51,181 |
| 11 | ಸಾಗುವಳಿಗೆ ಯೋಗ್ಯವಲ್ಲದ ಬಂಜರು (ಹೆ) | 340 | 2,473 | 291 | 735 | 751 | 30 | 793 | 799 | 173 | 163 | - | 61 | 197 | 316 | 434 | 731 | 186 | 7,755 |
| ಎ) | ವಿವಿಧ ಬೆಳೆಗಳು ಬೆಳೆಯುವ ವಿಸ್ತೀರ್ಣ (ಹೆ) | | | | | | | | | | | | | | | | | | |
| 12 | ಭತ್ತ | 2,467 | 12,667 | 256 | 25,775 | 1,094 | 6,168 | 1,465 | 21,242 | 402 | 163 | 115 | 246 | 988 | 95 | 168 | 8,392 | 290 | 81,993 |
| 13 | ರಾಗಿ | 202 | 139 | 153 | 1,498 | 836 | 4,521 | 141 | 25 | 228 | - | - | - | 1,034 | - | 110 | 398 | 9 | 9,294 |
| 14 | ಜೋಳ | 6,998 | 20,774 | 27,681 | 3,791 | 21,007 | 14,080 | 13,373 | 4,054 | 9,715 | 15,993 | 9,972 | 23,494 | 21,070 | 34,610 | 13,624 | 6,948 | 19,695 | 2,56,895 |
| 15 | ನೆಲಗಡಲೆ | 1,488 | 8,994 | 14,000 | 1,746 | 5,589 | 6,310 | 7,223 | 1,380 | 10,071 | 12,905 | 491 | 6,887 | 2,727 | 24,392 | 9,990 | 4,624 | 26,409 | 1,45,326 |
| 16 | ಕಾಳುಗಳು | 3,524 | 13,381 | 21,594 | 3,429 | 9,052 | 10,481 | 7,854 | 1,865 | 3,350 | 4,665 | 712 | 17,336 | 5,025 | 20,903 | 5,850 | 2,435 | 6,574 | 1,41,030 |
| 17 | ಕಬ್ಬು | 321 | 1,084 | 39 | 1,485 | 150 | 272 | 28 | 96 | 1 | 2 | 34 | - | 131 | 3 | 50 | 187 | 26 | 3,909 |
| 18 | ಹತ್ತಿ | 5,425 | 17,391 | 13,786 | 7,927 | 20,289 | 14,729 | 16,255 | 8,581 | 17,232 | 7,798 | 14,855 | 23,504 | 12,104 | 14,804 | 18,464 | 8,881 | 11,025 | 2,33,049 |
| 19 | ಆಲೂಗಡ್ಡೆ | - | 7,475 | - | - | - | - | 1,144 | 87 | 126 | - | - | - | - | - | 15 | 170 | - | 9,026 |

| ಕ್ರಮ ಸಂಖ್ಯೆ | ವಿವರ | ಬ್ಯಾಡಗಿ | ಧಾರವಾಡ | ಗದಗ | ಹಾನಗಲ್ | ಹಾವೇರಿ | ಹಿರೇಕೆರೂರು | ಹುಬ್ಬಳ್ಳಿ | ಕಲಘಟಗಿ | ಕುಂದಗೋಳ | ಮುಂಡರಗಿ | ನರಗುಂದ | ನವಲಗುಂದ | ರಾಣೆಬೆನ್ನೂರು | ರೋಣ | ಸವಣೂರು | ಶಿಗ್ಗಾವಿ | ಶಿರಹಟ್ಟಿ | ಮೊತ್ತ |
|---|---|---|---|---|---|---|---|---|---|---|---|---|---|---|---|---|---|---|---|
| 20 | ಹಿಪ್ಪುನೇರಳೆ | 81 | 54 | 71 | 59 | 57 | 87 | 78 | 12 | - | 81 | 6 | - | 176 | 96 | 43 | 40 | 113 | 1,054 |
| 21 | ಹಣ್ಣುಗಳು | 22 | 1,291 | 33 | 482 | 36 | 45 | 106 | 49 | 17 | 46 | 29 | 2 | 39 | 13 | 41 | 33 | 10 | 2,994 |
| 22 | ಕೃಷಿಗಾಗಿ ವಿದ್ಯುತ್ (ಐಪಿ ಸೆಟ್ಟುಗಳು) | 1,685 | 1,510 | 1,717 | 1,760 | 2,017 | 2,904 | 1,164 | 726 | 96 | 2,230 | 535 | 592 | 4,672 | 3,091 | 1,211 | 674 | 1,716 | 20,100 |
| | ಕೈಗಾರಿಕೆಗಳು | | | | | | | | | | | | | | | | | | |
| 23 | ಅತಿದೊಡ್ಡ ಮತ್ತು ಮಧ್ಯಮ | - | 14 | 6 | - | 1 | - | 14 | 1 | - | - | 1 | 1 | 5 | - | - | - | - | 43 |
| 24 | ಸಣ್ಣ ಕೈಗಾರಿಕೆ (ಎಸ್‌ಎಸ್‌ಐ) | 9 | 74 | 115 | 25 | 68 | 33 | 272 | 26 | 24 | 33 | 15 | 12 | 77 | 40 | 32 | 27 | 28 | 910 |
| 25 | ಕೈಗಾರಿಕಾ ವಸಾಹತುಗಳು | - | 1 | 1 | - | - | - | 1 | - | - | - | - | - | 1 | - | - | - | - | 4 |
| 26 | ಕೈಗಾರಿಕಾ ಶೆಡ್ಡುಗಳು | - | 16 | 12 | - | - | - | 378 | - | - | - | - | - | 4 | - | - | - | - | 410 |

(ಆಧಾರ : ಜಿಲ್ಲಾ ಪತ್ತಿನ ಯೋಜನೆ - 92-93 - ವಿಜಯಾ ಬ್ಯಾಂಕ್)